Topexams
ಸಾಮಾನ್ಯ ಕನ್ನಡ | Hand Book
ಸ್ಪರ್ಧಾರ್ಥಿಗೊಂದು ಕೈಪಿಡಿ

The Best 1 Edition

## ಪರೀಕ್ಷೆಗೆ ಎಷ್ಟು ಬೇಕೋ ಅಷ್ಟೇ!

# ಸಾಮಾನ್ಯ ಕನ್ನಡ

**ಅಭ್ಯಾಸವಾರು ಪ್ರಶ್ನೋತ್ತರಗಳೊಂದಿಗೆ ಕನ್ನಡ ವ್ಯಾಕರಣ, ಸಾಹಿತ್ಯ & ಕಾವ್ಯ ಮೀಮಾಂಸೆ**

**FDA | SDA | GROUP C | K-TET | GPSTR | HSTR**

PDO, KSET, ಅಬಕಾರಿ, ಕಡ್ಡಾಯ ಕನ್ನಡ ಪರೀಕ್ಷೆಯೊಂದಿಗೆ ಎಲ್ಲಾ ಸ್ಪರ್ಧಾತ್ಮಕ ಪರೀಕ್ಷೆಗಳಿಗೂ ಉಪಯುಕ್ತ

- ವ್ಯಾಕರಣ
- ಪದ ಸಂಪತ್ತು
- ಛಂದಸ್ಸು
- ಅಲಂಕಾರ
- ಸಾಹಿತ್ಯ
- ಕಾವ್ಯ ಮೀಮಾಂಸೆ

## KEY FEATURES

- ವಿಶೇಷ ಸಮನಾರ್ಥಕ ಪದಗಳು
- 2190+ ಸಮನಾರ್ಥಕ ಪದಗಳು
- 637 ನಾನಾರ್ಥಕ ಪದಗಳು
- ವಿರುದ್ಧಾರ್ಥಕ ಪದಗಳು
- ಸಂಕುಚಿತ ಮತ್ತು ವಿಕಸಿತ ಪದಗಳು
- ಅಚ್ಚಕನ್ನಡ ಪದಗಳನ್ನು ಗುರುತಿಸಲು ಸರಳ ವಿಧಾನ
- ಸಂಸ್ಕೃತ ಪದಗಳನ್ನು ಗುರುತಿಸಲು ಸರಳ ವಿಧಾನ
- ಅತಿ ಹೆಚ್ಚು ತತ್ಸಮ ಮತ್ತು ತದ್ಭವ ಪದಗಳ ಸಂಗ್ರಹ
- ಅತಿ ಮುಖ್ಯ ಅನ್ಯದೇಶಿಯ ಪದಗಳು
- 653 ನುಡಿಗಟ್ಟುಗಳು (ಖಚಿತ ಅಂಕಗಳು)
- ದ್ವಿರುಕ್ತಿಗಳ & ಜೋಡುನುಡಿಗಳು ಸಂಗ್ರಹ
- 13 ಪ್ರಕಾರದ ವಾಕ್ಯಗಳು
- ಅನುಕರಣಾವ್ಯಯಗಳ ಸಂಗ್ರಹ
- ಗ್ರಾಮ್ಯ ಮತ್ತು ಗ್ರಾಂಥಿಕ ಪದ ಗುಚ್ಚ
- ಶುದ್ಧ ರೂಪಗಳು
- 762 ಗಾದೆಮಾತುಗಳು

1000+ ಹಿಂದಿನ ಪರೀಕ್ಷೆಗಳ ಪ್ರಶ್ನೋತ್ತರಗಳೊಂದಿಗೆ ಅಭ್ಯಾಸ-ಪತ್ರಿಕೆ

ಎಲ್ಲ ಸ್ಪರ್ಧಾತ್ಮಕ ಪರೀಕ್ಷೆಗಳಿಗೂ ಉಪಯುಕ್ತ

ಪುಸ್ತಕದ ವಿಶೇಷತೆ

ವ್ಯಾಕರಣ & ಸಾಹಿತ್ಯ ಪರೀಕ್ಷಾ ದೃಷ್ಟಿಯಿಂದ ಹಂತ ಹಂತವಾಗಿ ವಿಂಗಡಣೆ.

6, 7, 8, 9 & 10ನೇ ತರಗತಿ ಅತಿ ಮುಖ್ಯ ಮಾಹಿತಿ ಒಳಗೊಂಡಿದೆ.

KPSC ನೂತನ ಪಠ್ಯಕ್ರಮ ಆಧರಿಸಿ ರಚಿಸಲಾಗಿದೆ.



"ಕಳೆದುಕೊಂಡ ಮೇಲೆ ಅಳುವುದಕ್ಕಿಂತ, ಇರುವಾಗಲೇ ಪ್ರಯತ್ನಿಸುವುದು ಲೇಸು"

• ಸಂಜೀವ ವಿ ರಾಯ್ಕರ್
Unacademy Expert Educator

Gurubasavaraj Online Kottur
Scanned with OKEN Scanner

ಅಧ್ಯಾಯ 1

# ಕನ್ನಡದ ಪ್ರಮುಖ ವೈಯಾಕರಣಿಗಳು

**ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಅವಶ್ಯವಾಗಿ ಓದಲೇಬೇಕು.**

ಒಂದು ಭಾಷೆಯು ಮೊದಲು ಮಾತಿನಿಂದ (ಧ್ವನಿ/ಸ್ವನಿ) ಪ್ರಾರಂಭವಾಗುತ್ತದೆ. ಆದ್ದರಿಂದ ಯಾವುದೇ ಒಂದು ಭಾಷೆಯ ಆರಂಭ ಧ್ವನಿಯಿಂದ ಪ್ರಾರಂಭವಾಗುವುದೇ ಹೊರತು ವ್ಯಾಕರಣ, ಛಂದಸ್ಸು, ಅಲಂಕಾರಗಳಿಂದಲ್ಲ. ಆದ್ದರಿಂದ ನಮ್ಮ ವೈಯಾಕರಣಿಗಳು ಹೀಗೆ ಹೇಳಿದ್ದಾರೆ. "**ಮಾತು ಮೊದಲು ಆಮೇಲೆ ವ್ಯಾಕರಣ, ಛಂದಸ್ಸು, ಅಲಂಕಾರ**".

### ವ್ಯಾಕರಣ ಎಂದರೇನು?

ಕನ್ನಡ ಭಾಷೆಯ ಪ್ರಕೃತಿ ಪ್ರತ್ಯಯವನ್ನು ಸರಿಯಾದ ಕ್ರಮದಲ್ಲಿ ಬಳಸುವ ನಿಯಮವನ್ನು ತಿಳಿಸುವ ಶಾಸ್ತ್ರವೇ **ವ್ಯಾಕರಣ.** ಹೀಗೆ ಒಂದು ಭಾಷೆಯ ಸ್ವರೂಪ, ಧ್ವನಿ, ಉಚ್ಚಾರ, ಅರ್ಥಜ್ಞಾನದೊಂದಿಗೆ ಶ್ರುತಿಗಳನ್ನು ವ್ಯವಸ್ಥಿತ ನಿಯಮಗಳ ಮೂಲಕ ಸೂತ್ರಬದ್ಧವಾಗಿ ತಿಳಿಸುವುದನ್ನೆ **'ವ್ಯಾಕರಣಶಾಸ್ತ್ರ'** ಎನ್ನುವರು.

ಈ ಶಾಸ್ತ್ರವನ್ನು ಪರಿಚಯಿಸಿ ಕೊಡುವವರನ್ನು **ವೈಯಾಕರಣಿ**ಗಳೆಂದು ಕರೆಯುತ್ತಾರೆ. ಹೀಗೆ ವ್ಯಾಕರಣ ಬದ್ಧವಾಗಿ, ಕಾವ್ಯಸೌಂದರ್ಯವನ್ನು ಸೂತ್ರರೂಪ ಪದ್ಯದಲ್ಲಿ ಪರಿಚಯಿಸುವುದು **'ಛಂದಸ್ಸುಶಾಸ್ತ್ರ'** ಹಾಗೂ ಕಾವ್ಯವನ್ನು ಶಬ್ದಸಂಪತ್ತಿನಿಂದ ಅಲಂಕರಿಸಿ ಅಂದಗೊಳಿಸುವುದೇ **'ಅಲಂಕಾರಶಾಸ್ತ್ರ'**.
ಹೀಗೆ ಈ ಮೂರು (ವ್ಯಾಕರಣ, ಛಂದಸ್ಸು, ಅಲಂಕಾರ) ಶಾಸ್ತ್ರಗಳಿಂದ ಕೂಡಿರುವ ಗ್ರಂಥವನ್ನು **'ಲಕ್ಷಣಗ್ರಂಥ'** ಎಂದು ಕರೆಯುತ್ತಾರೆ.

ಈ ರೀತಿ ಕನ್ನಡ ಭಾಷೆಯನ್ನು ಪರಿಚಯಿಸಿದ ಕನ್ನಡದ ಅತ್ಯಂತ ಪ್ರಮುಖ ವೈಯಾಕರಣಿಗಳ ಸಣ್ಣ ಪರಿಚಯ ನೋಡೋಣ ಬನ್ನಿ.

1. 2ನೇ ನಾಗವರ್ಮ (ಕಾಲ: ಕ್ರಿ.ಶ 1042)
2. ಕೇಶಿರಾಜ (ಕಾಲ: ಕ್ರಿ.ಶ 1260)
3. ಭಟ್ಟಾಕಳಂಕದೇವ (ಕಾಲ: ಕ್ರಿ.ಶ 1604)

2ನೇ ನಾಗವರ್ಮ ಸಂಸ್ಕೃದಲ್ಲಿ ಕನ್ನಡ ವ್ಯಾಕರಣವನ್ನು ಬರೆದ ಮೊದಲಿಗ.
ಕೇಶಿರಾಜ ಹಳಗನ್ನಡದಲ್ಲಿ ಕನ್ನಡ ವ್ಯಾಕರಣವನ್ನು ಬರೆದ ಮೊದಲಿಗ.

## 2ನೇ ನಾಗವರ್ಮ

2ನೇ ನಾಗವರ್ಮನ ಕಾಲ ಸು. ಕ್ರಿ.ಶ 1042. ಕನ್ನಡ ವ್ಯಾಕರಣಕ್ಕೆ ಸಂಬಂಧಿಸಿದಂತೆ ಅತಿ ಹೆಚ್ಚು ಮಾಹಿತಿಗಳನ್ನು ಒಳಗೊಂಡ ವ್ಯಾಕರಣ ಗ್ರಂಥ ರಚನೆಯಲ್ಲಿ ಮೊದಲಾಗಿದ್ದು ನಮ್ಮ 2ನೆಯ ನಾಗವರ್ಮ, ಅವರು ಬರೆದ **'ಕರ್ನಾಟಕ ಭಾಷಾಭೂಷಣ'** ಮತ್ತು **'ಕಾವ್ಯಾವಲೋಕನ'** ಈ ಎರಡು ಗ್ರಂಥಗಳು ಅತ್ಯಂತ ಪ್ರಮುಖವಾದವು. **'ಕರ್ನಾಟಕ ಭಾಷಾಭೂಷಣ' ಸಂಸ್ಕೃತದಲ್ಲಿ ಬರೆದ ಕನ್ನಡದ ಮೊದಲ ವ್ಯಾಕರಣ ಗ್ರಂಥವಾಗಿದೆ** ಹಾಗೂ ಕನ್ನಡ ವಾಕ್ಯರಣವನ್ನು ಸಂಸ್ಕೃತದಲ್ಲಿ ಬರೆದ ಮೊದಲಿಗ ಮತ್ತು ಕನ್ನಡ ಭಾಷೆಯ ಪ್ರಬುದ್ಧತೆಯ ಬಗ್ಗೆ **ಸಂಸ್ಕೃತ** ಭಾಷಾ ಪಂಡಿತರಿಗೆ ಹಿರಿಮೆಯಿಂದ ತಿಳಿಸಿದ ಮೊದಲ ಗ್ರಂಥ ಇದಾಗಿದೆ.

ವ್ಯಾಕರಣಕ್ಕೆ ಸಂಬಂಧಿಸಿದಂತೆ ಕಾವ್ಯಾವಲೋಕನದ 3 ಭಾಗಗಳಲ್ಲಿ ಮೊದಲನೇ ಭಾಗ **'ಶಬ್ದಸ್ಮೃತಿ'**ಯಲ್ಲಿ ಕನ್ನಡ ವ್ಯಾಕರಣವನ್ನು ಬರೆದಿದ್ದಾರೆ. **'ಕಾವ್ಯಾವಲೋಕನ'** ಕನ್ನಡದ ಮೊದಲ ಅಲಂಕಾರ ಶಾಸ್ತ್ರಗ್ರಂಥ ಇದರ ಮೊದಲನೆಯ ಭಾಗವಾದ ಶಬ್ದಸ್ಮೃತಿಯಲ್ಲಿ ಒಟ್ಟು 5 ಭಾಗಗಳಿದ್ದು ಬಹು ಸಂಕ್ಷಿಪ್ತವಾಗಿ ಹಳಗನ್ನಡ ವ್ಯಾಕರಣದ ವಿಷಯವನ್ನು ವಿವರಿಸಲಾಗಿದೆ.

**ಶಬ್ದಸ್ಮೃತಿಯ 5 ಭಾಗಗಳು**

**1. ಸಂಧಿ 2. ನಾಮ 3. ಸಮಾಸ 4. ತದ್ಧಿತ 5. ಆಖ್ಯಾತ**

Gurubasavaraj Online Kottur



Scanned with OKEN Scanner

- **ಆರ್ ನರಸಿಂಹಾಚಾರ & ಕೆ. ಎ ನೀಲಕಂಠಶಾಸ್ತ್ರಿ** ಅವರ ಪ್ರಕಾರ 2ನೇ ನಾಗವರ್ಮನ ಕಾಲ 1145 ರಿಂದ 1150.
- ಎಂ ಗೋವಿಂದ ಪೈರವರ ಪ್ರಕಾರ 2ನೇ **ನಾಗವರ್ಮನ ಕಾಲ ಕ್ರಿಶ 1042**
- ಚಾಲುಕ್ಯ ರಾಜ ಜಗದೇಕಮಲ್ಲನಲ್ಲಿ 2ನೇ ನಾಗವರ್ಮ ಸೈನ್ಯ ಶಿಕ್ಷಕ (ಕಟಕೋಪಾಧ್ಯಾಯ) ನಾಗಿದ್ದನು.
- ಜನ್ನ ಕವಿಗೆ ಉಪಾಧ್ಯಾಯ. (ಜನ್ನ ಕವಿಯ ಗುರು)
- 2ನೇ ನಾಗವರ್ಮನ ಗುರು: ವೀರಭಟ್ಟಾರಕ
- **ಕಾಳಿದಾಸ, ಅಸಗ, ಗುಣನಂದಿ, ಪೊನ್ನ, ಮಯೂರ, ಬಾಣನಿಗೆ** ಸಮಾನನಾಗಿದ್ದಾನೆ.

**2ನೇ ನಾಗವರ್ಮನ ಪ್ರಮುಖ ಗ್ರಂಥಗಳು:**

1. **ಕರ್ಣಾಟಕ ಭಾಷಾಭೂಷಣ** (ಮೊದಲ ವ್ಯಾಕರಣಗ್ರಂಥ)
2. **ಕಾವ್ಯಾವಲೋಕನ** (ಲಕ್ಷಣಗ್ರಂಥ)
3. **ಅಭಿದಾನ ವಸ್ತುಕೋಶ** (ಕಂದವೃತ್ತದಲ್ಲಿ ಬರೆದ –ನಿಘಂಟು)
4. **ಛಂದೋವಿಚಿತಿ** (ಛಂದೋಗ್ರಂಥ)
5. **ಶಬ್ದಸ್ಮೃತಿ** (ವ್ಯಾಕರಣ)
6. **ಶೃಂಗಾರ ರತ್ನಾಕರ** (ಗ್ರಂಥ ಲಭ್ಯವಿಲ್ಲ)

**ಕೆಲವು ಪ್ರಮುಖ ವಿಷಯಗಳು**

- **'ಕರ್ಣಾಟಕ ಭಾಷಾಭೂಷಣ'** ಕನ್ನಡ ವ್ಯಾಕರಣ ಗ್ರಂಥ ಇದನ್ನು ಸಂಸ್ಕೃತದಲ್ಲಿ ಬರೆಯಲಾಗಿದೆ.
- **'ಕಾವ್ಯಾವಲೋಕನ'**ವು ವ್ಯಾಕರಣವನ್ನಷ್ಟೆ ಅಲ್ಲದೆ ಛಂದಸ್ಸು, ಅಲಂಕಾರಗಳನ್ನು ಒಳಗೊಂಡಿದೆ ಮತ್ತು ಇದರಲ್ಲಿ ಒಂದನೇ ಭಾಗ **ಶಬ್ದಸ್ಮೃತಿ** ಇದು ವ್ಯಾಕರಣ ಶಾಸ್ತ್ರವಾಗಿದೆ. ಆದ್ದರಿಂದ ಈ ಗ್ರಂಥವನ್ನು **ಲಕ್ಷಣಗ್ರಂಥ** ಎಂದು ಕರೆಯುತ್ತಾರೆ.
- 2ನೇ ನಾಗವರ್ಮನಿಗೆ ರಾಷ್ಟ್ರ ಕೂಟ ದೊರೆ ಜಗದೇಕಮಲ್ಲನು **ಕಟಕಾಚಾರ್ಯ** ಮತ್ತು **ಕಟಕೋಪಾಧ್ಯಾಯ** (ಸೈನ್ಯ ಶಿಕ್ಷಕ) ಎಂಬ ಬಿರುದುಗಳನ್ನು ನೀಡಿ ಗೌರವಿಸಿದ್ದನು.
- ಸಂಪಾದನೆ: 1903ರಲ್ಲಿ ಆರ್. ನರಸಿಂಹಾಚಾರ್ಯ
- 2ನೇ ನಾಗವರ್ಮನನ್ನು **'ನಾಕಿಗ'** ಎಂದು ಕೂಡ ಕರೆಯುತ್ತಾರೆ. ಇವರು **ಕವಿತಾಗುಣಕಾಂಚನ, ಕವಿಕರ್ಣಪೂರ, ಕವಿತಾಗುಣೋದಯ, ಅಭಿನವ ಸರ್ವವರ್ಮ** ಎಂಬ ಬಿರುದುಗಳನ್ನು ಹೊಂದಿದ್ದಾನೆ.

**ಸೂಚನೆ: 1ನೇ ನಾಗವರ್ಮ ಮತ್ತು 2ನೇ ನಾಗವರ್ಮನ ಮಾಹಿತಿಯೊಂದಿಗೆ ಗೊಂದಲ ಮಾಡಿಕೊಳ್ಳಬೇಡಿ.**

## 1ನೇ ನಾಗವರ್ಮ ಕ್ರಿ.ಶ 900

**1ನೇ ನಾಗವರ್ಮನ ಪ್ರಮುಖ ಎರಡು ಕೃತಿಗಳು/ ಗ್ರಂಥಗಳು:**

1. **ಛಂದೋಂಬುದ್ಧಿ/ಛಂದೋಂಬುಧಿ** (ಕನ್ನಡದ ಮೊಟ್ಟ ಮೊದಲ **ಛಂದೋಗ್ರಂಥ**)
2. **ಕರ್ನಾಟಕ ಕಾದಂಬರಿ / ಕಾದಂಬರಿ**

   **ಬಾಣ**ನ ಸಂಸ್ಕೃತ ಕಾದಂಬರಿಯನ್ನು **ಕರ್ನಾಟಕ ಕಾದಂಬರಿ** ಎಂದು ಅನುವಾದ ಗೊಂಡಿದ್ದು, ಇದು ಕನ್ನಡದ ಮೊಟ್ಟ ಮೊದಲ ಅನುವಾದಿತ ಕೃತಿಯಾಗಿದೆ. ಬಾಣನ ಮೂಲ ಕೃತಿಯು ಗದ್ಯಕಾವ್ಯವಾಗಿದ್ದು, ಇದನ್ನು 1ನೇ ನಾಗವರ್ಮ **ಚಂಪೂಗ್ರಂಥ**ವನ್ನಾಗಿ ರಚಿಸಿದ್ದಾನೆ.

   **ಕಾದಂಬರಿ** ನಾಯಕಿಯ ಹೆಸರು **'ಕಾದಂಬರಿ'**. ಇದರಲ್ಲಿ ಗಂಧರ್ವಕನ್ಯೆ ಕಾದಂಬರಿಗೂ – ಚಂದ್ರಪೀಡನೆಂಬ ರಾಜಕುಮಾರನಿಗೂ ನಡೆದ ಪ್ರಣಯವೇ ಕಾದಂಬರಿ ಕೃತಿಯ ಕಥಾವಸ್ತುವಾಗಿದೆ. ಇದರೊಂದಿಗೆ ಪುಂಡರಿಕ – ಮಹಾಶ್ವೇತೆಯರ ಪ್ರಣಯ ಕಥೆಯು ಇದರ ಕಥಾ ವಸ್ತುವಾಗಿದೆ.

**ನೆನಪಿಡಿ**

**ಕಾದಂಬರಿಯಲ್ಲಿ ಬರುವ ಜೋಡಿಗಳು**

- ಕಾದಂಬರಿ – ಚಂದ್ರಪೀಡ
- ಪುಂಡರಿಕ – ಮಹಾಶ್ವೇತೆ
- ವೈಶಂಪಾಯನ – ಮಹಾಶ್ವೇತೆ

- ಪಂಪ, ಪೊನ್ನರ ವೆಂಗಿಮಂಡಲದ ವೆಂಗಿಪುಳವು 1ನೇ ನಾಗವರ್ಮನ ಜನ್ಮಸ್ಥಳ.
- ದೇವಕಬ್ಬೆ – ಪೆಣ್ಣಮಯ್ಯ ಪೋಷಕರು
- 1ನೇ ನಾಗವರ್ಮನ ಛಂದೋಂಬುದ್ಧಿಯನ್ನು ಮೊದಲು ಸಂಪಾದಿಸಿದವರು – **ಕುಕ್ಕಿಲ್ ಕೃಷ್ಣಭಟ್ಟ**
- **ಕರ್ನಾಟಕ ಕಾದಂಬರಿಯನ್ನು** "**ಅದೊಂದು ಮೋಘಚುಂಬಿಯಾದ ಶೃಂಗಾರ ಗೋಪುರ**" ಎಂದವರು – **ಕುವೆಂಪು**

Gurubasavaraj Online Kottur



Scanned with OKEN Scanner

**ಈ ಕೆಳಗಿನ ಛಂದೋಗ್ರಂಥಗಳೊಂದಿಗೆ ಗೊಂದಲಗೊಳ್ಳಬಾರದು.**

- **'ಛಂದೋನುಶಾಸನ'** ಗ್ರಂಥವನ್ನು 11 ನೇ ಶತಮಾನದಲ್ಲಿ **ಜಯಕೀರ್ತಿ** ಬರೆದಿದ್ದಾರೆ.
- **'ಛಂದೋವಿಕಾಸ'** ಕೃತಿಯನ್ನು **ಡಿ.ಎಸ್ ಕರ್ಕಿ**ಯವರು ಬರೆದಿದ್ದಾರೆ.
- **'ಛಂದೋವಿಚಿತಿ'** ಗ್ರಂಥವನ್ನು **2ನೇ ನಾಗವರ್ಮ** ಬರೆದಿದ್ದಾರೆ.

**ಗಮನಿಸಿ**

ಹೆಚ್ಚಿನ **ಛಂದೋಗ್ರಂಥ**ಗಳನ್ನು ಛಂದಸ್ಸಿನ ಅಧ್ಯಾಯದಲ್ಲಿ ನೀಡಲಾಗಿದೆ. ತಪ್ಪದೇ ನೋಡಿ.

## ಕೇಶಿರಾಜ (ಕರ್ನಾಟಕ ಲಕ್ಷಣ ಶಿಕ್ಷಾಚಾರ್ಯ) ಕ್ರಿ.ಶ 1260

ತಂದೆ: ಮಲ್ಲಿಕಾರ್ಜುನದೇವ, ಸೋದರ ಮಾವ: ಜನ್ನ ಕವಿ, ತಾತ **ಕವಿ ಸುಮನೋಬಾಣ** (ತಾಯಿಯ ತಂದೆ ಮಹಾಕವಿಗಳು).

**ಪ್ರಮುಖ ಗ್ರಂಥಗಳು: 'ಶಬ್ದಮಣಿದರ್ಪಣ'** ಇದು ಹಳೆಗನ್ನಡ ವ್ಯಾಕರಣದ ಸಮಗ್ರ ಸ್ವರೂಪವನ್ನು ತಿಳಿಸುವ ವ್ಯಾಕರಣ ಗ್ರಂಥವಾಗಿದೆ. (ಶಬ್ದಮಣಿದರ್ಪಣದ ಆಕರಗ್ರಂಥ–2ನೇ ನಾಗಮರ್ಮನ **ಶಬ್ದಸ್ಮೃತಿ** ಇದರಲ್ಲಿ ಒಟ್ಟು 5 ಅಧ್ಯಾಯಗಳಿವೆ.

ಕೇಶಿರಾಜನು 'ಶಬ್ದಮಣಿದರ್ಪಣ'ದಲ್ಲಿ ಒಟ್ಟು 8 ಪ್ರಕರಣಗಳಾಗಿ ತಿಳಿಸಿದ್ದಾನೆ. ಪ್ರತಿ ಅಧ್ಯಾಯಕ್ಕೆ **ಪ್ರಕರಣ** ಎನ್ನಲಾಗುತ್ತದೆ. ಕಂದಪದ್ಯಗಳಿಗೆ **'ಸೂತ್ರ'**ವೆಂದೂ, ಗದ್ಯರೂಪದ ವಿವರಣೆಗೆ **'ವೃತ್ತಿ'**ಯೆಂದೂ, ವ್ಯಾಕರಣದ ಉದಾಹರಣೆಗಳಿಗೆ **'ಪ್ರಯೋಗ'**ವೆಂದು ಕರೆದಿದ್ದಾನೆ. **ಕೇಶಿರಾಜನು** ತನ್ನ ಗ್ರಂಥಕ್ಕೆ 2ನೇ ನಾಗವರ್ಮನ "ಶಬ್ದಸ್ಮೃತಿ ಮತ್ತು ಕಾವ್ಯಾವಲೋಕನ" ಗ್ರಂಥಗಳ **'ಸೂತ್ರ', 'ವೃತ್ತಿ'** ಮತ್ತು **'ಪ್ರಯೋಗ'**ಗಳನ್ನು ಆಧರಿಸಿದ್ದಾನೆ.

**'ಶಬ್ದಮಣಿದರ್ಪಣ'**ವು 13ನೇ ಶತಮಾನಕ್ಕೆ ಮೊದಲು ಹಳಗನ್ನಡ ಭಾಷಾಸ್ಥಿತಿಗತಿಗಳು ಹೇಗಿದ್ದುವೆಂಬುದನ್ನು ಸವಿಸ್ತಾರವಾಗಿ, ಸಪ್ರಮಾಣ ವಿವೇಚನೆಯಿಂದ ವರ್ಣಿಸುತ್ತದೆ.

**ನೆನಪಿಡಿ**

1600ರಲ್ಲಿ **ಲಿಂಗಣಾರಾಧ್ಯನು** **'ಸೂತ್ರ ಅನ್ವಯ ರತ್ನಮಾಲೆ'** ಎಂಬ ವ್ಯಾಖ್ಯಾನವನ್ನು ಬರೆದಿದ್ದಾನೆ.

**ಶಬ್ದಮಣಿದರ್ಪಣದ 8+1 ಭಾಗಗಳು**

**ಅಕ್ಷರ–ಶಬ್ದ–ಸಂಧಿ ನಾಮ ಸಮಾಸ ತದ್ಧಿತ ಆಖ್ಯಾತ ಧಾತು ಅಪಭ್ರಂಶ ಅವ್ಯಯ ಪ್ರಯೋಗಸಾರ**

**ಪ್ರಯೋಗಸಾರ** (ಇದು ಶಬ್ದಾರ್ಥ ನಿರ್ಣಯ ಪ್ರಕರಣವನ್ನು ತಿಳಿಸುತ್ತದೆ.)

### ಕೆಲವು ಪ್ರಮುಖ ವಿಷಯಗಳು

- ಕೇಶಿರಾಜನಿಗೆ **ಸುಕವಿ, ಕರ್ನಾಟಕ ಲಕ್ಷಣ ಶಿಕ್ಷಾಚಾರ್ಯ** ಎಂಬ ಬಿರುದುಗಳಿದ್ದವು.
- ಕೇಶಿರಾಜನ ಶಬ್ದಮಣಿದರ್ಪಣವು ಸೂತ್ರ ರೂಪದ **ಕಂದ್ಯಪದ್ಯ**ವಾಗಿದೆ.
- ಶಬ್ದಮಣಿದರ್ಪಣದಲ್ಲಿ ಒಟ್ಟು **322** ಸೂತ್ರಗಳಿವೆ.
- ಶಬ್ದಮಣಿದರ್ಪಣವನ್ನು **ಹಳೆಗನ್ನಡ**ದಲ್ಲಿ ಬರೆಯಲಾಗಿದೆ.
- ಕೇಶಿರಾಜನ ಪ್ರಕಾರ **ಪಂಚಮೀ ವಿಭಕ್ತಿ ಇಲ್ಲ.**
- ಕೇಶಿರಾಜನ ಪ್ರಕಾರ ಕನ್ನಡದಲ್ಲಿ ಒಟ್ಟು **9 ಪ್ರಕಾರದ ಲಿಂಗ**ಗಳಿವೆ.
- ಇದು ಸಂಪೂರ್ಣವಾಗಿ ಕನ್ನಡದಲ್ಲೇ ರಚನೆಯಾದ **ಕನ್ನಡದ ಪ್ರಥಮ ವ್ಯಾಕರಣ ಗ್ರಂಥ**ವಾಗಿದೆ.
- ಕನ್ನಡದ ವರ್ಣಮಾಲೆಯಲ್ಲಿ **47 ಅಕ್ಷರಗಳಿವೆ** ಎಂದು ಕೇಶಿರಾಜನು ತನ್ನ ಶಬ್ದಮಣಿದರ್ಪಣದಲ್ಲಿ ತಿಳಿಸಿದ್ದಾನೆ.
- ಕೇಶಿರಾಜ ಅಕ್ಷರಕ್ಕೆ **'ವರ್ಣ'** ಎಂದು ಕರೆಯುತ್ತಾನೆ. ಕೇಶಿರಾಜನ ಪ್ರಕಾರ **ಕನ್ನಡದಲ್ಲಿ ಶುದ್ಧಗೆಗಳ ಸಂಖ್ಯೆ 47.**
- ಕೇಶಿರಾಜನು ಹೇಳುವ ಪ್ರಕಾರ ಕನ್ನಡದ ಅಸಾಧಾರಣ ಲಕ್ಷಣಗಳಲ್ಲಿ ಗಮಕಸಮಾಸವು ಕೂಡ ಒಂದು.
- ಸಂಪೂರ್ಣ ಗ್ರಂಥ 343 ಕಂದಪದ್ಯ, 8 ಪ್ರಕರಣ & 10 ಅಧ್ಯಾಯಗಳನ್ನು ಒಳಗೊಂಡಿದೆ.
- **ಆಶ್ರಯ:** ಜೋಳರ **'ಇಮ್ಮಡಿ ನರಸಿಂಹ'** ಹಾಗೂ ಇವರ ಮಗ **'ಸೋಮೇಶ್ವರ'**ನಲ್ಲಿ ಆಶ್ರಯ ಪಡೆದನು.

**ನೆನಪಿಡಿ**

ವ್ಯಾಕರಣದಿಂದ ಪದಸಿದ್ಧಿ, ಪದಸಿದ್ಧಿಯಿಂದ ಅರ್ಥ, ಅರ್ಥದಿಂದ ತತ್ವಜ್ಞಾನ, ತತ್ವಜ್ಞಾನದಿಂದ ಮಾನವರು ಬಯಸುವ ಮೋಕ್ಷ ಲಭಿಸುತ್ತದೆ ಎಂದು **ಕೇಶಿರಾಜ** ತಿಳಿಸಿದ್ದಾನೆ.

Gurubasavaraj Online Kottur



Scanned with OKEN Scanner

- **ಕೇಶಿರಾಜನ ಇತರ ಕೃತಿಗಳು:**

| | | |
|---|---|---|
| 1. ಪ್ರಬೋಧ ಚಂದ್ರಂ | 3. ಚೋಳಪಾಲಕ ಚರಿತ | 5. ಶ್ರೀ ಚಿತ್ರಮಾಲೆ (ಪ್ರಸ್ತುತ ಲಭ್ಯವಿಲ್ಲ) |
| 2. ಸುಭದ್ರಾಹರಣ | 4. ಕಿರಾತ | 6. ಕರ್ನಾಟಕ ಲಕ್ಷಣ ಶಬ್ದಶಾಸ್ತ್ರ |

**ಶಬ್ದಮಣಿದರ್ಪಣದ ಸಂಪಾದನಾ ಕೃತಿಗಳು**

- ಶಬ್ದಮಣಿದರ್ಪಣವನ್ನು **ಜೆ.ಗ್ಯಾರೆಟ್** ಕ್ರಿ.ಶ. 1868ರಲ್ಲಿ **ಮೊಟ್ಟ** ಮೊದಲ ಬಾರಿಗೆ ಪ್ರಕಟಿಸಿದ/ ಸಂಪಾದಿಸಿದ ಪಂಡಿತ.
- ಕ್ರಿ.ಶ.1872ರಲ್ಲಿ **ರೆವೆರೆಂಡ್ ಕಿಟ್ಟೆಲ್** ಈ ಗ್ರಂಥವನ್ನು ಪರಿಷ್ಕರಿಸಿ ಪ್ರಕಟಿಸಿದರು.
- ಕ್ರಿ.ಶ. 1951ರಲ್ಲಿ **ಡಿ.ಕೆ.ಭೀಮಸೇನರಾಯರು**, 1920 ರಲ್ಲಿ **ಕನ್ನಡ ಸಾಹಿತ್ಯ ಪರಿಷತ್ತು** **(ಪಂಚೆಮಂಗೇಶರಾಯರು)**
- 1958ರಲ್ಲಿ **ಡಿ.ಎಲ್.ನರಸಿಂಹಾಚಾರ್** **'ಕೇಶಿರಾಜ ವಿರಚಿತ ಶಬ್ದಮಣಿ ದರ್ಪಣಂ'** ಪರಿಷ್ಕೃತ ಕೃತಿಗಳನ್ನು ರಚಿಸಿದ್ದಾರೆ.

## ಭಟ್ಟಾಕಳಂಕದೇವ ಕ್ರಿ.ಶ 1604

2ನೆಯ ನಾಗವರ್ಮ ಮತ್ತು ಕೇಶಿರಾಜನ ನಂತರ ಕನ್ನಡಕ್ಕೆ ವ್ಯಾಕರಣ ಗ್ರಂಥ ರಚನಾಕಾರರಲ್ಲಿ 3ನೆಯವರು. ಈತನು ಕೂಡ ನಾಗವರ್ಮನಂತೆ ಕನ್ನಡ ವ್ಯಾಕರಣವನ್ನು ಸಂಸ್ಕೃತದಲ್ಲಿ ಬರೆದ ಬಹುಭಾಷಾ ಪಂಡಿತ. ಇವರ **ಗುರು**: **ಅಕಳಂಕದೇವ**.

ಪ್ರಮುಖ ಗ್ರಂಥಗಳು: **ಶಬ್ದಾನುಶಾಸನ** (ಇದೊಂದು **ಲಕ್ಷಣ ಗ್ರಂಥ**, ಸಂಸ್ಕೃತದಲ್ಲಿ ರಚನೆಯಾದ ಕನ್ನಡ ವ್ಯಾಕರಣ ಗ್ರಂಥವಾಗಿದೆ. ಈ ಕೃತಿಯು 2ನೇ ನಾಗವರ್ಮನ **ಶಬ್ದಸ್ಮೃತಿ**ಯನ್ನು ಅನುಸರಿಸಿದ ಕೃತಿಯಾಗಿದೆ.)

- ಇದು 4 ಪಾದ ಮತ್ತು 592 ಸೂತ್ರಗಳಿಂದ ಕೂಡಿದೆ.
- ಕ್ರಿ.ಶ 1890 ರಲ್ಲಿ **ಬಿ.ಎಲ್ ರೈಸ್** ರವರು ಈ ಕೃತಿಯನ್ನು ಮೊಟ್ಟ ಮೊದಲಿಗೆ ಸಂಪಾದಿಸಿ ಪ್ರಕಟಿಸಿದರು.
- ಶಬ್ದಾನುಶಾಸನದಲ್ಲಿರುವ ಸೂತ್ರಗಳಿಗೆ ಭಟ್ಟಾಕಳಂಕನು ತಾನೇ ಖುದ್ದಾಗಿ ವ್ಯಾಖ್ಯಾನ ಬರೆದು **'ಭಾಷಾಮಂಜರಿ'** ಎಂದು ಹೆಸರಿಸಿದ್ದಾನೆ. ಈ ಕೃತಿಗೆ **ವರದಾಚಾರ್ಯರು** **'ಶಬ್ದಾನುಶಾಸನ ತತ್ವಲೋಕ'** ಎಂಬ ವ್ಯಾಖ್ಯಾನ ರಚಿಸಿದ್ದಾರೆ.

## ಸಂಸ್ಕೃತ ಒಂದು ಮೃತ ಭಾಷೆಯೇ?

ಈಗ ನಾವು ಕನ್ನಡ ವ್ಯಾಕರಣಕ್ಕೆ ಮೂಲಾಧಾರವಾಗಿ ತಾಯಿಯಂತೆ ಪೋಷಿಸಿ ಬೆಳೆಸಿದ ಸಂಸ್ಕೃತ ಭಾಷೆಗೆ ಸಂಬಂಧಿಸಿದಂತೆ ಒಂದಿಷ್ಟು ಮಾಹಿತಿಯನ್ನು ನೋಡೋಣ. ಸಂಸ್ಕೃತ ವ್ಯಾಕರಣ ಗ್ರಂಥ ರಚನೆಕಾರರಲ್ಲಿ ಪ್ರಮುಖರಾದ ಯಾಸ್ಕನ್‌ನ ನಂತರ ಒಂದು ಶತಮಾನ ಕಳೆದ ಮೇಲೆ **ಪಾಣಿನಿ** ಎಂಬ ಸುಪ್ರಸಿದ್ಧ ವಯಾಕರಣಿ ಸಂಸ್ಕೃತ ವ್ಯಾಕರಣದಲ್ಲಿ ಕಾಣಿಸಿಕೊಳ್ಳುತ್ತಾನೆ.

ಈತನ ಸಂಸ್ಕೃತ ವ್ಯಾಕರಣ ಗ್ರಂಥ **'ಅಷ್ಟಾಧ್ಯಾಯಿ'** ಇದು ಸುಮಾರು 4000 ಸೂತ್ರಗಳಿಂದ ಕೂಡಿದ ಒಂದು ಬೃಹತ್ ಪ್ರಾಚೀನ ವ್ಯಾಕರಣ ಗ್ರಂಥವಾಗಿದ್ದು, ಇದು ನಿಯಮಾತ್ಮದ ವ್ಯಾಕರಣ ಅಂದರೆ (**Prescriptive grammar**) ಭಾಷೆಯ ಬಳಕೆಯಲ್ಲಿ ನಿರ್ದಿಷ್ಟ ನಿಯಮಗಳನ್ನು ಪಾಲಿಸಲೇಬೇಕೆನ್ನುವ ಕ್ರಮ. ಇದರಿಂದ ಅಂದಿನ ಕಾಲದಲ್ಲಿ ವ್ಯವಹಾರಿಕ ಭಾಷೆಯಾಗಿದ್ದ ಸಂಸ್ಕೃತಕ್ಕೆ ಪಾಣಿನಿಯು ಸಂಸ್ಕೃತ ವ್ಯಾಕರಣ ಗ್ರಂಥವನ್ನು ಬರೆದ ನಂತರ ಅದರ ಶಾಸ್ತ್ರೀಯತೆ, ಅಚ್ಚುಕಟ್ಟುತನಗಳು ಮುಂದೆ ಬಂದು ಯಾವ ವ್ಯಾಕರಣ ಸಂಪ್ರದಾಯಗಳಲ್ಲೂ ಕಾಣಿಸಿಕೊಳ್ಳುವುದಿಲ್ಲ, ಆದ್ದರಿಂದ ಅಷ್ಟಾಧ್ಯಾಯಿ ಗ್ರಂಥವು ಇಂದಿಗೂ ಪ್ರಮಾಣಭೂತ ಸಂಸ್ಕೃತ ವ್ಯಾಕರಣ ಗ್ರಂಥವಾಗಿದೆ.

ಆದರೆ ಸಂಸ್ಕೃತಕ್ಕೆ ಅನುಲಂಘನೀಯ ನಿಯಮಗಳನ್ನು ಹಾಕಿದ ಪರಿಣಾಮವಾಗಿ, ವ್ಯವಹಾರಿಕ ಭಾಷೆಯಾಗಿದ್ದ ಸಂಸ್ಕೃತವು ಕ್ರಮೇಣ ವ್ಯವಹಾರದಲ್ಲಿ ನಿಂತು ಹೋಗಿ ಕೇವಲ ಗ್ರಂಥಸ್ಥ ಭಾಷೆಯಾಗಿ ಉಳಿಯಿತು. ಇದರಿಂದ ಇಂದು **ಸಂಸ್ಕೃತ ಭಾಷೆಯು** ಒಂದು **ಮೃತಭಾಷಾ** (**Death Language**) ವರ್ಗಕ್ಕೆ ಸೇರುತ್ತದೆ. ಹಾಗೂ ಸಂಸ್ಕೃತವನ್ನು **ದೇವನಾಗರಿ ಲಿಪಿ**ಯಲ್ಲಿ ಬರೆಯಲಾಗುತ್ತದೆ.

Gurubasavaraj Online Kottur



Scanned with OKEN Scanner

| ಕ್ರ.ಸಂ | ಕೃತಿಗಳು | ಕೃತಿಕಾರರು |
|---|---|---|
| 1. | **A Grammar Of The Kurnata Language** (1817 in Kolkata) ಕನ್ನಡದಲ್ಲಿ ಮುದ್ರಣಗೊಂಡ ಮೊದಲು ಪುಸ್ತಕ | William Carey/ ವಿಲಿಯಂ ಕ್ಯಾರಿ |
| 2. | **The History of Kannada Language** (1934) | ಆರ್. ನರಸಿಂಹಾಚಾರ್ |
| 3. | **An Outline of Colloquial Kannada** (William Bright 1958) | ವಿಲಿಯಂ ಬ್ರೈಟ್ಸ್ |
| 4. | **History of Kannada literature** (1975- ಸಾಹಿತ್ಯ ಅಕಾಡೆಮಿ)<br>**The Heritage Of Karnataka** ಪುಸ್ತಕವನ್ನು ಬರೆದವರು | ರಂ ಶ್ರೀ ಮುಗುಳಿ |
| 5. | **A History of Kannada literature** (Edward Peter Rice)<br>**A History of Kanarese Literature** (1915) | ಇ.ಪಿ ರೈಸ್ / ಎಡ್ವರ್ಡ್ ಪೀಟರ್ ರೈಸ್ |
| | ಹಿಸ್ಟರೀ ಆಫ್ ಕೆನರೀಸ್ ಲಿಟರೇಚರ್ ಎಂಬುದು ಇಂಗ್ಲಿಷ್‌ನಲ್ಲಿ ರಚಿತವಾದ ಮೊದಲ ಕನ್ನಡ ಸಾಹಿತ್ಯ ಚರಿತ್ರೆ. | |
| 6. | **A Grammar Of The Kannada Language** (1903- ರೆವೆರೆಂಡ್ ಫರ್ಡಿನಾಂಡ್ ಕಿಟೆಲ್) | ಆರ್.ಎಫ್ ಕಿಟೆಲ್ |
| 7. | **Kannada English Dictionary** / ಕನ್ನಡ–ಇಂಗ್ಲೀಷ್ ನಿಘಂಟು | ಆರ್.ಎಫ್ ಕಿಟೆಲ್ (ಕ್ರಿ.ಶ 1894) |
| 8. | ಕಿಟ್ಟೆಲ್ ಕೋಶವನ್ನು ಪರಿಷ್ಕರಿಸಿದವರು | ಎಂ ಮರಿಯಪ್ಪ ಭಟ್ಟ |
| 9. | **Literary and Colloquial, a Study of Two Styles** 1964 - ಹಾರೊಗದ್ದೆ ಮಾನಪ್ಪ ನಾಯಕ | ಎಚ್.ಎಂ ನಾಯಕ |
| 10. | ಕರ್ನಾಟಕ ಭಾಷಾಭೂಷಣ (ಬೆಂಜಮಿನ್ ಲೂಯಿಸ್ ರೈಸ್) | ಬಿ.ಎಲ್ ರೈಸ್ |
| 11. | **The Structure of Kannada** (1961 - ಆರ್ ಸಿ ಹಿರೇಮಠ) | ರುದ್ರಯ್ಯ ಚಂದ್ರಯ್ಯ ಹಿರೇಮಠ |
| 12. | **Historical Grammar of old Kannada** (1946) [Govind Swamirao Gai / ಗೊವಿಂದ ಸ್ವಾಮಿರಾವ್ ಗಾಯಿ] | ಎಸ್.ಜಿ ಗಾಯಿ |
| 13. | ಶಬ್ದವಿಹಾರ | ಡಿ.ಎಲ್ ನರಸಿಂಹಾಚಾರ್ |
| 14. | ಕನ್ನಡ ಕೈಪಿಡಿ – (ಮೈಸೂರು ವಿಶ್ವವಿದ್ಯಾಲಯ – ಕ್ರಿ.ಶ 1927) | ಕುವೆಂಪು |
| 15. | ಕನ್ನಡ ಮಧ್ಯಮ ವ್ಯಾಕರಣ | ತೀ.ನಂ ಶ್ರೀಕಂಠಯ್ಯ (ಕ್ರಿ.ಶ 1939) |
| 16. | ಕನ್ನಡ ಪ್ರಥಮ ವ್ಯಾಕರಣ | ಡಾ.A.N ನರಸಿಂಹಯ್ಯ (ಕ್ರಿ.ಶ 1938) |
| 17. | ಕನ್ನಡ ಭಾಷಾಶಾಸ್ತ್ರ | ರಾ.ಯ ಧಾರವಾಡಕರ |
| 18. | ಕನ್ನಡ ಭಾಷೆಯ ಚರಿತ್ರೆ | ಪ್ರ.ಗೋ ಕುಲಕರ್ಣಿ |
| 19. | ಕನ್ನಡಡಕ್ಕೆ ಬೇಕು ಕನ್ನಡದ್ದೇ ವ್ಯಾಕರಣ (ಕ್ರಿ.ಶ 2000) | ಡಿ.ಎನ್. ಶಂಕರಭಟ್ಟ |

Gurubasavaraj Online Kottur



Scanned with OKEN Scanner

| | | |
|---|---|---|
| 20. | ಕನ್ನಡ ಭಾಷೆ ಮತ್ತು ವ್ಯಾಕರಣಗಳ ಒಂದು ಅಧ್ಯಯನ/ಸಮೀಕ್ಷೆ | ಡಾ.ಕೆ ಕುಶಾಲಪ್ಪಗೌಡ (ಕ್ರಿ.ಶ 1988) |
| 21. | ಶಬ್ದಮಣಿದರ್ಪಣ | ಡಿ.ಎಲ್ ನರಸಿಂಹಾಚಾರ್ಯ |
| 22. | ಶಬ್ದಮಣಿದರ್ಪಣ ಸಂಗ್ರಹ | ಬಿ.ಟಿ ಸಾಸನೂರ, ಎಂ.ಎಂ ಕಲಬುರ್ಗಿ |
| 23. | ಶಬ್ದಮಣಿದರ್ಪಣ ವಿಳಾಸ | ವಿ.ಶಿವಾನಂದ |
| 24. | ವರ್ಣನಾತ್ಮಕ ವ್ಯಾಕರಣ (ಕ್ರಿ.ಶ 1970) | ಎಚ್.ಎಸ್ ಬಿಳಿಗಿರಿ |
| 25. | ಹೊಸಗನ್ನಡ ವ್ಯಾಕರಣ | ಎನ್ ರಂಗನಾಥ ಶರ್ಮಾ |
| 26. | ನಡುಗನ್ನಡ | ನರಸಿಂಹರಾವ್ ಮಾನ್ವಿ |
| 27. | ಹಳಗನ್ನಡ ವ್ಯಾಕರಣಗಳ ತೌಲನಿಕ ವಿಶ್ಲೇಷಣೆ | ದೊಡ್ಡಸ್ವಾಮಿ |
| 28. | ಸಂಕ್ಷಿಪ್ತ ಕನ್ನಡ ಭಾಷೆಯ ಚರಿತ್ರೆ | ಡಿ.ಎನ್ ಶಂಕರ ಭಟ್ಟ |
| 29. | ಭಾಷಾ ವಿಜ್ಞಾನದ ಮೂಲ ತತ್ವಗಳು | ಎಂ. ಚಿದಾನಂದಮೂರ್ತಿ |
| 30. | ಕಿಟೆಲ್ ಕೋಶದ ಗಾದೆಗಳು | ರಾಮೇ ಗೌಡ |
| 31. | ಸಾಮಾನ್ಯ ಭಾಷಾ ವಿಜ್ಞಾನ | ಕೆ. ಕೆಂಪೆಗೌಡ |
| 32. | ಕನ್ನಡ ಭಾಷಾ ವ್ಯಾಸಂಗ, ತೌಲನಿಕ ಭಾಷಾ ವಿಜ್ಞಾನ | ಜೆ. ಎಸ್ ಕುಳ್ಳಿ |
| 33. | ಐತಿಹಾಸಿಕ ಭಾಷಾ ವಿಜ್ಞಾನ, ವರ್ಣನಾತ್ಮಕ ಭಾಷಾ ವಿಜ್ಞಾನ | ಜೆ. ಎಸ್ ಕುಳ್ಳಿ |
| 34. | ದ್ರಾವಿಡ ಭಾಷಾ ಚರಿತ್ರೆ | ಹಂ.ಪ ನಾಗರಾಜಯ್ಯ |
| 35. | ದ್ರಾವಿಡ ಭಾಷಾ ವ್ಯಾಸಂಗ | ಸಂಗಮೇಶ ಸವದತ್ತಿಮಠ |
| 36. | ಕನ್ನಡ ವ್ಯಾಕರಣ ಮತ್ತು ರಚನೆ | ಎನ್ ಗೋಪಾಲಕೃಷ್ಣ ಉಡುಪ |
| 37. | ಕನ್ನಡ ಮೂಲ ವ್ಯಾಕರಣ | ಪಂಜೇ ಮಂಗೇಶರಾವ್ |
| 38. | ಹಳೆಗನ್ನಡ ನಿಘಂಟು | ಎನ್ ಬಸವರಾಧ್ಯ |
| 39. | ಇಗ್ಗೋ ಕನ್ನಡ, ಎರವಲು ಪದಕೋಶ | ಜಿ ವೆಂಕಟಸುಬ್ಬಯ್ಯ |
| 40. | ಕನ್ನಡ ವ್ಯಾಕರಣ | ಗಣೇಶ |
| 41. | ಹೊಸಗನ್ನಡ ನುಡಿಗನ್ನಡ (ಕ್ರಿ.ಶ 1838 ಶ್ರೀರಂಗಪಟ್ಟಣ ಕೃಷ್ಣಮಾಚಾರ್ಯ) | ಕೆ. ಕೃಷ್ಣಮಾಚಾರ್ಯ |
| 42. | Karnataka Vyakaran | ಜಾನ್ ಮೆಕೆರೆಲ್ (ಕ್ರಿ.ಶ 1820) |
| 43. | ಕೇಶಿರಾಜ ಕೃತ ಶಬ್ದಮಣಿ ದರ್ಪಣಂ | ಎಚ್. ನಂಜೇಗೌಡ |
| 44. | ದರ್ಪಣ ವಿವರಣ (ಕ್ರಿ.ಶ 2010) | ಡಾ. ಟಿ.ವಿ ವೆಂಕಟಾಚಲಶಾಸ್ತ್ರಿಗಳು |

Gurubasavaraj Online Kottur



Scanned with OKEN Scanner

## ಈ ಹಿಂದೆ ನಡೆದ ಪರೀಕ್ಷೆಗಳಲ್ಲಿ ಈ ವಿಷಯದ ಮೇಲೆ ಕೇಳಲಾದ ಪ್ರಶ್ನೆಗಳು

1. ಕೇಶಿರಾಜನ 'ಶಬ್ದಮಣಿದರ್ಪಣಂ' ಕೃತಿಯನ್ನು ಮೊದಲು ಸಂಪಾದಿಸಿ ಪ್ರಕಟಿಸಿದ ವಿದ್ವಾಂಸರು ಯಾರು? **HSTR 2009**
   (1) ರೆವರೆಂಡ್ ಎಫ್.ಕಿಟ್ಟೆಲ್ (2) ಜೆ. ಗ್ಯಾರೆಟ್
   (3) ವಿಲಿಯಂ ರೀವ್ (4) ಡಾ. ಡಿ.ಎಲ್. ನರಸಿಂಹಾಚಾರ್

2. ಕೇಶಿರಾಜನ ಪ್ರಕಾರ ಅಚ್ಚಗನ್ನಡ ಶುದ್ಧಗೆಗಳ ಸಂಖ್ಯೆ **GPSTR 2022**
   (1) 42 (2) 45
   (3) 47 (4) 49

3. ಕನ್ನಡ ವ್ಯಾಕರಣವನ್ನು ಸಂಸ್ಕೃತದಲ್ಲಿ ಬರೆದ ಪಂಡಿತರು ಯಾರು? **FDA 2019, Group C 2016**
   (1) ಒಂದನೆಯ ನಾಗವರ್ಮ (2) ಎರಡನೇ ನಾಗವರ್ಮ
   (3) ಕೇಶಿರಾಜ (4) ಒಂದನೇ ಗುಣವರ್ಮ

4. ನಯಸೇನನ್ನು 'ಕರ್ನಾಟಕ ಕಾದಂಬರಿ' ಕೃತಿಯನ್ನು ಬರೆದನು. **FDA 2019 & SDA 2006**
   1) ಒಂದನೇ ನಾಗವರ್ಮ (2) ನಾಗವರ್ಮಾಚಾರ್ಯ
   (3) ಎರಡನೇ ನಾಗವರ್ಮ (4) ನಾಗಚಂದ್ರ

5. ಕರ್ನಾಟಕ ಕಾದಂಬರಿ ಎಂಬ ಕಾವ್ಯ ಈ ಕವಿಯದು **HSTR 2008**
   (1) ಬಾಣ
   (2) ನಾಗವರ್ಮ – 1
   (3) ನಾಗವರ್ಮ – 2 (4) ವೀ ಸೀತಾರಾಮಯ್ಯ

6. ನಾಗವರ್ಮನ 'ಕರ್ನಾಟಕ ಕಾದಂಬರಿ' ಇದು **HSTR 2009**
   (1) ನಾಟಕ (2) ಗದ್ಯ
   (3) ಕಾದಂಬರಿ (4) ಚಂಪೂ ಕಾವ್ಯ

7. ಎರಡನೇ ನಾಗವರ್ಮನ ಕೃತಿ **HSTR 2009, HSTR 2015**
   (1) ರಸರತ್ನಾಕರ (2) ಕಾವ್ಯದರ್ಶ
   (3) ಶೃಂಗಾರ ರತ್ನಾಕರ (4) ಕಾವ್ಯಲಂಕಾರ

8. ಇವರೊಳಗೆ 'ಛಂದೋಂಬುಧಿಯ' ಕರ್ತೃ ಯಾರು? **HSTR 2008**
   (1) ನಾಗವರ್ಮ (2) ನಾಗಚಂದ್ರ
   (3) ಈಶ್ವರ ಕವಿ (4) ನಂದಿ

9. ಕಾವ್ಯಾವಲೋಕನವು ಒಂದು **HSTR 2008**
   (1) ವ್ಯಾಕರಣ ಗ್ರಂಥ (2) ಲಕ್ಷಣ ಗ್ರಂಥ
   (3) ಛಂದಸಶಾಸ್ತ್ರ ಗ್ರಂಥ (4) ಗಾಳಿಕೊಳಲು

10. ಕೆಳಗಿನವುಗಳಲ್ಲಿ 'ಮೃತಭಾಷೆ' ಯನ್ನು ಗುರುತಿಸಿ. **Group C 2016**
   (1) ಸಂಸ್ಕೃತ (2) ಫ್ರೆಂಚ್
   (3) ಜಪಾನಿ (4) ಜರ್ಮನ್

11. ಕೇಶಿರಾಜನು ಹೇಳುವ ಶುದ್ಧಗೆಗಳು ಸಂಖ್ಯೆ **HSTR 2009**
   (1) 35 (2) 47
   (3) 57 (4) 37

12. "ವ್ಯಾಕರಣದಿಂದ ಪದ, ಪದದಿಂದ ಅರ್ಥ, ಅರ್ಥದಿಂದ ತತ್ವ, ತತ್ವದಿಂದ ಮೋಕ್ಷ ಲಭಿಸುತ್ತದೆ." ಈ ಪ್ರಸಿದ್ಧ ಹೇಳಿಕೆ ನೀಡಿದವರು: **Group C 2018**
   (1) ದಂಡಿ (2) ಕೇಶಿರಾಜ
   (3) 2ನೇ ನಾಗವರ್ಮ (4) ಭಟ್ಟಾಕಳಂಕ

13. 'ಶಬ್ದಮಣಿದರ್ಪಣಂ' ಗ್ರಂಥದ ಕರ್ತ **ಉಪ ನೇಮಕಾತಿ 2010**
   (1) ನಾಗವರ್ಮ (2) ಕೇಶಿರಾಜ
   (3) ಭಟ್ಟಾಕಳಂಕ (4) ಪಿಂಗಳ

14. ಕೇಶಿರಾಜ ಬರೆದ ವ್ಯಾಕರಣ ಕೃತಿ
   (1) ಶಬ್ದಾನು ಶಾಸನ (2) ಕವಿರಾಜಮಾರ್ಗ
   (3) ಭಾಷಾ ಭೂಷಣ (4) ಶಬ್ದಮಣಿದರ್ಪಣ

15. ಶಬ್ದಸ್ಮೃತಿ ಅಧಿಕರಣವು ಈ ಕೃತಿಯಲ್ಲಿದ
   (1) ಕಾವ್ಯವಲೋಕನ (2) ಶಬ್ದಮಣಿದರ್ಪಣ
   (3) ಶಬ್ದಾನು ಶಾಸನ (4) ಕರ್ನಾಟಕ ಭಾಷಾಭೂಷಣ

16. _______ ಎಂಬ ಪಾಶ್ಚಾತ್ಯ ವಿದ್ವಾಂಸರು ಕನ್ನಡ–ಇಂಗ್ಲಿಷ್ ನಿಘಂಟನ್ನು ರಚಿಸಿದ್ದಾರೆ. **FDA 1997**
   (1) ಕಿಟೆಲ್ (2) ರೈಸ್
   (3) ಫ್ಲೀಟ್ (4) ಗುಂಡರ್ಟ್

17. 1915ರಲ್ಲಿ ಪ್ರಕಟವಾದ 'ಎ' ಹಿಸ್ಟರಿ ಆಫ್ ಕೆನರೀಸ್ ಲಿಟರೇಚರ್' ಎಂಬ ಇಂಗ್ಲೀಷ್ ಗ್ರಂಥ (ಕನ್ನಡ ಸಾಹಿತ್ಯ ಚರಿತ್ರೆ) ದ ರಚಕ **FDA 2005**
   (1) ಬಿ.ಎಲ್.ರೈಸ್ (2) ಫ್ಲೀಟ್
   (3) ಇ.ಪಿ.ರೈಸ್ (4) ಕಿಟೆಲ್

18. ಕಾರ್ನ್ ವಾಲೀಸ್ ಕನ್ನಡ ಶಾಸನ ಸಂಪುಟಗಳನ್ನು ಹೊರತಂದಿದ್ದಾರೆ. **FDA 2008**

Gurubasavaraj Online Kotur



Scanned with OKEN Scanner

(1) ಇ. ಪಿ. ರೈಸ್ (2) ಬಿ. ಎಲ್. ರೈಸ್
(3) ಕಿಟ್ಟೆಲ್ (4) ಝೀಗ್ಲರ್

19. 'ಮಧ್ಯಮ ವ್ಯಾಕರಣ' ಎಂಬ ಗ್ರಂಥವನ್ನು ಬರೆದವರು ಟಿ.ವಿ. ವೆಂಕಟಾಚಲ ಶಾಸ್ತ್ರ **SDA 1998**
(1) ಡಿ.ಎಲ್. ನರಸಿಂಹಾಚಾರ್ (2) ತೀ.ನಂ. ಶ್ರೀಕಂಠಯ್ಯ
(3) ಜಿ.ಎಂ. ಶ್ರೀಕಂಠಯ್ಯ (4) ಟಿ.ಎಸ್. ವೆಂಕಣ್ಣಯ್ಯ

20. 'ಇಗೋ ಕನ್ನಡ' ಎಂಬ ಹೆಸರಿನ ಅಂಕಣ ಬರೆಯುತ್ತಿದ್ದವರು **FDA 2019**
(1) ಪಾ.ವೆಂ.ಆಚಾರ್ಯ (2) ಅಮೃತ ಸೋಮೇಶ್ವರ
(3) ಕೆ.ವಿ ನಾರಾಯಣ (4) ಜಿ. ವೆಂಕಟಸುಬ್ಬಯ್ಯ

21. ಭಾಷಾ ವಿಜ್ಞಾನದ ಮೂಲತತ್ವಗಳು ಕೃತಿಯನ್ನು ರಚಿಸಿದವರು **FDA 2019**
(1) ಕುಶಾಲಪ್ಪ ಗೌಡ (2) ರಾಜೇಶ್ವರಿ ಎಂ
(3) ಡಾ. ಸೌದತ್ತಿ ಮಠ (4) ಚಿದಾನಂದಮೂರ್ತಿ

22. ಕರ್ನಾಟಕ ಸಂಸ್ಕೃತಿ ಸಮೀಕ್ಷೆ ಎಂಬ ಗ್ರಂಥವನ್ನು ಬರೆದರವು. **SDA 2008**
(1) ಎಂ, ಚಿದಾನಂದ ಮೂರ್ತಿ
(2) ಎಂ.ಎಂ. ಕಲಬುರ್ಗಿ
(3) ಎಂ. ಮರಿಯಪ್ಪಭಟ್ಟ
(4) ತಿಪ್ಪೇರುದ್ರಸ್ವಾಮಿ

23. 'ಕಿಟೆಲ್ ಕೋಶದ ಗಾದೆಗಳು' ಕೃತಿಯ ಸಂಪಾದಕರು
(1) ಜೀ.ಶಂ. ಪರಮಶಿವಯ್ಯ (2) ಹಿ.ಶಿ. ರಾಮಚಂದ್ರೇ ಗೌಡ
(3) ರಾಮೇ ಗೌಡ (4) ಅಂಬಳಿಕೆ ಹಿರಿಯಣ್ಣ

24. 'ಕನ್ನಡ ಮಧ್ಯಮ ವ್ಯಾಕರಣ'ವನ್ನು ಬರೆದವರು. **SDA 2008**
(1) ತೀ.ನಂ. ಶ್ರೀಕಂಠಯ್ಯ (2) ಬಿ.ಎಂ. ಶ್ರೀಕಂಠಯ್ಯ
(3) ಕೆ.ವಿ. ಪುಟ್ಟಪ್ಪ (4) ದೇ. ಜವರೇಗೌಡ

25. 'ಕನ್ನಡ – ಇಂಗ್ಲೀಷ್ ನಿಘಂಟು' ರಚಿಸಿದವರು **Group C 2018**
(1) ರೆ.ಎಫ್. ಕಿಟೆಲ್ (2) ಎಂ. ಮರಿಯಪ್ಪ ಭಟ್ಟ
(3) ತೀ.ನಂ. ಶ್ರೀಕಂಠಯ್ಯ (4) ಜೆ.ಎಫ್. ಫ್ಲೀಟ್

26. ಕನ್ನಡದಲ್ಲಿ ಮೊದಲು ನಿಘಂಟನ್ನು ಬರೆದ ಪಾಶ್ಚಿಮಾತ್ಯರು: **Group C 2017**
(1) ಬಿ. ಎಲ್. ರೈಸ್ (2) ಮೋಗ್ಲಿಂಗ್
(3) ಕಿಟೆಲ್ (4) ಟಿ. ಎಸ್. ಇಲಿಯಟ್

27. 'ಕನ್ನಡ ಭಾಷೆ ಮತ್ತು ವ್ಯಾಕರಣಗಳ ಒಂದು ಅಧ್ಯಯನ' ಈ ಕೃತಿಯನ್ನು ರಚಿಸಿದವರು.
(1) ಕೆ. ಕುಶಾಲಪ್ಪಗೌಡ (2) ತಿ.ನಂ.ಶ್ರೀ
(3) ತರಾಸು (4) ಶಂಕರಭಟ್ಟ

28. The Structure of Kannada ಈ ಕೃತಿಯ ಕರ್ತೃ
(1) ಆರ್.ಸಿ ಹಿರೇಮಠ (2) ವಿಲಿಯಂ ಬ್ರೈಟ್ಸ್
(3) ಗ್ಲೀಸನ್ (4) ಕಾಲ್ಡವೆಲ್

29. History of Kannada Language ಈ ಕೃತಿಯನ್ನು ಬರೆದವರು **KSET 2017**
(1) ಆರ್. ನರಸಿಂಹಾಚಾರ (2) ಡಿ. ಎಲ್ ನರಸಿಂಹಾಚಾರ
(3) ಗೋವಿಂದಾಚಾರ್ (4) ಎಸ್. ಜಿ ನರಸಿಂಹಾಚಾರ

30. A Grammar Of Kannada Language ಕೃತಿಯ ಕರ್ತೃ
(1) ಆರ್ ಎಸ್ ಮುಗುಳಿ (2) ಸೋಡಿಯಾಪು ಕೃಷ್ಣಭಟ್ಟ್
(3) ಫರ್ಡಿನ್ಯಾಂಡ್ ಕಿಟೇಲ್ (4) ಎಂ.ಎಚ್ ಕೃಷ್ಣ

31. The Heritage of Karnataka ಇದರ ಕರ್ತೃ
(1) ಆರ್ ಎಸ್ ಮುಗುಳಿ (2) ಎಫ್ ಕಿಟೇಲ್
(3) ಬಿ.ಎಲ್ ರೈಸ್ (4) ಇ.ಪಿ ರೈಸ್

32. History of Kannada literature ಬರೆದ ಲೇಖಕ
(1) ಆರ್ ಎಸ್ ಮುಗುಳಿ (2) ಸೇಡಿಯಾಪು ಕೃಷ್ಣಭಟ್
(3) ಮ. ಪ್ರ. ಪೂಜಾರ (4) ವೆಂಕಟರಂಗೋಕಟ್ಟಿ

33. ಕಿಟ್ಟೆಲ್ ಕೋಶವನ್ನು ಪರಿಷ್ಕರಿಸಿದವರು **ಮೊರಾರ್ಜಿ 2011**
(1) ಬಿ.ಎಲ್ ರೈಸ್ (2) ಜೆ.ಎಫ್ ಫ್ಲೀಟ್
(3) ಟಿ.ಎಸ್ ವೆಂಕಣ್ಣಯ್ಯ (4) ಎಂ ಮರಿಯಪ್ಪ ಭಟ್ಟ

**ಉತ್ತರಗಳು**

| | | | | |
|---|---|---|---|---|
| 1) 2 | 2) 3 | 3) 2 | 4) 1 | 5) 2 |
| 6) 4 | 7) 3 | 8) 1 | 9) 2 | 10) 1 |
| 11) 2 | 12) 2 | 13) 2 | 14) 4 | 15) 1 |
| 16) 1 | 17) 3 | 18) 2 | 19) 2 | 20) 4 |
| 21) 4 | 22) 4 | 23) 3 | 24) 1 | 25) 1 |
| 26) 3 | 27) 1 | 28) 1 | 29) 1 | 30) 3 |
| 31) 4 | 32) 1 | 33) 4 | | |

Gurubasavaraj Online Kottur



Scanned with OKEN Scanner

ಅಧ್ಯಾಯ 2

# ಅಕ್ಷರಮಾಲೆ/ವರ್ಣಮಾಲೆ

## ಶುದ್ಧಾಕ್ಷರಕ್ಕೆ ಅಕ್ಕರ (ಅಕ್ಷರ) ಅಥವಾ ವರ್ಣವೆಂದು ಹೆಸರು

ಭಾಷೆಯು ಧ್ವನಿಯ ಮೂಲಕ ಪ್ರಾರಂಭವಾಗಿ ಬರಹ (ಲಿಪಿ) ದಿಂದ ವ್ಯಕ್ತವಾಗುತ್ತದೆ. ಹೀಗೆ ಅಕ್ಷರ ಅಥವಾ ಶಬ್ದಗಳು ಮಾತಿನಲ್ಲಿರುವ ಧ್ವನಿಯ ರೂಪವೇ ಆಗಿದೆ.

ಸಾಮಾನ್ಯವಾಗಿ ಮಾತಿನಲ್ಲಿರುವ ಧ್ವನಿಯ ರೂಪದ ಭಾಷೆ ನುಡಿದ ಕೂಡಲೇ ಅಳಿಸಿ ಹೋಗುತ್ತದೆ. ಆದರೆ ಬರಹ ರೂಪದಲ್ಲಿರುವ (ಲಿಪಿ) ಸಂಕೇತಗಳು ಅಳಿಯದೆ ಉಳಿಯುವಂತಹುಗಳು, ಆದ್ದರಿಂದಲೇ **'ಅಕ್ಷರ'** ಎಂದರೆ ನಾಶವಾಗದಿರುವುದು ಎಂದರ್ಥ.

- ಕೇಶಿರಾಜನು ಈ ಅಕ್ಷರಗಳನ್ನು **'ವರ್ಣ'** ಎಂದು ಶಬ್ದಮಣಿದರ್ಪಣದಲ್ಲಿ ತಿಳಿಸಿದ್ದಾನೆ.

> **ನೆನಪಿಡಿ**
>
> **ಅಕ್ಷರ ಎಂದರೇನು?**
>
> ಭಾಷೆಯ ಅರ್ಥವತ್ತಾದ ಧ್ವನಿಯ ಬರಹರೂಪವುಳ್ಳ ಸಂಕೇತಗಳು ಮಾತ್ರ ಅಕ್ಷರವೆನಿಸುತ್ತದೆ. ಆದ್ದರಿಂದ ಒಂದು ಭಾಷೆಯ ಅತಿ ಚಿಕ್ಕ ಅಂಶವೆಂದರೆ **'ಅಕ್ಷರ/ವರ್ಣ'**

**ಅತಿಮುಖ್ಯವಾದ ಅಂಶಗಳು**

- ಹಳೆಗನ್ನಡ ವರ್ಣಮಾಲೆಯಲ್ಲಿ ಒಟ್ಟು **50** ಅಕ್ಷರಗಳಿದ್ದು, ಆದರೆ ಪ್ರಸ್ತುತ ಹೊಸಗನ್ನಡ ವರ್ಣಮಾಲೆಯಲ್ಲಿ 'ೠ' ಅಕ್ಷರವನ್ನು ಹೊರತುಪಡಿಸಿ ಒಟ್ಟು **49** ಅಕ್ಷರಗಳಿವೆ.
- ಅದೇ ರೀತಿ ಕೇಶಿರಾಜನ ವ್ಯಾಕರಣ ಗ್ರಂಥವಾದ ಶಬ್ದಮಣಿದರ್ಪಣದಲ್ಲಿ **47** ಅಕ್ಷರಗಳಿವೆ. (ಕೇಶಿರಾಜನು ತನ್ನ ವ್ಯಾಕರಣ ಗ್ರಂಥವಾದ **ಶಬ್ದಮಣಿದರ್ಪಣದಲ್ಲಿ 47** ಶುದ್ಧಗೆಗಳ ಸಂಖ್ಯೆ ಎಂದು ತಿಳಿಸಿದ್ದಾನೆ.)
- **ಕೆಪಿಎಸ್ಸಿ** ಪ್ರಕಾರ ಕನ್ನಡ ವರ್ಣಮಾಲೆಯಲ್ಲಿ ಇರುವ ವರ್ಣಗಳ ಸಂಖ್ಯೆ **49**.
- ಕನ್ನಡ ಕೈಪಿಡಿಕಾರರ ಪ್ರಕಾರ ಕನ್ನಡ ವರ್ಣಮಾಲೆಯಲ್ಲಿರುವ ವರ್ಣಗಳ ಸಂಖ್ಯೆ **32**.
- ಆಧುನಿಕ ಭಾಷಾ ವಿಜ್ಞಾನಿಗಳ ಪ್ರಕಾರ ಕನ್ನಡ ವರ್ಣಮಾಲೆಯಲ್ಲಿ ಇರಬೇಕಾದ ವರ್ಣಗಳ ಸಂಖ್ಯೆ **26**.

ಕನ್ನಡದಲ್ಲಿ ಇರುವ ಒಟ್ಟು 49 ಅಕ್ಷರಗಳನ್ನು ವರ್ಣಗಳೆಂದು ಹಾಗು ವರ್ಣಗಳ ಕ್ರಮಬದ್ಧವಾದ ಜೋಡಣೆಯನ್ನು **'ಅಕ್ಷರಮಾಲೆ/ ವರ್ಣಮಾಲೆ'** ಎಂದು ಕರೆಯುತ್ತಾರೆ.

### ಕನ್ನಡ ಅಕ್ಷರಗಳನ್ನು 3 ವಿಧಗಳು

**1]** **ಮೂಲಾಕ್ಷರಗಳು** (ಅ ಇಂದ ಳ ವರೆಗೆ)

**2]** **ಗುಣಿತಾಕ್ಷರಗಳು** (ಕ ಕಾ ಕಿ ಕೀ....)

**3]** **ಸಂಯುಕ್ತಾಕ್ಷರಗಳು / ಒತ್ತಕ್ಷರಗಳು** (ಕ್ಕ, ಮ್ಮ, ವ್ಯ,ಸ್ರ..)

**I] ಮೂಲಾಕ್ಷರಗಳು:** ಕನ್ನಡ ವರ್ಣಮಾಲೆಯ ಮೂಲಾಕ್ಷರಗಳನ್ನು 3 ಭಾಗಗಳಾಗಿ ವಿಂಗಡಿಸಬಹುದು.

1) ಸ್ವರಗಳು: ಅ – ಔ (13)
2) ಯೋಗವಾಹಗಳು: ಅಂ, ಅಃ (2)
3) ವ್ಯಂಜನಗಳು: ಕ – ಳ (34)

**ಸ್ವರಗಳು (13):** ಬೇರೊಂದು ಅಕ್ಷರದ ಸಹಾಯವಿಲ್ಲದೆ ಸ್ವತಂತ್ರವಾಗಿ ಉಚ್ಚರಿಸುವ ಅಕ್ಷರವನ್ನು **ಸ್ವರಗಳು** ಎನ್ನುತ್ತಾರೆ.

ಅವು: **ಅ ಆ ಇ ಈ ಉ ಊ ಋ ಎ ಏ ಐ ಒ ಓ ಔ**

**ಯೋಗವಾಹಗಳು (2):** GPSTR 2017

**ಕನ್ನಡದಲ್ಲಿ ಯೋಗವಾಹಗಳು ಎರಡು**

1. ಂ – ಅನುಸ್ವಾರ (ಒಂದು ಅಕ್ಷರಗಾತ್ರದ ಒಂದು ಸೊನ್ನೆ)
2. ಃ – ವಿಸರ್ಗ (ಎರಡು ಸಣ್ಣ ಸೊನ್ನೆಗಳು ಒಂದರ ಕೆಳಗೆ ಒಂದರಂತೆ ಒಂದು ಅಕ್ಷರಗಾತ್ರದಲ್ಲಿ)

**ಯೋಗ** ಎಂದರೆ ಕೂಡು, **ವಾಹ** ಎಂದರೆ ಹೋಗುವ ಎಂದರ್ಥ. ಒಟ್ಟಾಗಿ ಯೋಗವಾಹ ಎಂದರೆ ಕೂಡಿಹೋಗುವ ಎಂದರ್ಥ. ಅಂದರೆ ಒಂದು ಅಕ್ಷರದೊಂದಿಗೆ ಸಂಬಂಧ ಹೊಂದಿದ ಮೇಲೆಯೇ ಉಚ್ಚಾರ ಮಾಡಲು ಬರುವ ಅಕ್ಷರ.

> **ನೆನಪಿಡಿ**
>
> ಸ್ವತಂತ್ರವಲ್ಲದ, ಸ್ವರವೂ ಅಲ್ಲದ, ವ್ಯಂಜನವೂ ಅಲ್ಲದ ಸ್ವರಾಕ್ಷರಗಳ ಅಂತ್ಯದಲ್ಲಿನ ಹಾಗೂ ವ್ಯಂಜನಗಳ ಆರಂಭಾಕ್ಷರಗಳ ನಡುವಿನ ಎರಡು ಅಕ್ಷರಗಳನ್ನು ಯೋಗವಾಹಕ ಎಂದು ಕರೆಯುತ್ತಾರೆ.

Gurubasavaraj Online Kottur



Scanned with OKEN Scanner

**ವ್ಯಂಜನಗಳು (34):** ಸ್ವರಗಳ ಸಹಾಯದಿಂದ ಉಚ್ಚರಿಸುವ ಅಕ್ಷರಗಳನ್ನು ವ್ಯಂಜನಗಳು ಎಂದು ಕರೆಯುತ್ತಾರೆ.

ವ್ಯಂಜನಗಳನ್ನು ಮತ್ತೆ 2 ಭಾಗಗಳಾಗಿ ವಿಂಗಡಿಸಲಾಗಿದೆ.

1) ವರ್ಗೀಯ ವ್ಯಂಜನಗಳು: ಕ – ಮ (25)

2) ಅವರ್ಗೀಯ ವ್ಯಂಜನಗಳು: ಯ – ಳ (9)

**1) ವರ್ಗೀಯ ವ್ಯಂಜನಗಳು:** ಅಕ್ಷರಗಳ ಉಚ್ಚಾರದ ಅನುಸಾರ ಗುಂಪುಗಳಾಗಿ/ವರ್ಗೀಕರಿಸಲು ಬರುವ ಅಕ್ಷರಗಳು.

**ಪ್ರತಿ ವರ್ಗದಲ್ಲಿ 5 ಅಕ್ಷರಗಳಿರುತ್ತವೆ**

| ವರ್ಗ | 1 ಅಲ್ಪ ಪ್ರಾಣ | 2 ಮಹಾ ಪ್ರಾಣ | 3 ಅಲ್ಪ ಪ್ರಾಣ | 4 ಮಹಾ ಪ್ರಾಣ | 5 |
|---|---|---|---|---|---|
| 'ಕ' ವರ್ಗ | ಕ್ | ಖ್ | ಗ್ | ಘ್ | ಙ್ |
| 'ಚ' ವರ್ಗ | ಚ್ | ಛ್ | ಜ್ | ಝ್ | ಞ್ |
| 'ಟ' ವರ್ಗ | ಟ್ | ಠ್ | ಡ್ | ಢ್ | ಣ್ |
| 'ತ' ವರ್ಗ | ತ್ | ಥ್ | ದ್ | ಧ್ | ನ್ |
| 'ಪ' ವರ್ಗ | ಪ್ | ಫ್ | ಬ್ | ಭ್ | ಮ್ |

**2) ಅವರ್ಗೀಯ ವ್ಯಂಜನಗಳು:** ಅಕ್ಷರಗಳ ಉಚ್ಚಾರದ ಅನುಸಾರ ವರ್ಗೀಕರಿಸಲು ಬಾರದ ಅಕ್ಷರಗಳು.

| | | | | | | | |
|---|---|---|---|---|---|---|---|
| ಯ್ | ರ್ | ಲ್ | ವ್ | ಶ್ | ಸ್ | ಹ್ | ಳ್ |

## 2] ಕನ್ನಡದ ಗುಣಿತಾಕ್ಷರಗಳು:

ವ್ಯಂಜನ ಮತ್ತು ಸ್ವರ ಸೇರಿ ಆಗುವ ಅಕ್ಷರವನ್ನು 'ಗುಣಿತಾಕ್ಷರ' ಎನ್ನುವರು. ಉದಾ:

| | (ವ್ಯಂಜನ + ಸ್ವರ) | ಪೂರ್ಣ ಅಕ್ಷರ |
|---|---|---|
| ಹ್ರಸ್ವ ಸ್ವರ: | (ಕ್ + ಅ) | ಕ |
| ದೀರ್ಘಸ್ವರ: | (ಕ್ + ಆ) | ಕಾ |

ಕ ಕಾ ಕಿ ಕೀ ಕು ಕೂ ಕೃ ಕೆ ಕೇ ಕೈ ಕೊ ಕೋ ಕೌ ಕಂ ಕಃ

## 3] ಸಂಯುಕ್ತಾಕ್ಷರಗಳು / ಒತ್ತಕ್ಷರ ಅಥವಾ ದಡ್ಡಕ್ಕರ

ವ್ಯಂಜನಕ್ಕೆ ವ್ಯಂಜನ ದ್ವಿತ್ವವಾಗಿ ಸೇರಿಕೊಂಡು (ಸ್ವರದ ಸಹಾಯದಿಂದ) ಉಂಟಾಗುವ ಅಕ್ಷರವನ್ನು **ಸಂಯುಕ್ತಾಕ್ಷರ** ಅಥವಾ **ಒತ್ತಕ್ಷರ** ಅಥವಾ **ದ್ವಿತ್ವಾಕ್ಷರ** ಎಂದು ಕರೆಯುವರು.

ಕನ್ನಡದಲ್ಲಿ ಒಟ್ಟು (34) ಒತ್ತಕ್ಷರಗಳಿವೆ ಅವು:

ಕ್ಕ ಖ್ಖ ಗ್ಗ ಘ್ಘ ಙ್ಙ

ಚ್ಚ ಛ್ಛ ಜ್ಜ ಝ್ಝ ಞ್ಞ

ಟ್ಟ ಠ್ಠ ಡ್ಡ ಢ್ಢ ಣ್ಣ

ತ್ತ ಥ್ಥ ದ್ದ ಧ್ಧ ನ್ನ

ಪ್ಪ ಫ್ಫ ಬ್ಬ ಭ್ಭ ಮ್ಮ

ಯ್ಯ ರ್ರ ಲ್ಲ ವ್ವ ಶ್ಶ ಷ್ಷ ಸ್ಸ ಹ್ಹ ಳ್ಳ

> **ನೆನಪಿಡಿ**
>
> **ವಿಸರ್ಗ:** ಕೇಶಿರಾಜನು ವಿಸರ್ಗದ ಬಗ್ಗೆ ಹೀಗೆ ಹೇಳಿದ್ದಾನೆ.
> "ನಿಸರ್ಗಮಾಗಿ ವಿಸರ್ಗಮಿಲ್ಲ"
> ಎಂದು **ಶಬ್ದಮಣಿದರ್ಪಣ** ಗ್ರಂಥದಲ್ಲಿ ಎಂದಿದ್ದಾನೆ.

**ಸಂಯುಕ್ತಾಕ್ಷರಗಳಲ್ಲಿ 2 ವಿಧಗಳಿವೆ :**

1. ಸಜಾತೀಯ ಸಂಯುಕ್ತಾಕ್ಷರಗಳು
2. ವಿಜಾತೀಯ ಸಂಯುಕ್ತಾಕ್ಷರಗಳು.

### 1. ಸಜಾತೀಯ ಸಂಯುಕ್ತಾಕ್ಷರ

ಒಂದೆ ಜಾತಿಯ ಎರಡು ವ್ಯಂಜನಗಳು ಸೇರಿ ಆಗುವ ಅಕ್ಷರಗಳು.

ಉದಾ: ಕ್ + ಕ್ + ಅ = ಕ್ಕ

ಗ್ + ಗ್ + ಆ = ಗ್ಗಾ, ಣ್ + ಣ್ + ಇ = ಣ್ಣಿ

ಸಜಾತೀಯ ಸಂಯುಕ್ತಾಕ್ಷರ ಹೊಂದಿದ ಪದಗಳು

ಉದಾ: ಅಮ್ಮಾ, ಅವ್ವಾ, ಅಪ್ಪಾ, ಕನ್ನಡ, ಹಬ್ಬ, ಗಿಡ್ಡಿ

### 2. ವಿಜಾತೀಯ ಸಂಯುಕ್ತಾಕ್ಷರ

ಬೇರೆ ಬೇರೆ ಜಾತಿಯ ಎರಡು ಅಥವಾ ಎರಡಕ್ಕಿಂತ ಹೆಚ್ಚು ವ್ಯಂಜನಗಳು ಸೇರಿ ಆಗುವ ಅಕ್ಷರಗಳು.

ಉದಾ: ಸ್ + ವ್ + ಅ = ಸ್ವ

ಪ್ + ನ್ + ಆ = ಪ್ನಾ, ಗ್ + ನ್ + ಇ = ಗ್ನಿ

ವಿಜಾತೀಯ ಸಂಯುಕ್ತಾಕ್ಷರ ಹೊಂದಿದ ಪದಗಳು

ಉದಾ: ಶಕ್ತಿ, ಕಂಠ್ಯ, ವಸ್ತ್ರ, ಸ್ತ್ರೀ, ಶ್ರೀ, ಪದ್ಮ, ಪೂಜ್ಯ

**ಹಳಗನ್ನಡ ಅಕ್ಷರಗಳು (ಱಳ, ಕುಳ, ಕ್ಷಳ)**

ಱ (ರ) ಳ–ಕುಳ–ಕ್ಷಳ:

ಕನ್ನಡ ವರ್ಣಮಾಲೆಯಲ್ಲಿ (ವರ್ಣಮಾಲೆ) ಹಿಂದೆ ಮೂರು ರೀತಿಯ 'ಳ' ಕಾರಗಳಿದ್ದುವು. ಅವೇ **ಱಳ, ಕುಳ, ಕ್ಷಳ.**

➲ **ಱಳ ಪ್ರಯೋಗ:** ಈ 'ಳ' ಕಾರವೇ ಱಳ. **ಸೂೞ್** ಪದಕ್ಕೆ ಸರದಿ, ಪಾಳಿ;

Gurubasavaraj Online Kottur



Scanned with OKEN Scanner

- **ಕುಳ ಪ್ರಯೋಗ:** ಕನ್ನಡ ಮೂಲದ ಅಚ್ಚಕನ್ನಡ 'ಳ' (ೞ) ಅಕ್ಷರವೇ ಕುಳ.

  ಎಳ – ಚಿಕ್ಕ, ಸಣ್ಣ; ಕಳಿ – ಪಕ್ವವಾಗು, ಮಾಗು
- **ಕ್ಷಳ ಪ್ರಯೋಗ:** ಸಂಸ್ಕೃತದ 'ಲ' ಅಕ್ಷರಕ್ಕೆ ಬದಲಾಗಿ ಕನ್ನಡದಲ್ಲಿ ಬಳಸುವ 'ಳ' ಕಾರವನ್ನು 'ಕ್ಷಳ' ಎನ್ನುವರು.
- ಜಲ–ಜಳ, ಫಲ–ಫಳ, ಬಲ–ಬಳ, ಮಂಗಲ–ಮಂಗಳ, ಪಿಂಗಲ – ಪಿಂಗಳ, ಅನಲ – ಅನಳ ಇತ್ಯಾದಿ.

ಇದೇ ರೀತಿ 'ರ' ಕಾರದಲ್ಲಿಯೂ ಎರಡು ರೀತಿಯ 'ರ' ಕಾರಗಳು ಇದ್ದುವು. ಅವುಗಳನ್ನು **ರೇಫ,** ಮತ್ತು **ಶಕಟರೇಫ** ಎಂದು ಕರೆಯಲಾಗುತ್ತಿತ್ತು.

- **ಱ > ರ (ಶಕಟರೇಫ – ರೇಫವಾಗಿರುವುದು)**

'ರ' ಅಕ್ಷರವೇ ರೇಫ ಮತ್ತು 'ಱ' ಅಕ್ಷರವೇ ಶಕಟರೇಫ.

ಈ ಅಕ್ಷರಗಳಿಂದ ಕೂಡಿದ ಪದಗಳಿಗೆ ಅರ್ಥ ವ್ಯತ್ಯಾಸವಿತ್ತು.

**ಉದಾ:** ಏರ್– ಹತ್ತು; ಏಱ್ – ಗಾಯ

ನೆರೆ – ಸಮೀಪ, ಅಕ್ಕಪಕ್ಕ ; ನೆಱೆ – ಪ್ರವಾಹ, ಮಹಾಪೂರ

ಮೊರೆ – ಪ್ರಾರ್ಥನೆ; ಮೊಱೆ – ಗೋಳಾಟ, ಗುಂಯ್ ಗುಡು. (ದುಂಬಿ ಮೊಱೆಯುತ್ತದೆ) ಅಱವಟ್ಟಿಗೆ – ಅರವಟ್ಟಿಗೆ

- **ೞ – ಳ (ರಳ > ಕುಳವಾಗಿರುವುದು)**

ಬಾೞ್ – ಬಾಳು.

**ಪ – ಹ ಬದಲಾವಣೆ:** ಹಳಗನ್ನಡದ ಕೆಲವು 'ಪ' ಕಾರ ನಡುಗನ್ನಡದಲ್ಲಿ 'ಹ' ಕಾರವಾಗಿ ಬಳಕೆಯಾಗುತ್ತಿದ್ದುದ್ದರಿಂದ

> ಈ ರೀತಿಯ ಬಳಕೆಯನ್ನು ಕೇಶಿರಾಜ **"ದೇಶಿಯೊಳ್ ಇದು ಚೆಲ್ವು"** ಎಂದು ಶಬ್ದಮಣಿದರ್ಪಣದಲ್ಲಿ ಹೇಳಿದ್ದಾನೆ.

**ಉದಾ:** ಪಳಗನ್ನಡ – ಹಳಗನ್ನಡ, ಪಲ್ಲಿ – ಹಳ್ಳಿ

ಪಾಱು – ಹಾರು, ಪಾಲು – ಹಾಲು, ಪಕ್ಕಿ – ಹಕ್ಕಿ

## ಕನ್ನಡ ಅಕ್ಷರಗಳ ಉಚ್ಚಾರಣಾ ಸ್ಥಾನಗಳು / ಕನ್ನಡ ವರ್ಣೋತ್ಪತ್ತಿಸ್ಥಾನಗಳು

| ವರ್ಣಸ್ಥಾನ | ಅರ್ಥ | ಅಕ್ಷರಗಳು | | |
|---|---|---|---|---|
| 1. ಕಂಠ್ಯವರ್ಣ | ಗಂಟಲಿನಿಂದ ಹುಟ್ಟುವ ಅಕ್ಷರಗಳಿಗೆ ಕಂಠ್ಯವರ್ಣ | ಅ ಆ | ಕ ಖ ಗ ಘ ಙ | ಹ ವಿಸರ್ಗ( ಃ) |
| 2. ತಾಲು/ತಾಲವ್ಯ | ದವಡೆ (ತಾಲು) ಯಿಂದ ಹುಟ್ಟುವ ಅಕ್ಷರಗಳೆ ತಾಲವ್ಯಾಕ್ಷರಗಳು | ಇ ಈ | ಚ ಛ ಜ ಝ ಞ | ಯ ಶ |
| 3. ಮೂರ್ಧನ್ಯ | ನಾಲಿಗೆಯ ಮೇಲ್ಭಾಗ ಮತ್ತು ಮೂಗಿನ ಕೆಳಭಾಗದ ಸಹಾಯದಿಂದ ಹುಟ್ಟುವ ಅಕ್ಷರಗಳು. | ಋ | ಟ ಠ ಡ ಢ ಣ | ರ ಷ ಳ |
| 4. ದಂತ್ಯವರ್ಣ | ಹಲ್ಲುಗಳ ಸಹಾಯದಿಂದ ಹುಟ್ಟುವ ಅಕ್ಷರಗಳು | | ತ ಥ ದ ಧ ನ | ಸ ಲ |
| 5. ಓಷ್ಠವರ್ಣ | ತುಟಿಯ ಸಹಾಯದಿಂದ ಹುಟ್ಟುವ ಅಕ್ಷರಗಳು | ಉ ಊ | ಪ ಫ ಬ ಭ ಮ | ಅಂ (ಅನುಸ್ವಾರ) |
| 6. ದಂತೌಷ್ಠ್ಯ | ಹಲ್ಲು ಮತ್ತು ತುಟಿಯ ಸಹಾಯದಿಂದ ಹುಟ್ಟುವ ಅಕ್ಷರಗಳು | | | ವ |
| 7. ಕಂಠತಾಲು | ಕಂಠ ಮತ್ತು ದವಡೆಯ ಸಹಾಯದಿಂದ ಹುಟ್ಟುವ ಅಕ್ಷರಗಳು | ಎ ಏ ಐ | | |
| 8. ಕಂಠೋಷ್ಠ್ಯ | ಕಂಠ ಮತ್ತು ತುಟಿಯ ಸಹಾಯದಿಂದ ಹುಟ್ಟುವ ಅಕ್ಷರಗಳು | ಒ ಓ ಔ | | |
| 9. ನಾಸಿಕವರ್ಣ | ಮೂಗಿನ ಸಹಾಯದಿಂದ ಹುಟ್ಟುವ ಅಕ್ಷರಗಳು | | ಙ, ಞ ಣ ನ ಮ | |

Gurubasavaraj online Kottur



Scanned with OKEN Scanner

# ಕನ್ನಡ ವರ್ಣಮಾಲೆಯ ವಿವರಣೆ

## ಕನ್ನಡ ವರ್ಣಮಾಲೆ (49)

### ಸ್ವರಗಳು (13)
ಬೇರೊಂದು ಅಕ್ಷರದ ಸಹಾಯವಿಲ್ಲದೆ ಸ್ವತಂತ್ರವಾಗಿ ಉಚ್ಚರಿಸುವ ಅಕ್ಷರಗಳು

#### ಹ್ರಸ್ವಸ್ವರ (6)
ಒಂದು ಮಾತ್ರಾಕಾಲದಲ್ಲಿ ಉಚ್ಚರಿಸುವ ಅಕ್ಷರಗಳು
ಅ ಇ ಉ ಋ ಎ ಒ
(ಹ್ರಸ್ವ ಎಂದರೆ ಚಿಕ್ಕದು)

#### ದೀರ್ಘಸ್ವರ (7)
ಎರಡು ಮಾತ್ರಾಕಾಲದಲ್ಲಿ ಉಚ್ಚರಿಸುವ ಅಕ್ಷರಗಳು
ಆ ಈ ಊ ಏ ಐ ಓ ಔ
(ದೀರ್ಘ ಎಂದರೆ ಉದ್ದದ್ದು)

#### ಪ್ಲುತಸ್ವರ
ಮೂರು ಮಾತ್ರಾಕಾಲದಲ್ಲಿ ಉಚ್ಚರಿಸುವ ಅಕ್ಷರಗಳು
ಅಮ್ಮಾSS, ಅಪ್ಪಾSS,
ಹಾ ರಾಮಾ, ಅಕ್ಕಾSS

### ವ್ಯಂಜನಗಳು (34)
ಸ್ವರಗಳ ಸಹಾಯದಿಂದ ಉಚ್ಚರಿಸುವ ಅಕ್ಷರಗಳು

#### ವರ್ಗೀಯ ವ್ಯಂಜನ (25)
ಅಕ್ಷರಗಳ ಉತ್ಪತ್ತಿಸ್ಥಾನದ ಆಧಾರದ ಮೇಲೆ ಸರಿಯಾಗಿ ವರ್ಗಿಕರಿಸಲು ಬರುವ ವ್ಯಂಜನಗಳನ್ನು ವರ್ಗೀಯ ವ್ಯಂಜನಗಳೆಂದು ಕರೆಯುತ್ತೇವೆ. ವರ್ಗಿಯ ವ್ಯಂಜನವನ್ನು ಮತ್ತೆ 3 ಭಾಗಗಳಾಗಿ ವಿಂಗಡಿಸಬಹುದು.

##### ಅಲ್ಪಪ್ರಾಣ (10)
ಕಡಿಮೆ ಉಸಿರಿನಿಂದ ಉಚ್ಚರಿಸುವ ಅಕ್ಷರಗಳು
1 ಮತ್ತು 3ನೇ ವರ್ಗದ ಅಕ್ಷರಗಳು
ಕ್ ಮತ್ತು ಗ್
ಚ್ ಮತ್ತು ಜ್
ಟ್ ಮತ್ತು ಡ್
ತ್ ಮತ್ತು ದ್
ಪ ಮತ್ತು ಬ್

##### ಮಹಾಪ್ರಾಣ (10)
ಹೆಚ್ಚು ಉಸಿರಿನಿಂದ ಉಚ್ಚರಿಸುವ ಅಕ್ಷರಗಳು
2 ಮತ್ತು 4ನೇ ವರ್ಗದ ಅಕ್ಷರಗಳು
ಖ್ ಮತ್ತು ಘ್
ಛ್ ಮತ್ತು ಝ್
ಠ್ ಮತ್ತು ಢ್
ಥ್ ಮತ್ತು ಧ್
ಫ್ ಮತ್ತು ಭ್

##### ಅನುನಾಸಿಕಗಳು (5)
ಕಡಿಮೆ ಉಸಿರಿನಿಂದ ಉಚ್ಚರಿಸುವ ಅಕ್ಷರಗಳು
5ನೇ ವರ್ಗದ ಅಕ್ಷರಗಳು
ಙ್ ಞ್ ಣ್ ನ್
ಮ್


#### ಅವರ್ಗೀಯ ವ್ಯಂಜನ (9)
ಅಕ್ಷರಗಳ ಉತ್ಪತ್ತಿಸ್ಥಾನದ ಆಧಾರದ ಮೇಲೆ ಸರಿಯಾಗಿ ವರ್ಗೀಕರಿಸಲು ಬಾರದ ವ್ಯಂಜನಗಳನ್ನು ಅವರ್ಗೀಯ ವ್ಯಂಜನಗಳೆಂದು ಕರೆಯುತ್ತೇವೆ.
ಯ್ ರ್ ಲ್ ವ್ ಶ್ ಷ್ ಸ್ ಹ್ ಳ್

### ಯೋಗವಾಹಗಳು (2)
ಸ್ವತಂತ್ರವಲ್ಲದ, ಸ್ವರವೂ ಅಲ್ಲದ, ವ್ಯಂಜನವೂ ಅಲ್ಲದ ಸ್ವರಾಕ್ಷರಗಳ ಅಂತ್ಯದಲ್ಲಿನ ಹಾಗು ವ್ಯಂಜನಗಳ ಆರಂಭಾಕ್ಷರಗಳ ನಡುವಿನ 2 ಅಕ್ಷರಗಳನ್ನು **ಯೋಗವಾಹಗಳು** ಎಂದು ಕರೆಯುತ್ತಾರೆ.

#### ಅನುಸ್ವಾರ (1)
ಅಂ

#### ವಿಸರ್ಗ (1)
ಅಃ

**ಕನ್ನಡ ವರ್ಣಮಾಲೆಯ ಬರಹ ರೂಪದ ಉಲ್ಲೇಖವುಳ್ಳ ಏಕೈಕ ಶಾಸನ: ಕೆರೆ ಸಂತೆ ಶಾಸನ ಚಿಕ್ಕಮಗಳೂರು ಜಿಲ್ಲೆ.**



ಕೆರೆಸಂತೆ ಶಾಸನದಲ್ಲಿ ಒಟ್ಟು 49 ಅಕ್ಷರಗಳಿವೆ.
ಕೃಪೆ: Epigraphical Society of India Journal Volume XXIX

Gurubasavaraj Online Kottur



Scanned with OKEN Scanner

## ಕನ್ನಡದ ಶುದ್ಧಾಕ್ಷರಗಳ ವಿಧಗಳು

| | | |
|---|---|---|
| ಸ್ವರ | 13 | ಅ ಇಂದ ಔ |
| ವರ್ಗೀಯ ವ್ಯಂಜನ | 25 | ಕಚಟತಪ – ವರ್ಗಗಳು |
| ಅವರ್ಗೀಯ ವ್ಯಂಜನ | 9 | ಯ–ಳ |
| ಯೋಗವಾಹ | 2 | ಅನುಸ್ವಾರ, ವಿಸರ್ಗ |

Group C 2021

- ಬೇರೆ ವರ್ಣಗಳ ಸಹಾಯದಿಂದ ಉಚ್ಚರಣೆಗೆ ಬರುವ ವರ್ಣಗಳನ್ನು **ಯೋಗವಾಹ** ಎಂದು ತಿಳಿಯಬೇಕು.

| | | |
|---|---|---|
| ಹಳಗನ್ನಡ ಅಕ್ಷರಗಳು | 2 | ಱ (ರ) ಮತ್ತು ೞ (ಳ) |
| ಹೊಸ ಸೇರ್ಪಡೆ | 2 | ಫ಼ ಮತ್ತು ಜ಼ |

- **ವಿಶಂಕೆ:** ಎ

ಎಂದರೆ **ಸಂದೇಹ/ಅನುಮಾನ** – 'ಎ' ಕಾರಾಂತ ಪದವು ಸಂದೇಹವನ್ನು ಸೂಚಿಸುತ್ತದೆ. ಆದ್ದರಿಂದ 'ಎ' ಕಾರವನ್ನು **'ವಿಶಂಕೆ'** ಎನ್ನುತ್ತೇವೆ.

ಉದಾ: ಅವನೆ, ಇವನೆ, ಅವರೆ, ರಾಮನೆ, ನೀನೆ

- **ಅವಧಾರಣೆ:** ಏ

ಎಂದರೆ ನಿರ್ಧಾರ ಎಂದರ್ಥ. 'ಏ' ಕಾರಾಂತದಿಂದ ಅಂತ್ಯವಾದ ಪದಗಳು ನಿರ್ಧಾರವನ್ನು ಸೂಚಿಸುತ್ತವೆ.

ಉದಾ: ಅವನೇ, ಇವನೇ, ಅವರೇ, ರಾಮನೇ, ನೀನೇ

- **ನಿಪಾತ ಸ್ವರಗಳು:** ಒ, ಓ

ದುಃಖ, ಕೋಪ ಮೊದಲಾದವುಗಳನ್ನು ವ್ಯಕ್ತಪಡಿಸುವ ಪದಗಳು ಒ, ಓ ಕಾರದಿಂದ ಅಂತ್ಯವಾಗುವುದೇ ನಿಪಾತ ಸ್ವರ/ಸಂಜ್ಞೆ. ನಿಪಾತಗಳನ್ನು ಅವ್ಯಯಗಳೆಂದೂ, ಪದಗಳೆಂದೂ ತಿಳಿಯಬೇಕು. ಉದಾ: ಅಯ್ಯೋ, ಓಹೋ,

- **ಕನ್ನಡದಲ್ಲಿ ಸವರ್ಣಾಕ್ಷರಗಳು**

**(ಅನುಲೋಮ ಸ್ವರಗಳು/ಸಮಾನ ಸವರ್ಣ ಸ್ವರಗಳು)**

ಅಆ, ಇಈ, ಉಊ, ಎಏ, ಒಓ – ಈ ಅಕ್ಷರಗಳ ಜೋಡಿಗಳನ್ನು ಸವರ್ಣ/ ಸಮಾನ ಅಕ್ಷರಗಳೆಂದು ಕರೆಯುತ್ತೇವೆ.)

- **ಕನ್ನಡದ ವಿಲೋಮ ಸವರ್ಣ ಸ್ವರಗಳು**

ಆಅ, ಈಇ, ಊಉ, ಏಎ, ಓಒ

- **ಶಿಥಿಲ ದ್ವಿತ್ವ** ಎಂದರೆ ಒತ್ತಿ ಉಚ್ಚರಿಸದೆ ತೇಲಿಸಿ ಉಚ್ಚರಿಸುವ ಒತ್ತಕ್ಷರ. ಛಂದಸ್ಸಿನಲ್ಲಿ ಒತ್ತಕ್ಷರದ ಹಿಂದಿನ ಅಕ್ಷರವು ಗುರುವಾಗುತ್ತದೆ. ಆದರೆ ಆ ಒತ್ತಕ್ಷರವು ಶಿಥಿಲ ದ್ವಿತ್ವವಾಗಿದ್ದರೆ ಅದು ಗುರುವಾಗುವುದಿಲ್ಲ – ಲಘುವಾಗಿಯೇ ಉಳಿಯುತ್ತದೆ.

ಉದಾ: ಕುಳಿರ್ಗಾಳಿ, ಪೊಗರ್ವಟ್ಟೆ, ಅಮರ್ದು, ಕೆಸರ್ಗಳ್

- **ಕನ್ನಡದಲ್ಲಿರುವ ಸಂಧ್ಯಕ್ಷರಗಳು** 2

ಐ (ಅಯ್), ಔ (ಅವ್)

- **ಸಂಸ್ಕೃತದಲ್ಲಿರುವ ಸಂಧ್ಯಕ್ಷರಗಳು** 4

(ಏ, ಐ, ಓ, ಔ)

- **ಕಾರ ಮತ್ತು ವರ್ಣ:** (ಅಕಾರ – ಅವರ್ಣ)

ಅಕಾರವೆಂದರೆ 'ಅ' ಎಂಬ ಅಕ್ಷರ. ಅವರ್ಣ ಎಂದರೆ ಸಜಾತೀಯ ಹ್ರಸ್ವ ದೀರ್ಘಾದಿ ಸಕಲ ಅಂಶಗಳಿಂದ ಕೂಡಿದ ಅಕ್ಷರಗಳೆಂದು ತಿಳಿಯಬೇಕು.

- **ಹೊಸಗನ್ನಡ ಅಕ್ಷರಗಳ ಹೊಸಗನ್ನಡ ರೂಪ**

ರ – ಳ–ನ ಗಳನ್ನು ಹಳಗನ್ನಡದಲ್ಲಿ ಱ (ರ), ೞ (ಳ) ೯(ನ್) ಎಂದು ಕರೆಯುತ್ತಾರೆ.

- **ನಾಮಿಗಳು ಎಂದರೇನು?**

ಅ, ಆ ವರ್ಣಗಳನ್ನು ಬಿಟ್ಟು ಉಳಿದ ಸ್ವರಗಳನ್ನು **'ನಾಮಿ'** ಎಂದು ಕರೆಯುತ್ತೇವೆ. ಅವರ್ಣವು (ಅ ಆ) ಸಹಜವಾದದು ಆದ್ದರಿಂದ ಅದು ನಾಮಿ ಅಲ್ಲ.

**ನಾಮಿಗಳು: ಇ,ಈ ಉಊ ಎಏ, ಒಓ**

**ಅವರ್ಣ: ಅಆ**

- **ಗುಣವೃದ್ಧಿಗಳು**

**ಅವರ್ಣವನ್ನು ಹೊರತುಪಡಿಸಿ ಉಳಿದ ನಾಮಿಗಳು** ಅವರ್ಣ ಯೋಗದಿಂದ ಗುಣವೃದ್ಧಿಯನ್ನು ಪಡೆದುಕೊಳ್ಳುತ್ತವೆ ಆದ್ದರಿಂದ ಈ ಅಕ್ಷರಗಳನ್ನು **ಗುಣವೃದ್ಧಿಗಳು** ಅಥವಾ **ಗುಣವೃದ್ಧಿದಾಮರ್** ಎಂದು ಕರೆಯುತ್ತಾರೆ.

| | |
|---|---|
| ಅ + ಇ = ಏ | ಅ + ಉ = ಓ |
| ಅ + ಎ = ಐ | ಅ + ಒ = ಔ |

Gurubasavaraj Online Kottur



Scanned with OKEN Scanner

- **ಸ್ವರಾಂಗ & ವ್ಯಂಜನಾಂಗ** ಎಂದರೇನು?
  ಅನುಸ್ವಾರ ಮತ್ತು ವಿಸರ್ಗಗಳು ಸ್ವರಗಳಲ್ಲಿಯೇ ಸೇರಿದ್ದರೂ ಸ್ವರದೊಡನೆ ಉಚ್ಚಾರಗೊಳ್ಳುವ ಅನುಸ್ವಾರವನ್ನು **ಸ್ವರಾಂಗವೆಂದೂ**, ವ್ಯಂಜನದೊಡನೆ ಉಚ್ಚಾರಗೊಳ್ಳುವ ವಿಸರ್ಗವನ್ನು **ವ್ಯಂಜನಾಂಗವೆಂದೂ** ಕರೆಯಲಾಗಿದೆ. (ಅಂ–ಅನುಸ್ವಾರ, ಅಃ ವಿಸರ್ಗ)

- ಕೇಶಿರಾಜನ ಪ್ರಕಾರ **5 ದೇಶಿಯ ಅಕ್ಷರಗಳೆಂದರೆ**
  ಎ, ಒ, ಱ, ೞ ಕುಳ / ಎ, ಒ, ಱ, ೞ, ೣ

- **ಹಳಗನ್ನಡದಲ್ಲಿ 4 ಯೋಗವಾಹಗಳಿವೆ.**
  1. ಅನುಸ್ವಾರ (ಅಂ) 2. ವಿಸರ್ಗ (ಅಃ)
  3. ಉಪಾಧ್ಮಾನೀಯ ೦೦ : ಎಂದರೆ ಕಡಿಮೆ ಜೋರಿನಿಂದ ಊದುವುದರಿಂದ ಉಂಟಾಗುವ ಧ್ವನಿ ಎಂದರ್ಥ
  4. ಜಿಹ್ವಾಮೂಲೀಯ ('X') : ಎಂದರೆ ನಾಲಿಗೆಯ ಬುಡದಿಂದ ಹೊರಡುವ ಧ್ವನಿ ಎಂದರ್ಥ

  (ಉಪಾಧ್ಮಾನೀಯ ಮತ್ತು ಜಿಹ್ವಾಮೂಲೀಯ ಕೇವಲ ಸಂಸ್ಕೃತದಲ್ಲಿ ಮಾತ್ರ ಬಳಕೆಯಲ್ಲಿವೆ.)

- ಕೇಶಿರಾಜನ ಪ್ರಕಾರ **ಕನ್ನಡ ಶುದ್ಧಗೆಯಲ್ಲಿ** ಐದು ವಿಧಗಳು. ಅವುಗಳು ಕ್ರಮವಾಗಿ:
  1. ಸ್ವರಗಳು
  2. ವರ್ಗೀಯ ವ್ಯಂಜನಗಳು
  3. ಅವರ್ಗೀಯ ವ್ಯಂಜನಗಳು
  4. ಯೋಗವಾಹಗಳು
  5. ದೇಶಿಯ ಅಕ್ಷರಗಳು

- **ಅಕ್ಷರ ಪದನಿಷ್ಪತ್ತಿ**
  **ಕ್ಷರ** ಎಂದರೆ ಕ್ಷಯವಾಗು, ನಾಶವಾಗು, ಕ್ಷಯಿಸು, ಮುಗಿಯು ಎಂದರ್ಥ. **ಅ+ಕ್ಷರ** ಎಂದಾಗ ನಾಶವಾಗದ, ಕ್ಷಯಿಸಲಾಗದ ಎಂಬ ಅರ್ಥವನ್ನು ಪಡೆದುಕೊಳ್ಳುತ್ತದೆ.

- **ಅನುನಾಸಿಕಗಳು** (ಙ, ಞ, ಣ, ನ, ಮ – 5 ಅಕ್ಷರಗಳು) ಮೂಗಿನ ಸಹಾಯದಿಂದ ಉಚ್ಚರಿಸುವ ಅಕ್ಷರಗಳೇ **ಅನುನಾಸಿಕಗಳು.** SDA 2019, GPSTR 2017

- **ಕೇಶಿರಾಜ ಹೇಳಿರುವ 9 ಅಸಾಧಾರಣ ಲಕ್ಷಣಗಳು**

| | |
|---|---|
| 1. ಗಮಕ ಸಮಾಸ | 6. ವ > ಮ, ಹ > ವ |
| 2. ಶೃತಿಸಹ್ಯ ಸಂಧಿ | 7. ಅವ್ಯಯ ಲಿಂಗ |
| 3. ರಳ, ಕುಳ, ಕ್ಷಳ | 8. ಯತಿವಿಲಂಘನ |
| 4. ಸತಿಸಪ್ತಮೀ | 9. ಶಿಥಿಲದ್ವಿತ್ವ |
| 5. ಸಮಸಂಸ್ಕೃತೋಕ್ತಿ | |

- **ಘೋಷ ವರ್ಣಗಳು** (ಮೃದು ವರ್ಣಗಳು)
  ಗಂಟಲಿನ ವರ್ಣನಾಳಗಳಿಗೆ ಸ್ಪರ್ಶಿಸಿ ಹೊರಬರುವ ಅಕ್ಷರಗಳನ್ನು ಘೋಷ ವರ್ಣಗಳು ಎನ್ನುತ್ತಾರೆ.
  **ಉದಾ:** ಗ, ಜ, ಡ, ದ, ಬ, ಘ, ಝ, ಢ, ಧ, ಭ, ಙ, ಞ, ಣ, ನ, ಮ, ಯ, ರ, ಲ, ವ, ಹ

- **ಅಘೋಷ ವರ್ಣಗಳು** (ಕರ್ಕಶ ವರ್ಣಗಳು)
  ಗಂಟಲಿನ ವರ್ಣನಾಳಗಳಿಗೆ ಸ್ಪರ್ಶಿಸದೆ ಹೊರಬರುವ ಅಕ್ಷರಗಳನ್ನು ಅಘೋಷ ವರ್ಣಗಳು ಎನ್ನುತ್ತಾರೆ.
  **ಉದಾ:** ಕ, ಚ, ಟ, ತ, ಪ, ಖ, ಛ, ಠ, ಥ, ಫ, ಶ, ಷ, ಸ, ಳ

- **ಈಷತ್ ವರ್ಣಗಳು:** ಘೋಷ & ಅಘೋಷ ಎರಡೂ ವರ್ಣಗಳ ಗುಣಲಕ್ಷಣಗಳನ್ನು ಹೊಂದಿರುವ ಅಕ್ಷರಗಳು **ಉದಾ:** ಚ, ಜ

- **ಅಂತಸ್ಥ ವರ್ಣಗಳು:** ವ್ಯಂಜನವೂ ಸ್ವರವೂ ಆಗಬಹುದಾದ ಲಕ್ಷಣಗಳನ್ನು ಹೊಂದಿರುವ ಅಕ್ಷರಗಳು. **ಉದಾ:** ಯ, ರ, ಲ, ವ, ಳ

- **ಊಷ್ಮ ವರ್ಣಗಳು:** ಊಷ್ಮ ಎಂದರೆ ಉಷ್ಣ, ಕಾವು ಎಂದರ್ಥ. ಬಿಸಿಗಾಳಿಯೊಂದಿಗೆ ಕಿರುನಾಲಿಗೆ ಮತ್ತು ನಾಲಿಗೆಯಿಂದ ಶಿಳ್ಳೆ/ಉಷ್ ಶಬ್ದದೊಂದಿಗೆ ಹೊರಬರುವ ಅಕ್ಷರಗಳು. **ಉದಾ:** ಶ, ಷ, ಸ

**ತಾಲವ್ಯೀಕರಣ:** 'ಚ' ವರ್ಣವು 'ಕ' ವರ್ಣವಾಗಿ ಬದಲಾಗುವುದಕ್ಕೆ ತಾಲವ್ಯೀಕರಣ ಎಂದು ಭಾಷಾವಿಜ್ಞಾನಿಗಳು ಕರೆಯುತ್ತಾರೆ. **ಉದಾ:**
ಚೆಂಬೋತ – ಕೆಂಬೋತ (ಕೆಂಬೂತ)
ಕೆಂಗುಲಾಬಿ – ಚೆಂಗುಲಾಬಿ, ಕೆಂದುಟಿ – ಚೆಂದುಟಿ

Gurubasavaraj Online kottur



Scanned with OKEN Scanner

## ಈ ಹಿಂದೆ ನಡೆದ ಪರೀಕ್ಷೆಗಳಲ್ಲಿ ಈ ವಿಷಯದ ಮೇಲೆ ಕೇಳಲಾದ ಪ್ರಶ್ನೆಗಳು

**1.** ಆ, ಈ, ಊ, ಭೂ ಎಂಬುವು **FDA 1997**
(1) ದೀರ್ಘಸ್ವರ (3) ಪ್ರಸ್ವಸ್ವರ
(2) ಸುಸ್ವರ (4) ಅಪಸ್ವರ

**2.** ಫ. ಭ, ಘ, ಧ ಎಂಬುವು **FDA 1991**
(1) ಅಲ್ಪಪ್ರಾಣ (2) ಮಹಾಪ್ರಾಣ
(3) ಪಂಚಪ್ರಾಣ (4) ಸಪ್ರಾಣ

**3.** ಭಾಷೆಯ ಅತ್ಯಂತ ಚಿಕ್ಕ ಘಟಕವೆಂದರೆ _____ **FDA 2015**
(1) ಪದ (2) ವಾಕ್ಯ
(3) ನಾಮಪದ (4) ಧ್ವನಿ

**4.** ಕನ್ನಡ ವರ್ಣಮಾಲೆಯಲ್ಲಿರುವ ಮಹಾಪ್ರಾಣಾಕ್ಷರಗಳ ಸಂಖ್ಯೆ __________ **FDA 2017**
(1) 8 (2) 10
(3) 12 (4) 14

**5.** ನಮ್ಮ ವರ್ಣಮಾಲೆಯಲ್ಲಿ 'ಅಂ' ಎಂಬುದು ________ ಆಗಿದೆ. **FDA 2017**
(1) ಅನುನಾಸಿಕ (2) ಅನುಸ್ವಾರ
(3) ಸಂಧ್ಯಕ್ಷರ (4) ಅಲ್ಪ ವಿಸರ್ಗ

**6.** ವಿಜಾತೀಯ ಸಂಯುಕ್ತಾಕ್ಷರ ಇರುವ ಪದ **FDA 2017**
(1) ರೊಟ್ಟಿ (2) ಅನ್ನ
(3) ರಾಗಿಮುದ್ದ (4) ಪಲ್ಯ

**7.** ಕೆಳಗಿನವುಗಳಲ್ಲಿ ಕಂಠ್ಯ ಧ್ವನಿಯಾಗಿರುವುದು **FDA 2018**
(1) ಕ್, ಗ್ (2) ಟ್, ಡ್
(3) ತ್, ದ್ (4) ಪ್, ಬ್

**8.** 'ಆನೆ' ಪದದಲ್ಲಿ ಇರುವ ಸ್ವರಗಳು_________ **FDA 2018**
(1) ಒಂದು (2) ಎರಡು
(3) ನಾಲ್ಕು (4) ಮೂರು

**9.** ದಡ್ಡಕ್ಕರ ಎಂದರೆ ಅದು _______ ಆಗಿರುತ್ತದೆ. **FDA 2018**
(1) ದಪ್ಪ ಅಕ್ಷರ (2) ಒತ್ತಕ್ಷರ
(3) ಮಹಾಪ್ರಾಣ (4) ದೀರ್ಘಾಕ್ಷರ

**10.** ಕನ್ನಡದ ವರ್ಣಮಾಲೆಯಲ್ಲಿರುವ ಸಂಧ್ಯಕ್ಷರಗಳು ಯಾವುವು? **FDA 2018**
(1) ಋ ೠ (2) ಐ ಔ
(3) ಅಂ ಅಃ (4) ಕ್ಷ ಳ

**11.** ಸ್ವತಂತ್ರವಾಗಿ ಉಚ್ಚಾರವಾಗದ ಅಕ್ಷರಗಳನ್ನು ಹೀಗೆ ಕರೆಯುತ್ತಾರೆ. **FDA 2019**
(1) ಯೋಗವಾಹ (2) ಪ್ಲುತ
(3) ಸ್ವರ (4) ವ್ಯಂಜನ

**12.** 'ಜ್' ಈ ಅಕ್ಷರದ ಉತ್ಪತ್ತಿ ಸ್ಥಾನ ಇದಾಗಿದೆ. **FDA 2019**
(1) ಕಂಠ್ಯ (2) ತಾಲವ್ಯ
(3) ಮೂರ್ಧನ್ಯ (4) ಅನುನಾಸಿಕ

**13.** ಕನ್ನಡ ವರ್ಣಮಾಲೆಯ ವಿವರ ಇರುವ ಕನ್ನಡದ ಒಂದು ಶಾಸನ **FDA 2021**
(1) ಹಲ್ಮಿಡಿ ಶಾಸನ (2) ಜೀವನವಲ್ಲಭನ ಶಾಸನ
(3) ಕೆರೆಸಂತೆ ಶಾಸನ (4) ತಳಂಗೆರೆ ಶಾಸನ

**14.** ಗುರು ಪದದಲ್ಲಿರುವ ಸ್ವರಗಳು **SDA 2019**
(1) ಒಂದು (2) ಎರಡು
(3) ನಾಲ್ಕು (4) ಐದು

**15.** ಕನ್ನಡದ ವರ್ಣಮಾಲೆಯಲ್ಲಿನ ವರ್ಗೀಯ ವ್ಯಂಜನಗಳಲ್ಲಿನ ಪಂಚಮಾಕ್ಷರಗಳನ್ನು ಏನೆಂದು ಕರೆಯಲಾಗಿದೆ? **SDA 2018**
(1) ಯೋಗವಾಹಗಳು (2) ಸಂಧ್ಯಕ್ಷರಗಳು
(3) ಅನುಸ್ವಾರಗಳು (4) ಅನುನಾಸಿಕಗಳು

**16.** ಈ ಕೆಳಗಿನವುಗಳಲ್ಲಿ ಓಷ್ಠ್ಯ ಧ್ವನಿಯಾಗಿರುವುದು **SDA 2019**
(1) ಕ್, ಗ್ (2) ಚ್, ಜ್
(3) ಟ್, ಡ್ (4) ಪ್, ಬ್

**17.** ಅನುಸ್ವಾರ ಮತ್ತು ವಿಸರ್ಗಗಳಿಗೆ ಇವುಗಳ ಸಹಕಾರ ಬೇಕಾಗಿಲ್ಲ. **Group C 2018**
(1) ಹ್ರಸ್ವಸ್ವರಗಳ ಸಹಕಾರ
(2) ವರ್ಗಿಯ ವ್ಯಂಜನಗಳ ಸಹಕಾರ
(3) ಅವರ್ಗಿಯ ವ್ಯಂಜನಗಳ ಸಹಕಾರ
(4) ಯಾವುದೇ ಸ್ವರಗಳ ಸಹಕಾರ

**18.** _______ ಎಂಬ ಎರಡನ್ನು ಬಿಟ್ಟು ಉಳಿದ ಹನ್ನೆರಡು ವರ್ಣಗಳನ್ನು ನಾಮಿಗಳೆಂದು ಕರೆಯುತ್ತಾರೆ. **Group C 2018**
(1) ಅ ಆ (2) ಉ ಊ

Gurubasavaraj Online Kottur



Scanned with OKEN Scanner

(3) ಇ ಈ (4) ಋ ೠ

**19.** ಕೇಶಿರಾಜನ ಪ್ರಕಾರ ಅಚ್ಚಗನ್ನಡ ಶುದ್ಧಗೆಗಳ ಸಂಖ್ಯೆ **Group C 2022, HSTR 2009**

(1) 42 (2) 45

(3) 47 (4) 49

**20.** ಸ್ವರಾಕ್ಷರಗಳ ಆಶ್ರಯವಿಲ್ಲದೆ ಉಚ್ಚರಿಸಲಾಗದ ವರ್ಣಗಳು **Group C 2016**

(1) ಸ್ವರಾಶ್ರಯ ವರ್ಣಗಳು (2) ಉಚ್ಚಾರಣಾ ವರ್ಣಗಳು

(3) ಯೋಗವಾಹಗಳು (4) ಅನುನಾಸಿಕಗಳು

**21.** ವ್ಯಂಜನಕ್ಕೆ ಸ್ವರ ಸೇರಿದರೆ **Group C 2016**

(1) ವ್ಯಂಜನಾಕ್ಷರ (2) ಗುಣಿತಾಕ್ಷರ

(3) ವ್ಯಂಜನ ಸ್ವರಾಕ್ಷರ (4) ಯಾವುದೂ ಅಲ್ಲ

**22.** ವ್ಯಂಜನಕ್ಕೆ ವ್ಯಂಜನ ಸೇರಿದರೆ **Group C 2016**

(1) ವ್ಯಂಜನಾವ್ಯಂಜನ (2) ಸಂಯುಕ್ತಾಕ್ಷರ

(3) ಗುಣಿತಾಕ್ಷರ (4) ಸಜಾತೀಯ ವ್ಯಂಜನ

**23.** ಕನ್ನಡ ಲಿಪಿಯ ಮೂಲ : **Group C 2017**

(1) ಖರೋಷ್ಠಿ (2) ನಾಗರಿ

(3) ದೇವನಾಗರಿ (4) ಬ್ರಾಹ್ಮೀ

**24.** ಙ, ಞ, ಣ, ನ, ಮ ಈ ವರ್ಣಗಳು ಜನಿಸುವ ಸ್ಥಳ **Group C 2018**

(1) ಕಂಠೋಷ್ಠ್ಯ (2) ಮೂರ್ಧನ್ಯ

(3) ದಂತೋಷ್ಠ್ಯ (4) ನಾಸಿಕ

**25.** 'ಹಾ ರಾಮಾs' ಎಂಬುದು __________ ಕ್ಕೆ ಉದಾಹರಣೆ. **Group C 2018**

(1) ಹ್ರಸ್ವ (2) ದೀರ್ಘ

(3) ಪ್ಲುತ (4) ವ್ಯಂಜನ

**26.** ಕನ್ನಡದಲ್ಲಿ ಎಷ್ಟು ಯೋಗವಾಹಗಳಿವೆ? **Group C 2021**

(1) ಒಂದು (2) ಮೂರು

(3) 'ನಾಲ್ಕು (4) ಎರಡು

**27.** ಕನ್ನಡದ 'ಕ್' ವ್ಯಂಜನವು ಕೆಳಗಿನ ಯಾವ ಗುಂಪಿಗೆ ಸೇರುತ್ತದೆ? **ಉಪನ್ಯಾಸಕರ ನೇಮಕಾತಿ 2010**

(1) ಕಂಠ್ಯ ಘೋಷ ಸ್ಪರ್ಶ

(2) ಪರಿವೇಷ್ಠಿತ ಅಘೋಷ ಸ್ಪರ್ಶ

(3) ಕಂಠ್ಯ ಅಘೋಷ ಸ್ಪರ್ಶ

(4) ವರ್ತ್ಸ ಅಘೋಷ ಸ್ಪರ್ಶ

**28.** ಚ, ಜ ಧ್ವನಿಗಳನ್ನು ಯಾವ ಗುಂಪಿಗೆ ಸೇರಿಸಲಾಗುತ್ತದೆ? **ಉಪನ್ಯಾಸಕರ ನೇಮಕಾತಿ 2010**

(1) ಘರ್ಷ (2) ಅನುಘರ್ಷ

(3) ಪಾರ್ಶ್ವಕ (4) ಸ್ಪರ್ಶ

**29.** ಅನುನಾಸಿಕಗಳು ಎಷ್ಟು? **ಉಪನ್ಯಾಸಕರ ನೇಮಕಾತಿ 2010**

(1) ಐದು (2) ನಾಲ್ಕು

(3) ಆರು (4) ಎಂಟು

**30.** ಇವು ಮೂರ್ಧನ್ಯ ಧ್ವನಿಗಳು **ಉಪನ್ಯಾಸಕರ ನೇಮಕಾತಿ 2010**

(1) ಕ್, ಚ್ (2) ಹ್, ಪ್

(3) ಟ್, ಡ್ (4) ಸ್, ರ್

**31.** ಯೋಗವಾಹಗಳು ಎಷ್ಟು? **ಉಪನ್ಯಾಸಕರ ನೇಮಕಾತಿ 2010**

(1) ಹತ್ತು (2) ನಾಲ್ಕು

(3) ಆರು (4) ಎಂಟು

**32.** ವರ್ಣಮಾಲೆಯಲ್ಲಿ 'ಅಂ' ಅಕ್ಷರಕ್ಕೆ ಈ ಹೆಸರಿದೆ

(1) ಹ್ರಸ್ವಸ್ವರ (2) ದೀರ್ಘಸ್ವರ

(3) ಉಚ್ಚಸ್ವರ (4) ಅನುಸ್ವಾರ

**33.** ಙ, ನ, ಮ ಅಕ್ಷರಗಳಿಗೆ ಈ ಹೆಸರಿದೆ **PDO 2009**

(1) ಅಲ್ಪಪ್ರಾಣಗಳು (2) ಅನುನಾಸಿಕಗಳು

(3) ಮಹಾಪ್ರಾಣಗಳು (4) ಸಂಧ್ಯಾಕ್ಷರಗಳು

**34.** ಕನ್ನಡ ವರ್ಣಮಾಲೆಯಲ್ಲಿ ಎಷ್ಟು ವರ್ಗೀಯ ವ್ಯಂಜನಗಳಿವೆ. **PDO 2011**

(1) 21 (2) 23

(3) 25 (4) 20

**35.** ಐ, ಔ ಗಳಿಗೆ ವ್ಯಾಕರಣದಲ್ಲಿ ಈ ಹೆಸರಿದೆ. **PDO 2011**

(1) ಅನುಸ್ವಾರಗಳು (2) ಅನುನಾಸಿಕಗಳು

(3) ಯೋಗವಾಹಗಳು (4) ಸಂಧ್ಯಾಕ್ಷರಗಳು

**36.** 'ಪಾಠಶಾಲೆ' ಪದದಲ್ಲಿನ 'ಠ' ಎಂಬುದು

(1) ಅಲ್ಪಪ್ರಾಣಾಕ್ಷರ (2) ದೀರ್ಘಾಕ್ಷರ

(3) ಮಹಾಪ್ರಾಣಾಕ್ಷರ (4) ಅಘೋಷಿತಾಕ್ಷರ

**37.** ಙ್, ಞ್, ಣ್, ನ್ ಮತ್ತು ಮ್ ಧ್ವನಿಗಳು

Gurubasavaraj Online Kottur



Scanned with OKEN Scanner

(1) ಅನುಸ್ವಾರ ಧ್ವನಿಗಳು (2) ಅನುನಾಸಿಕ ಧ್ವನಿಗಳು
(3) ಅಲ್ಪಪ್ರಾಣ ಧ್ವನಿಗಳು (4) ಅವರ್ಗೀಯ ಧ್ವನಿಗಳು

**38.** 'ವಸ್ತ್ರ' ಪದದಲ್ಲಿನ ಸ್ + ತ್ + ರ್ + ಅ = ಸ್ತ್ರ ಎಂಬುದು
(1) ವಿಜಾತಿಯ ಒತ್ತಕ್ಷರ (2) ಗಣಿತಾಕ್ಷರ
(3) ಸಜಾತಿಯ ಒತ್ತಕ್ಷರ (4) ಮೂಲಾಕ್ಷರ

**39.** ಇವುಗಳಲ್ಲಿ ಅಘೋಷದ ಧ್ವನಿಮಾಗಳು **KSET 2016**
(1) ಗ ಜ ಡ ದ ಬ (2) ಅ ಇ ಉ ಎ ಒ
(3) ಕ ಚ ಟ ತ ಪ (4) ಙ ಞ ಣ ನ ಮ

**40.** ಅ ಇ ಉ ಎ ಒ ಇವು
(1) ವ್ಯಂಜನಗಳು (2) ಸಂಧ್ಯಾಕ್ಷರಗಳು
(3) ಸ್ವರಗಳು (4) ಅರ್ಧ ಸ್ವರಗಳು

**41.** ಕ್, ಚ್, ಟ್, ತ್, ಪ್ ಇವು
(1) ಸ್ವರಗಳು (2) ವ್ಯಂಜನಗಳು
(3) ಸಂಧ್ಯಾಕ್ಷರಗಳು (4) ಅನುನಾಸಿಕಗಳು

**42.** ಕನ್ನಡ ವರ್ಣಮಾಲೆಯಲ್ಲಿರುವ ಒಟ್ಟು ಅಕ್ಷರಗಳು
(1) ಐವತ್ತು (2) ನಾಲ್ವತ್ತೇಳು
(3) ಐವತ್ತೆರಡು (4) ನಾಲ್ವತ್ತೊಂಭತ್ತು

**43.** ಪ್ಲುತದಲ್ಲಿರುವ ಮಾತ್ರೆಗಳ ಸಂಖ್ಯೆ
(1) ಒಂದು (2) ಎರಡು
(3) ಮೂರು (4) ಇಲ್ಲ

**44.** ಸಂಸ್ಕೃತದ 'ಲ' ಕಾರವನ್ನು ಕನ್ನಡದಲ್ಲಿ 'ಳ' ಕಾರವಾಗಿ ಬಳಸಿದರೆ ಅದನ್ನು ಹೀಗೆನ್ನುವರು.
(1) ಕುಳ (2) ಕ್ಷಳ
(3) ರಳ (4) ರೇಫ

**45.** ವರ್ಣಮಾಲೆಯಲ್ಲಿನ ಚ ವರ್ಗದ ಅಕ್ಷರಗಳು ಹುಟ್ಟುವ ಸ್ಥಾನವನ್ನು ಆಧರಿಸಿ ಅಂತಹ ಅಕ್ಷರಗಳನ್ನು ಹೀಗೆನ್ನುವರು?
(1) ಕಂಠ್ಯಕ್ಷರ (2) ಮೂರ್ಧನ್ಯಾಕ್ಷರ
(3) ತಾಲವ್ಯ ಅಕ್ಷರ (4) ಓಷ್ಟ್ಯ ಅಕ್ಷರ

**46.** ಕೇಶಿರಾಜನ ಪ್ರಕಾರ ಕನ್ನಡದ ದೇಸಿ ವರ್ಣಗಳು **HSTR 2008**
(1) ಎ, ಒ, ಳ್, ಱ್, ಹ್ (2) ಎ, ಒ, ಳ್, ಱ್, ಸ್
(3) ಎ, ಒ, ಳ್, ಞ್, ಱ್ (4) ಎ, ಒ, ರ್, ಞ್, ಱ್

**47.** ಈ ಜೋಡಿವರ್ಣಗಳು ಸವರ್ಣಗಳಲ್ಲ **HSTR 2008**
(1) ಅ ಆ (2) ಇ ಈ
(3) ಉ ಊ (4) ಐ ಔ

**48.** ಟವರ್ಗದ ವರ್ಣಗಳ ಉಚ್ಚಾರಣಾಸ್ಥಾನ ಇದು **HSTR 2008**
(1) ಕಂಠ (2) ತಾಲು
(3) ಮೂರ್ಧ (4) ದಂತ

**49.** ಇದು ಸಂಧ್ಯಾಕ್ಷರವಾಗಿದೆ. **HSTR 2009, KTET 2003**
(1) ಐ (2) ಓ
(3) ಋ (4) ಅಂ

**50.** ಈ ಅಕ್ಷರಗಳನ್ನು ಕಂಠೌಷ್ಟ್ಯ ವರ್ಣಗಳು ಎನ್ನುವರು **HSTR 2015**
(1) ಎ ಏ ಐ (2) ಒ ಓ ಔ
(3) ಐ ಓ ಔ (4) ಏ ಐ ಔ

**51.** "ಅನುಸ್ವಾರ, ವಿಸರ್ಗ" ಇವು
(1) ಯೋಗವಾಹಗಳು (2) ಸಂಧ್ಯಾಕ್ಷರಗಳು
(3) ಸ್ವರಗಳು (4) ಗುಣಿತಾಕ್ಷರಗಳು

**52.** ಇವುಗಳಲ್ಲಿ ಸವರ್ಣವಲ್ಲದ ವರ್ಣಗಳಿವು **ಮೋರಾರ್ಜಿ 2011**
(1) ಅ – ಆ (2) ಉ – ಊ
(3) ಒ – ಓ (4) ಐ – ಔ

**53.** ಕನ್ನಡ ವರ್ಣಮಾಲೆಯಲ್ಲಿರುವ ವರ್ಗೀಯ ವ್ಯಂಜನಗಳ ಒಂದನೆಯ ಮತ್ತು ಮೂರನೆಯ ಅಕ್ಷರಗಳು: **GPSTR 2017**
(1) ಅನುನಾಸಿಕಗಳು (2) ಮಾಹಾಪ್ರಾಣಗಳು
(3) ಅಲ್ಪಪ್ರಾಣಗಳು (4) ಯೋಗವಾಹಗಳು

**54.** ಕನ್ನಡ ವರ್ಣಮಾಲೆಯಲ್ಲಿನ ಯೋಗವಾಹಗಳ ಸಂಖ್ಯೆ **GPSTR 2019**
(1) 13 (2) 5
(3) 9 (4) 2

**55.** ಕನ್ನಡ ವರ್ಣಮಾಲೆಯಲ್ಲಿರುವ ಅನುನಾಸಿಕಗಳ ಸಂಖ್ಯೆ **GPSTR 2017**
(1) ಐದು (2) ಒಂಭತ್ತು
(3) ಹದಿಮೂರು (4) ಇಪ್ಪತ್ತೈದು

**56.** 'ಅನುಸ್ವಾರ, ವಿಸರ್ಗ' ಇವು – **GPSTR 2017**
(1) ಯೋಗವಾಹಕಗಳು (2) ಸಂಧ್ಯಕ್ಷರಗಳು
(3) ಸ್ವರಗಳು (4) ಗುಣಿತಾಕ್ಷರಗಳು

**57.** ಕೆಳಗಿನವುಗಳಲ್ಲಿ ಸಜಾತೀಯ ಸಂಯುಕ್ತಾಕ್ಷರ ಪದ **GPSTR 2017**
(1) ಅಕ್ಷರ (2) ವಸ್ತ್ರ
(3) ಶಿಕ್ಷಕ (4) ಚಿಕ್ಕಪ್ಪ

**58.** 'ಕುಳಿರ್ಗಾಳಿ' ಎನ್ನುವುದು **Group C 2021**
(1) ಶಿಥಿಲ ದ್ವಿತ್ವ (2) ಒತ್ತಕ್ಷರ
(3) ಸಂಯುಕ್ತಾಕ್ಷರ (4) ಸಬಿಂದುಕಾಕ್ಷರ

Gurubasavaraj Online Kottur



Scanned with OKEN Scanner

**59.** ಸೂರ್ಯತ, ಸುಗ್ಗಿ, ವಸ್ತ್ರ, ಅಕ್ಕರ, ಶಸ್ತ್ರ, ಹಬ್ಬ ಇವುಗಳಲ್ಲಿ ಸಜಾತೀಯ ಸಂಯುಕ್ತಾಕ್ಷರಗಳನ್ನು ಬೇರ್ಪಡಿಸಿ ಕ್ರಮವಾಗಿ ಬರೆಯಿರಿ. **Group C 2021**

(1) ಶಸ್ತ್ರ, ಸುಗ್ಗಿ, ಸೂರ್ಯ (2) ವಸ್ತ್ರ, ಶೂರ್ಯ, ಶಸ್ತ್ರ
(3) ಸುಗ್ಗಿ, ಅಕ್ಕರ, ಹಬ್ಬ (4) ಅಕ್ಕರ, ಸುಗ್ಗಿ, ವಸ್ತ್ರ

**60.** ಕನ್ನಡ ವರ್ಣಮಾಲೆಯಲ್ಲಿ ಎಷ್ಟು ವರ್ಗೀಯ ವ್ಯಂಜನಗಳಿವೆ? **PDO 2017**

(1) 21 (2) 23
(3) 20 (4) 25

**61.** ಆಧುನಿಕ ಭಾಷಾ ವಿಜ್ಞಾನಿಗಳು ಪ್ರಕಾರ ಕನ್ನಡ ವರ್ಣಮಾಲೆಯಲ್ಲಿ ಇರಬೇಕಾದ ವರ್ಣಗಳ ಸಂಖ್ಯೆ ________

(1) 47 (2) 36
(3) 26 (4) 49

**62.** ಚ್, ಜ್, ಞ್ – ಇವುಗಳಲ್ಲಿ ಹೀಗೆನ್ನುತ್ತಾರೆ? **KSET 2014**

(1) ತಾಲವ್ಯ (2) ವತ್ಸ್ಯ
(3) ದಂತೋಷ್ಠ್ಯ (4) ಮೂರ್ಧನ್ಯ

**63.** ಇವು ಘೋಷ ಧ್ವನಿಗಳು **KSET 2014**

(1) ಗ, ಚ, ಬ (2) ಕ, ಖ, ಗ
(3) ಙ, ಞ, ಣ (4) ಗ, ಜ, ಡ

**64.** ಪ್ರತಿ ವರ್ಗದ ಎರಡು ಮತ್ತು ನಾಲ್ಕನೆಯ ಅಕ್ಷರಗಳು

(1) ಅನುನಾಸಿಕಗಳು (2) ಅಲ್ಪ ಪ್ರಾಣಗಳು
(3) ಮಹಾಪ್ರಾಣಗಳು (4) ಅನುಸ್ವರಗಳು

**65.** ಅರಮನೆ ಈ ಪದದಲ್ಲಿರುವ ಒಟ್ಟು ಸ್ವರಗಳ ಸಂಖ್ಯೆ.

(1) 1 (2) 2
(3) 3 (4) 4

**66.** ಸರಿಯಾದ ರೀತಿಯಲ್ಲಿ ಕಾಲ ವಿಳಂಬವಿಲ್ಲದೆ ಸೇರುವ ಅಕ್ಷರಗಳನ್ನು ಏನೆಂದು ಕರೆಯುತ್ತಾರೆ?

(1) ಗುಣಿತಾಕ್ಷರ (2) ಸಂಯುಕ್ತಾಕ್ಷರ
(3) ಸಂಧ್ಯಾಕ್ಷರ (4) ಸಮಾಸ

**67.** ಅಕ್ಷರಕ್ಕೆ 'ವರ್ಣ' ಎಂದು ಕರೆದವರು.

(1) ಕೇಶಿರಾಜ (2) 2 ನೇ ನಾಗವರ್ಮ
(3) ಪಾಣಿನಿ (4) ಭಟ್ಟಾಕಳಂಕದೇವ

**68.** ತ, ಥ, ದ, ಧ, ಲ, ಸ ಈ ಅಕ್ಷರಗಳ ವರ್ಣೋತ್ಪತ್ತಿಗಳ ಸ್ಥಾನವು

(1) ತಾಲವ್ಯ (2) ಕಂಠ್ಯ
(3) ದಂತ್ಯ (4) ಯಾವುದು ಅಲ್ಲ

**69.** ಅವಧಾರಣ ಅಕ್ಷರ ಗುರುತಿಸಿ.

(1) ಎ (2) ಒ
(3) ಏ (4) ಔ

**70.** ಈ ಕೆಳಗಿನವುಗಳಲ್ಲಿ 'ವಿಶಂಕೆ'

(1) ಋ (2) [illegible]
(3) ಅ (4) ಞ್

**71.** ವ್ಯಾಕರಣದಲ್ಲಿ 'ಮಾತ್ರೆ' ಎಂದರೆ

(1) ಅಕ್ಷರಗಳನ್ನು ಉಚ್ಚರಿಸಲು ತೆಗೆದುಕೊಳ್ಳುವ ಕಾಲ
(2) ಕಡಿಮೆ ಉಸಿರಿನಿಂದ ಉಚ್ಚರಿಸುವ ಅಕ್ಷರಗಳು
(3) ಅಕ್ಷರಗಳ ಉತ್ಪತ್ತಿಸ್ಥಾನದ ದೃಷ್ಟಿಯಿಂದ ಒಂದು ಗುಂಪು
(4) ಹೆಚ್ಚು ಉಸಿರಿನಿಂದ ಉಚ್ಚರಿಸುವ ಅಕ್ಷರಗಳು

**72.** ರಳ, ಕುಳ, ಕ್ಷಳ ಗಳನ್ನು ಹೋಗಲಾಡಿಸಿದ ಕವಿ

(1) ಕೇಶಿರಾಜ (2) ಹರಿಹರ
(3) ರಾಘವಾಂಕ (4) ಭಟ್ಟಾಕಳಂಕದೇವ

**73.** ಈ ಕೆಳಗಿನವುಗಳಲ್ಲಿ ಓಷ್ಠ್ಯ ಧ್ವನಿಯಾಗಿರುವುದು ________

(1) ಪ, ಬ್ (2) ಫ ಙ
(3) ತ ದ (4) ಏ ಐ

## ಉತ್ತರಗಳು

| | | | | |
|---|---|---|---|---|
| 1) 1 | 2) 2 | 3) 4 | 4) 2 | 5) 2 |
| 6) 4 | 7) 1 | 8) 2 | 9) 2 | 10) 2 |
| 11) 4 | 12) 2 | 13) 3 | 14) 2 | 15) 4 |
| 16) 4 | 17) 4 | 18) 1 | 19) 3 | 20) 3 |
| 21) 2 | 22) 2 | 23) 4 | 24) 4 | 25) 3 |
| 26) 4 | 27) 3 | 28) 4 | 29) 1 | 30) 3 |
| 31) 2 | 32) 4 | 33) 2 | 34) 3 | 35) 4 |
| 36) 3 | 37) 2 | 38) 1 | 39) 3 | 40) 3 |
| 41) 2 | 42) 4 | 43) 3 | 44) 2 | 45) 3 |
| 46) 3 | 47) 4 | 48) 3 | 49) 1 | 50) 2 |
| 51) 1 | 52) 4 | 53) 3 | 54) 2 | 55) 1 |
| 56) 1 | 57) 4 | 58) 1 | 59) 3 | 60) 4 |
| 61) 3 | 62) 1 | 63) 2 | 64) 3 | 65) 4 |
| 66) 3 | 67) 1 | 68) 3 | 69) 3 | 70) 2 |
| 71) 1 | 72) 2 | 73) 1 | | |

Gurubasavaraj Online Kottur



Scanned with OKEN Scanner

# ವಿಶೇಷ ಸಮನಾರ್ಥಕ ಪದಗಳು

SDA, FDA, Group C, KTET, GPSTR ಅಭ್ಯರ್ಥಿಗಳು ತಪ್ಪದೇ ಕಲಿಯಬೇಕು.

## ಪ್ರಪಂಚ & ನಿಸರ್ಗ ಪದಗಳು

- **ಅಬ್ಧಿಪ:** ಅಬ್ಧಿ = ಸಮುದ್ರ, ಕೊಳ; ಪ = ಒಡೆಯ, ಅಬ್ಧಿಪ = ಸಮುದ್ರದ ಒಡೆಯ = ವರುಣ
- **ಆಕಾಶ:** ಅಂತರಿಕ್ಷ, ಅಂಬರ, ಆಗಸ, ಗಗನ, ನಭ, ಬಾಂದಳ, ಬಾನು, ವಾರಿದಪಥ, ವ್ಯೋಮ, ಗಾಳಿವಟ್ಟೆ, ಬಾಂ, ಬಾನ್, ಮುಗಿಲು
- **ಗಾಳಿ:** ತಿಮಿರ, ವಾಯು, ಎಲರ್, ಕಂಪುವಳ, ಗಂಧವಹ, ತಂಗಾಳಿ, ಪವನ, ಪ್ರಭಂಜನ, ಮಂದಮಾರುತ, ವಾತ, ಮಂದಾನಿಲ, ಮಾರಿಶ್ವ, ಸಮೀರ, **ಎರಲ್, ಎಲರು, ಪವಮಾನ**
- **ಚಂದ್ರ:** ಪೆರೆ, ಶಶಿ, ಸುಧಾಕರ, ರಜನೀಶ, ರಜನೀಕರ, ತಂಗದಿರ, ಮೃಗಾಂಕ, ಶೀತಾಂಶು, ಇಂದು, ಉಡುಹ, ತಿಂಗಳು, ಹಿಮಾಂಶ, ಸೋಮ, ತಾರಾಪತಿ, ಅಂಶುಮಂತ, ವಾರಿಜರಿಪು, ಹೆರಿ, ವನಜಾರಿ, ಏಣಾಂಕ, ಚಂದಮ, ಅಮೃತಕರ, ಅಮೃತಾಂಶು
- **ನೀರದ:** ಮೋಡ / ಅಬ್ದ, ಅಂಬುದ, ಪಯೋದ, ವಾರಿದ, ಜಲದ, ಅಭ್ರ
- **ನೀರು:** ಅಂಬು (ಬಾಣ) ಉದಕ, ಜಲ, ತೋಯ, ಪಯಸ್ಸು(ಹಾಲು), ಪಯಸ್ಸು, ಸಲಿಲ, ವಾರಿ, ಅಪ್, ಪಯ, ಜೀವನ, ಭುವನ, ವನ
- **ಬೆಂಕಿ:** ಅನಲ ಪಾವಕ ವೈಶ್ವಾನರ ಜಾತವೇದ ಕಿಚ್ಚು ಉರಿ ಕೆಂಡ ಅಗ್ನಿ ಅಗ್ನಿ ಜ್ವಾಲೆ ಚಿತಾ ಚಿತೆ, ವಹ್ನಿ, ಕೃಶಾನು, ಇಂಗಣ, ಇಂಗಳ, ಕಿರ್ಚು GPSTR 2019
- **ಭೂಮಿ:** **ಮೇದಿನಿ, ಧರಣಿ,** ಉರ್ವಿ, ಇಳೆ, ಅವನಿ, ತಿರೆ, ಧರಿತ್ರಿ, ಧರೆ, ಧಾತ್ರಿ, ಧಾರಿ, ಮಹಿ, ಕ್ಷಿತಿ, ಕ್ಷೋಣಿ, ಪೃಥ್ವಿ, ಕ್ಷ್ಮಾ, ಮಣ್ಣು, ವಸುಧೆ, ವಸುಮತಿ, ವಸುಂಧರೆ, ಅವನಿ, ಮರ್ತ್ಯ, ಭೂಲೋಕ, ಅವನೀತಳ, ಭೂಮಂಡಲ, ಭುವನ, ಪೊಡವಿ, ಪೃಥಿವಿ, ಭೂತಳ, ಗಂಧವತಿ, ಬುವಿ FDA 2019
- **ಸಮುದ್ರ:** ಅಕೂಪಾರ, ಅರ್ಣವ, ಅಂಬುದಿ, ಪಯೋಧಿ, ವಾರಾಶಿ, ವಾರುಧಿ, ವಾರಿಧಿ, ಪಯೋನಿಧಿ, ವನಧಿ, ನೀರಧಿ, ಜಡಧಿ, ಜಲಧಿ, ಅಬ್ಧಿ
- **ಸೂರ್ಯ:** ಅಂಶುಮಂತ, ಅಗ್ನಿ, ಅರುಣ, ಅರ್ಕ, ಅರ್ಯಮ, ಅಹಃಪತಿ, ಆದಿತ್ಯ, ಇನ, ಒಡೆಯ, ಕೆಂಗದಿರ, ಖದ್ಯೋತ ತರಣಿ, ತರಣಿತೆ, ದಿನಕರ, ದಿನಪ, ದಿವಸ್ಪತಿ, ದ್ಯುಮಣಿ, ನೇಸರ್, ಪುಸ, ಪ್ರಕಾರ, ಪ್ರಭಾಕರ, ಬಿಸಿಗದಿರ ಬಿಸುಗದಿರ ಬೆಳಕು, ಭಾಸ್ಕರ, ಮಾರ್ತಂಡ, ಮಾರ್ತಾಂಡ, ಮಿಹಿರ, ರವಿ, ರಾಜೀವಸಖ, ರಾಜು, ವಿಕರ್ತನ ವಿವಾಕರ, ಸರ್ಯ, ಸ್ವಾಹಿ, ವನಜಮಿತ್ರ, ಪೂಷ, ದಿನಮಣಿ, ಗಭಸ್ತಿಮಾಲಿ, ಗಗನಮಣಿ, ಚಂಡಕರ, ಬೆಂಗದಿರ, ಸಪ್ತಾಶ್ವ, ಭಾನು
- **ತಿಂಗಳೂರು:** ಚಂದ್ರಲೋಕ

## ಗಿಡ, ಮರ & ಪಕೃತಿ ಪದಗಳು

- **ಕಮಲ:** ಅಂಭೋರುಹ, ಅಂಬುಜ, ಅಂಭೋಜ, ಪಯೋಜ, ತಾವರೆ, ಪದ್ಮ, ಪದ್ಮಿನಿ ಪದುಮ, ನೈದಿಲೆ, ವನಜ, ನಳಿ(ಲಿ)ನ, ವನರುಹ, ನೀರಜ, ಪಂಕಜ, ಕುಮುದ, ಸರಸಿಜ, ಜಡಜ, ಜಲಜ, ಜಲರುಹ, ತಾಮರೆ, ಬಿಸಿನಿ, ಅಬುಜ, ಅಬ್ಜ FDA 2019
- **ಕಾಡು:** ಅಡವಿ, ಅರಣ್ಯ, **ಹಳು,** ಕಾನನ, ಕಾಂತಾರ, ಬನ, ವಿಪಿನ, ವನ, ಗಹನ, ಪಳು, ಕಾನ್(ನು)
- **ಬತ್ತ:** ವ್ರೀಹಿ, ನೆಲ್ಲು, ಶಾಳಿ(ಲಿ), ಕಳವೆ, ಕಳಮ, ಭತ್ತ
- **ಆಮ್ರ:** ಮಾವು
- **ಹೂವು:** ಮಲರು, ಪೂವು, ಪುಷ್ಪ, ಲತಾಂತ
- **ಕಲ್ಲು:** ಅಶ್ಮ
- **ದಿನ:** ವಾಸರ, ಹಗಲು, ದಿವಸ,
- **ಬೆಳಗ್ಗೆ:** ಪ್ರಾತಃಕಾಲ, ಪ್ರಭಾತ
- **ಸಂಜೆ:** ಸಾಯಂಕಾಲ, ಬಯ್ಗು,
- **ಅನೋಕಹ:** ಮರ, ಗಿಡ

Gurubasavaraj Online Kottur



Scanned with OKEN Scanner

## ದೇವರ ನಾಮಗಳು & ವಿಶೇಷ ವ್ಯಕ್ತಿಗಳು

- **ಅಗ್ನಿ:** ಬೆಂಕಿ, ಚಿಚ್ಚೆ, ವಹ್ನಿ, ಕೆಂಡ, ಜ್ವಾಲೆ, ಅನಲ, ಚಿತಾ, ಕೃಶಾನು, ಧೂಮಕೇತು, ಉರಿ **FDA 2017**
- **ಅಬ್ಜೋದರ:** ವಿಷ್ಣು, **ಕೌಸ್ತುಭಧರ**, ವಾರಿಜಾಕ್ಷ, ವನಜನಾಭ, ಪನ್ನಗಶಯನ, ದನುಜಾರಿ, ಚಕ್ರಪಾಣಿ, ಚಕ್ರಧರ, ಗಹಾದರ, ಮಾಧವ, ಪದ್ಮನಾಭ, ಹರಿ
- **ಅಬ್ಧಿಪ:** ವರುಣ
- **ಅರ್ಜುನ:** ಪಾರ್ಥ, **ನರ**, ಸವ್ಯಸಾಚಿ,
- **ಅಸುರ:** ದಾನವ, ರಾಕ್ಷಸ, ದನುಜ, ದೈತ್ಯ, ನಿಶಾಚರ, ರಜನೀಚರ, ರಕ್ಕಸ **GPSTR 2019**
- **ಇಂದ್ರ:** ಸಂಕ್ರಂದನ, ಸಹಸ್ರಾಕ್ಷ, ಐಂದ್ರ, ಹರಿ, ವಾಸವ, ಮಹೇಂದ್ರ, ಶಕ್ರ, ಪುರುಹೂತ, ದೇವೇಂದ್ರಪತಿ, ಪೌರಂದರ, ವಜ್ರಿ, ಶತಮುಖ, ಜಂಭಾರಿ, ಪಾಕಶಾಸನ, **ವಜ್ರಧರ**
- **ಏಕದಂತ:** ಗಣೇಶ, ಮೂಷಿಕ, ಗಜವದನ, ಲಂಭೋಧರ, ಗಣಪತಿ, ವಿನಾಯಕ, ಗಣಪ, ಗಜಮುಖ **FDA 2015**
- **ಕರ್ಣ:** ದಿನಪಸುತ, ವಸುಷೇಣ, ಇನಜ
- **ಕಾಕುತ್ಸ್ಥ:** ರಾಮ
- **ಕುಂಭಸಂಭವ:** ದ್ರೋಣ, ಭಾರದ್ವಾಜ
- **ಕೃಷ್ಣ:** ದಾನವರಿಪು, ದಾಮೋದರ, ಮುರಾರಿ, ಏರಿ, ಶೌರಿ, ವಾಸುದೇವ, ಗೋವರ್ಧನ, ಗೋಪಾಲ, ಗೋವಿಂದ, ಕಂಸಾರಿ, ಗೋವರ್ಧನದಾರಿ
- **ಕೌಶಿಕ:** ವಿಶ್ವಾಮಿತ್ರ
- **ದುರ್ಯೋಧನ:** ಅಹಿಕೇತನ, ಸರ್ಪ ಧ್ವಜ, ಫಣಿಕೇತನ, ಗಾಂಧಾರೀನಂದನ
- **ದ್ರೌಪದಿ:** ಪಾಂಚಾಲಿ, ಶಶಿವದನೆ, ಲತಾಂಗಿ
- **ನದೀನಂದನ:** ಭೀಷ್ಮ
- **ಪಾರ್ವತಿ:** ಗೌರಿ,
- **ಪೃಥೆ:** ಕುಂತಿ
- **ಭಾನುಮತಿ ನಂದನ:** ಲಕ್ಷಣಕುಮಾರ
- **ಭಾರ್ಗವ:** ಪರಶುರಾಮ
- **ಬ್ರಹ್ಮ:** ವನಜಭವ, ವನಜಸಂಭವ, ಬೊಮ್ಮ, ಚತುರಾಸ್ಯ, ಧಾತ, ವಿರಂಚಿ, ಅಜ
- **ಮನ್ಮಥ:** ಝಷಕೇತನ, ಕಾಮ, ಪುಲ್ಲಶರ, ಅಸಮಾಸ್ತ್ರ, ಅಲರಂಬ, ಅನಂಗ, ಮನಸಿಜ, ಮದನ, ರತಿಕಾಂತ, ದರ್ಪಕ, ಮಾರ, ಅಂಗಜ, ಕಾಮದೇವ
- **ರವಿಸುತ:** ಕರ್ಣ
- **ವರುಣ:** ಮಳೆ, ಆಸಾರ, ಇರಸಿಲು, ಪರ್ಜನ್ಯ, ವರುಷ, ವರ್ಷ, ವೃಷ್ಟಿ, ಅಬ್ಧಿಪ
- **ವಾಗ್ದೇವಿ:** ಸರಸ್ವತಿ, ವಾಣಿ, ಶಾರದೆ, ವೀಣಾಪಾಣಿ, ಗೀರ್ವಾಣಿ
- **ವಾಸುದೇವ:** ವಾಯುದೇವ
- **ಶಿವ:** ಅಜಾತ, ಹುಟ್ಟಿಲ್ಲದವ, ಸ್ವಯಂಭು, ಪಿನಾಕಪಾಣಿ, ಶಂಕರ, ವ್ಯೋಮಕೇಶ, ಶಶಿಮೌಳಿ, ತ್ರಿನಯನ, ಶಂಭು, ಶಂಕರ, ಚಂದ್ರಚೂಡ, ಪಶುಪತಿ, ಮಾರಹರ, ಪಿನಾಕಿ, ಈಶ್ವರ, ಧೂರ್ಜಟಿ, ನಂಜುಂಡ ಇಂದುಧರ, ಗಂಗಾಧರ, ಹರ, ರುದ್ರ, ಮೃಡ, ಮೃಗಧರ, ಮೃತ್ಯುಂಜಯ, ಫಾಲನೇತ್ರ, ತ್ರಿನೇತ್ರ, ತ್ರಿನಯನ, ಪರಮೇಶ್ವರ, ಮುಕ್ಕಣ್ಣಮ, ಲಲಾಟನೇತ್ರ, ಹಣೆಗಣ್ಣ, ಗಿರೀಶ, ನಟರಾಜ, ನಾಗಭೂಷಣ, ನಿಟಿಲಾಕ್ಷ, ನೀಲಕಂಠ, ಫಣಿಕುಂಡಲ, ಅಭವ, ಶೂಲಪಾಣಿ, ಶೂಲಧರ, ಗಿರಿಜೇಶ, ಗೌರಿಶ, ಹರ
- **ಸರಸ್ವತಿ:** ವಾಗ್ದೇವಿ, ಶಾರದೆ, ವಾಣಿ, ವೀಣಾಪಾಣಿ, ಬ್ರಹ್ಮಾಣಿ, ಭಾರತಿ **Group C 2016**
- **ಸೀತೆ:** **ಭೂಸುತೆ**, ಜಾನಕಿ, ಭೂಮಿಜೆ, ಧರಣಿಸುತೆ, ಭೂಜಾತೆ, ಭೂಮಿಜಾತೆ, ಅವನಿಸುತೆ, ಪೃಥುವಿಯಾತ್ಮಜೆ, ಇಳಾಸುತೆ

## ಜೀವಿಗಳಿಗೆ ಸಂಬಂಧಿಸಿದ ಪದಗಳು

- **ಆಕಳು:** ಗೋವು, ಹಸು, ಸುರಭಿ, ಕಾಮಧೇನು, ತುರು
- **ಆನೆ:** ಇಭ, ಗಜ, ಕರಿ, **ದ್ವಿರದ**, ಸಲಗ, ಹಸ್ತಿ, ಇಭ, ದಂತಿ, ದ್ವಿಪ, ಕುಂಜರ, ಕುಂಭಿ, ಮಾತಂಗ, ಸಾಮಜ, ಆನೇಕಪ, **FDA 2019**
- **ಕತ್ತೆ:** ಗರ್ದಭ, ಗಾರ್ದಭ,
- **ಕೋಣ:** ಮಹಿಷ **ಅಬಕಾರಿ ರಕ್ಷಕ 2013**
- **ಚಿರತೆ:** ಕುರ್ಕ

Gurubasavaraj Online Kottur



Scanned with OKEN Scanner

- **ಜಿಂಕೆ:** ಎರಲೆ(ಳೆ), ಕುರಂಗ, ಹುಲ್ಲೆ, ಚಿಗರಿ, ಚಿಗರೆ, ಹರಿಣ
- **ನರಿ:** ಜಂಬುಕ, ಬಳ್ಳು
- **ನಾಯಿ:** ಶ್ವಾನ, ಕುರ್ಕುರ, ಕುಕ್ಕರ, ಸಾರಮೇಯ, ಗ್ರಾಮಸಿಂಹ, ಜಾಯಿಲ
- **ಶಶ:** ಮೊಲ
- **ಸಿಂಹ:** ವನರಾಜ, ಪಂಚಾಸ್ಯ, ಕೇಸರಿ, ಸಿರಿಗ, ಮೃಗೇಂದ್ರ, ಮೃಗರಾಜ, ಇಭವೈರಿ, ಮೃಗರಿಪು
- **ಹಾವು:** ಪನ್ನಗ, ಸರ್ಪ, ವಿಷಧರ, ಅಹಿ, ವ್ಯಾಲ, ನಾಗ, ಉರಗ, ಭುಜಂಗ, ಸರಿಸೃಪ, ಪನ್ನಂಗ, ಭುಜಂಗಮ, ಎಲರುಣಿ, ದಂದಶೂಕ, ಕುಂಭೀನಸ,
- **ಹುಲಿ:** ವ್ಯಾಘ್ರ, ಶಾರ್ದೂಲ, ಪುಂಡರೀಕ, ತರಕ್ಷು, ದ್ವೀಪಿ, ಚಮೂರ, ಬಗ್ಗ
- **ಕುದುರೆ:** ತುರಂಗ, ತುರಗ, ವಾಜಿ, ಹಯ, ಅಶ್ವ, ಹರಿ, ಸೈಂಧವ, ತುಷಾರ, ವಾರುವ, ಘೋಟ, ಗೋಳ, ತೇಜಿ
- **ದುಂಬಿ:** ಮಧುಕರ, ಸಾರಂಗ, ಅಳಿರುಣಿ, ಅಳಿ(ಳಿ), ಧನು, ಪರಮೆ (ಪಱಮೆ) FDA 2015 ತುಂಬಿ, ಬಂಡುಣಿ, ಗುಂಗೀಹುಳ, ದ್ವಿರೇಪ, ಭ್ರಮರ FDA 2017
- **ಗೂಗೆ:** ಘೂಕ
- **ಹುಂಜ:** ಚರಣಾಯುಧ, ತಾಮ್ರಚೂಡ
- **ಕಾಗೆ:** ವಾಯಸ, ಕಾಕ
- **ಶುಕ:** ಗಿಳಿ

## ಇತರೆ ಪದಗಳು

- **ಕಣ್ಣು:** ನಯನ, ಚಕ್ಷು, ಅಕ್ಷಿ, ನೇತ್ರ, ಅಂಬಕ, ದೃಕ್ಕು
- **ಕೈ:** ಕರ, ಹಸ್ತ
- **ನಾಲಗೆ:** ಜಿಹ್ವೆ, ರಸನ, ರಸಜ್ಞೆ
- **ಪಾದ:** ಚಳನ, ಅಡಿ, ಚರಣ
- **ಮೂಗು:** ಘೋಣ, ಘ್ರಾಣ, ನಾಸಿಕ, ಘ್ರಾಣೇಂದ್ರಿಯ
- **ಕಿವುಡ:** ಬಧಿರ
- **ಮುದುಕ:** ಜಬ್ಬ, ಜರಠ
- **ಮುದುಕಿ:** ವೃದ್ಧೆ, ಬಿರ್ದಿ
- **ಸುತ:** ತನುಜ ಕುವರ ಕುಮಾರ ಕಂದ ಮಗ ಅಣುಗ ಅರ್ಭಕ ಆತ್ಮಜ ತನಯ
- **ಸುತೆ:** ಮಗಳು, ಪುತ್ರಿ, ವತ್ಸೆ, ತನುಜೆ, ತನಯೆ
- **ಜನನ:** ಹುಟ್ಟು ಉದಯಿಸು ಜನ್ಮ ತಾಳು ಭವ
- **ಮರಣ:** ಸಾವು, ಸಾಯು, ಮಡಿ, ಸ್ವರ್ಗವಾಸಿ, ವೈಕುಂಠವಾಸ ಕೊನೆಯುಸಿರೆಳೆ, ಇಹಲೋಕ ತ್ಯಜಿಸು, ನಿಧನ, ಕಣ್ಮುಚ್ಚು, ಶಿವನಪಾದ ಸೇರು, ಸ್ವರ್ಗಸ್ಥನಾದ, ದೇವಸ್ಥಾನ ಲಿಂಗೈಕ್ಯ ಶಿವೈಕ್ಯ, ಬ್ರಹ್ಮೈಕ್ಯ, ಇನ್ನಿಲ್ಲವಾಗು,
- **ಜಿಪುಣ:** ಕೃಪಣ, ಲೋಭಿ, ಜೀನ, ಜುಗ್ಗ
- **ತುಪ್ಪ:** ಆಜ್ಯ, ಘೃತ, ಅನ್ನಶುದ್ಧಿ
- **ದಡ್ಡ:** ಗಾಂಪ, ಹೆಡ್ಡ, ಬೆಪ್ಪ, ಗುಗ್ಗು, ಬೆಳ್ದ, ಅವಿವೇಕಿ
- **ಮನೆ:** ಗೇಹ, ಗೃಹ, ಧಾಮ, ನಿಕೇತನ
- **ಸತ್ಯ:** ತಥ್ಯ, ದಿಟ, ನಿಜ
- **ಹಾಲು:** ಅಮೃತ, ಪೀಯೂಷ
- **ಗಂಡ:** ಪತಿ, ನಲ್ಲ, ಕಾದಲ, ಪ್ರಣಯಿ, ಪ್ರೇಮಿ
- **ಹೆಂಡತಿ:** ಪತ್ನಿ, ಗೃಹಿಣಿ, ಸ್ತ್ರೀ, ಅರ್ಧಾಂಗಿ, ಕಾಂತೆ, ಪ್ರಾಣ ಪ್ರಿಯೇ, ಹೃದಯೇಶ್ವರಿ, ಗೃಹಲಕ್ಷ್ಮಿ, ಮನೆಯೊಡತಿ, ಸತಿ, ನಲ್ಲೆ, ಭಾರ್ಯೆ, ಕುಲವಧು, ಕಾದಲೆ, ಜಾಯೆ, ಮಡದಿ, ಪ್ರಣಯಿನಿ, ಪ್ರಮದೆ, ಪ್ರೇಯಸಿ

## ಸಂಧಿಪದ

- **ರಾವಣಾರಿ** (ರಾವಣ+ಅರಿ) = ರಾಮ
- **ಅರಗಿಳಿ** (ಅರಸ+ಗಿಳಿ) = ಮುದ್ದುಗಿಳಿ, ಅರಸಂಚಿ
- **ಕಾವೇರಿ** (ಕಾವ+ಏರಿ) = ಕಾಪಾಡುವ ನೀರು
- **ಜಲಾಂಜಲಿ** (ಜಲ+ಅಂಜಲಿ) = ತರ್ಪಣ
- **ದಡಿಗವೆಣ** (ದಡಿಗ+ಪೆಣ) = ಭಾರಿಹೆಣ
- **ದಿಗ್ದೇಶ** (ದಿಕ್+ದೇಶ) = ದಿಕ್ಪಾಪಾಲು
- **ಕಸವರಗಲಿ** (ಕಸವರ+ಕಲಿ) = ದಾನಶೂರ
- **ಬೆಳ್ಗೊಡೆ** (ಬೆಳ್+ಕೊಡೆ) = ಬಿಳಿಯಕೊಡೆ
- **ಭವದ್ವಿ ಕ್ರಮ** (ಭವರ್+ವಿಕ್ರಮ) = ನಿನ್ನ ಶೌರ್ಯ
- **ಸೋವೇರಿ** (ಸೋವ+ಏರಿ) = ಪಾಪ ನಿವಾರಿಸುವ ತೀರ್ಥ

Gurubasavaraj Online Kottur



Scanned with OKEN Scanner

# ಸಮನಾರ್ಥಕ ಪದಗಳು

SDA, FDA, Group C, KTET, GPSTR ಅಭ್ಯರ್ಥಿಗಳು ತಪ್ಪದೇ ಕಲಿಯಬೇಕು.

- **ಅಂಕುಶ** = ಆನೆಯನ್ನು ಹದ್ದಿನಲ್ಲಿಡಲು ಉಪಯೋಗಿಸುವ ಒಂದು ಲೋಹದ ಸಾಧನ
- **ಅಂಗಳ** = ಅಂಗಣ, ಮನೆಯ ಮುಂದಿನ ಅಥವಾ ಹಿಂದಿನ ಬಯಲು ಭಾಗ
- **ಅಂಗುಲ** = ಒಂದು ಇಂಚು, ಬೆರಳು
- **ಅಂಗೈಸು** = ಕಾಳಜಿ ತೋರು
- **ಅಂಘ್ರಿ** = ಪಾದ **Group C 2016**
- **ಅಂಚು** = ಕೊನೆ, ತುದಿ, ದಡ, ತೀರ
- **ಅಂಜಲಿಬದ್ಧ** = ಕೈಮುಗಿದವ
- **ಅಂಜಿ** = ಹೆದರಿ **GPSTR 2017**
- **ಅಂಜು** = ಹೆದರು, ಭಯಪಡು
- **ಅಂತ** = ಅಂತ್ಯ, ಕೊನ
- **ಅಂತಃಪುರ** = ರಾಣಿವಾಸ
- **ಅಂತಕಾತ್ಮಜ** = ಅಂತಕ+ಆತ್ಮಜ = ಯಮನ ಮಗ (ಯುಧಿಷ್ಠಿರ)
- **ಅಂತರ್ಧಾನ** = ಮಾಯವಾಗು
- **ಅಂತುಟು** = ಅಷ್ಟು, ಹಾಗ
- **ಅಂದದಿ** = ರೀತಿಯಲ್ಲಿ **FDA 2021**
- **ಅಂಧಕ** = ಕುರುಡ
- **ಅಂಧಕಾರ** = ಕತ್ತಲೆ, ತಿಮಿರ
- **ಅಂಬಕಳ** = ಅಂಬಲಿ, ರಾಗಿಗಂಜಿ
- **ಅಂಬುಜ** = ತಾವರೆ **GPSTR 2019**
- ಅಕ್ಕಚ್ಚು = ಕಲಗಚ್ಚು, ಮುಸುರೆ ನೀರು **Group C 2021**
- **ಅಕ್ಷಮರು** = ಅಸಮರ್ಥರು
- **ಅಖಂಡ** = ಅವಿಚ್ಛಿನ್ನ, ಪೂರ್ಣ
- **ಅಖಿಲ** = ಸಕಲ, ಎಲ್ಲಾ
- **ಅಗಡು** = ಶೌರ್ಯ
- **ಅಗಣಿತ** = ಲೆಕ್ಕವಿಲ್ಲದಷ್ಟು
- **ಅಗಲ** = ವಿಶಾಲ
- **ಅಗಸಿ** = ಹೆಬ್ಬಾಗಿಲು
- **ಅಗ್ಗ** = ಕಡಿಮೆ ಬೆಲೆ
- **ಅಗ್ಗಳ** = ಶ್ರೇಷ್ಠ
- **ಅಗ್ನಿಹೋತ್ರ** = ಯಜ್ಞಕುಂಡ
- **ಅಗ್ರಗಣ್ಯ** = ಮೊಟ್ಟಮೊದಲಿನ, ಸರ್ವಶ್ರೇಷ್ಠ
- **ಅಚ್ಚಳಿ** = ಅಂದಕೆಡು
- **ಅಚ್ಚಳಿಯದೆ** = ಅಂದಗೆಡದಂತೆ, ರೂಪುಗೆಡದಂತೆ
- **ಅಚ್ಚು** = ಆಧಾರ ಭಾಗ
- **ಅಜಾತ** = ಹುಟ್ಟಿಲ್ಲದವ, ಸ್ವಯಂಭು, ಶಿವ
- **ಅಜಿ** = ತಿಳಿ
- **ಅಟ್ಟ** = ಮಹಡಿ
- **ಅಡಗು** = (ನಾ) ಮಾಂಸ (ಕ್ರಿ) ಕಾಣದಂತಾಗು,
- **ಅಡಚಣೆ** = ತೊಂದರೆ
- **ಅಡಸಿ** = ಮುತ್ತಿ, ಆವರಿಸಿ, ಬಯಸಿ
- **ಅಡಸು** = ಉಂಟಾಗು
- **ಅಡಿ** = ಪಾದ
- **ಅಡ್ಡಣಿಗೆ** = ಊಟದ ತಟ್ಟೆಯನ್ನು ಇಡುವ ಪೀಠ
- **ಅಡ್ಮಿಟ್** = ದಾಖಲಾಗು
- **ಅಣಿ** = ಸಿದ್ಧತೆ
- **ಅಣಿಯಾಗು** – ಸಿದ್ಧವಾಗು
- **ಅಣ್ಮು** = ಪರಾಕ್ರಮ
- **ಅತಿಕುಟಿಲಮನ** = ಅತಿಯಾದ ಮೋಸದ ಮನಸ್ಸು
- **ಅದಟ** = ಶೂರ
- **ಅದಟು** = ಪರಾಕ್ರಮ,ಶೌರ್ಯ
- **ಅದುಹು** = ಸಂಶಯ ಪಡು
- **ಅದ್ದಿ** = ಮುಳುಗಿಸು, ತೋಯಿಸು
- **ಅಧಿಪತ್ಯ** = ಯಜಮಾನಿಕೆ, ಒಡೆತನ
- **ಅನರ್ಘ್ಯ** = ಶ್ರೇಷ್ಠ, ಉಜ್ವಲ
- **ಅನಾಕುಳಂ** = ನಿರಾಯಾಸವಾಗಿ
- **ಅನಾಥ** = ದಿಕ್ಕಿಲ್ಲದ, ತಬ್ಬಲಿ
- **ಅನಾದಿ** = ಪುರಾತನ
- **ಅನಿತರೊಳಗೆ** = ಅಷ್ಟರಲ್ಲಿ
- **ಅನಿಮಿತ್ತ** = ಕಾರಣವಿಲ್ಲದೆ
- **ಅನಿರ್ವಚನೀಯ** = ಮಾತಲ್ಲಿ ವರ್ಣಿಸಲು ಸಾಧ್ಯವಾಗದ
- **ಅನಿವಾರ್ಯ** = ಅತ್ಯಗತ್ಯ
- **ಅನಿಸಿಕೆ** = ಅಭಿಪ್ರಾಯ, ಅಭಿಮತ
- **ಅನುಗುಣ** = ಅನುಸಾರ, ಹೊಂದಿಕೊಂಡು
- **ಅನುಜಾತ** = ಒಡಹುಟ್ಟಿದವನು
- **ಅನುತಾಪ** = ಸಂತಾಪ
- **ಅನುದಿನ** = ದಿನನಿತ್ಯ
- **ಅನುಪಮ** = ಎಣೆಯಿಲ್ಲದ
- **ಅನುಮತ** = ಸಮ್ಮತಿ
- **ಅನುಮರಣ** = ಅನುರೂಪವಾದ (ಅನುಗುಣವಾದ) ಮರಣ
- **ಅನುರಕ್ತಿ** = ಪ್ರೀತಿ
- **ಅನುರಣಿಸು** = ಅನುಸರಿಸಿ ಮುಂದುವರಿದ ಧ್ವನಿ
- **ಅನುವಾಗು** = ಸಿದ್ಧನಾಗು
- **ಅನೃತ** = ಸುಳ್ಳು, ಅಸತ್ಯ
- **ಅನ್ನರ್** = ಅಂತಹವರು
- **ಅನ್ಯಮನಸ್ಕ** = ಮನಸ್ಸು ಬೇರೆಡೆಯಲ್ಲಿರುವುದು
- **ಅನ್ವಯ** = ವಂಶ

Gurubasavaraj Online Kottur



Scanned with OKEN Scanner

- ಅಪರಂಜಿ = ಬಂಗಾರ
- ಅಪರಗಿರಿ = ಅಸ್ತಮಾನದ ಬೆಟ್ಟ, ಪಶ್ಚಿಮದ ಬೆಟ್ಟ
- ಅಪರಾಧಿ = ತಪ್ಪುಮಾಡಿದವನು
- ಅಪರಿಮಿತ = ಪರಿಮಿತವಲ್ಲದ, ಮಿತಿಯಿಲ್ಲದ
- ಅಪ್ಪುಕಯ್ = ಒಪ್ಪಿಕೊಳ್ಳು, ಒಲವು, ಪ್ರಿಪೇ, ಒಲವು, ಪ್ರೀತಿ
- ಅಪ್ರತಿಮ = ಹೋಲಿಕೆ ಇಲ್ಲದ, ಅಮೂರ್ತ
- ಅಪ್ರತಿಮಲ್ಲ = ಸರಿಸಾಟಿಯಿಲ್ಲದ ಜಟ್ಟಿ, ಧೀರ, ಭೀಮ
- ಅಬುಧಿ = ಸಮುದ್ರ
- ಅಬ್ಧಿಪ: (ಅಬ್ಧಿ = ಸಮುದ್ರ, ಕೊಳ; ಪ = ಒಡೆಯ) ಸಮುದ್ರದ ಒಡೆಯ = ವರುಣ (**ಅಪ್+ಧಿ**) Group C 2016
- ಅಭವ = ಶಿವ
- ಅಭಿಮತ = ಅಭಿಪ್ರಾಯ
- ಅಭೀತೆಯಾಗು = ಹೆದರದಿರು
- ಅಭೀಷ್ಟ = ಬಯಸಿದ್ದು
- ಅಭ್ಯಾಗತರು = ತಾವಾಗಿಯೇ ಬಂದವರು GPSTR 2017
- ಅಮರ = ಶಾಶ್ವತ, ಅಳಿವಿಲ್ಲದ
- ಅಮ್ಮೆ = ಸಾಧ್ಯವಿಲ್ಲ.
- ಅಯ್ಯ = ತಂದೆ
- ಅರಗಿಳಿ = (ಅರಸ+ಗಿಳಿ) ಮುದ್ದುಗಿಳಿ, ಅರಸಂಚೆ GPSTR 2019
- ಅರಸು = ಹುಡುಕು
- ಅರಳೆ = ಹತ್ತಿ
- ಅರಿ = ತಿಳಿ, ಕತ್ತರಿಸು, ಶತ್ರು, ತಿಳಿದುಕೋ, ನಾಶ
- ಅರಿಕೆ = ತಿಳಿವಳಿಕೆ
- ಅರಿದು = ಕತ್ತರಿಸಿ, ತಿಳಿದು
- ಅರಿಬಲ = ವೈರಿ ಸೈನ್ಯ
- ಅರಿವು = ತಿಳಿವಳಿಕೆ, ಜ್ಞಾನ
- ಅರುಹು = ತಿಳಿಸು, ಹೇಳು
- ಅರೆ = ಬಂಡೆ
- ಅರೆದು = ತೇದು, ಉಜ್ಜಿ
- ಅರೆಯಟ್ಟಿ = ಬೆನ್ನಟ್ಟಿ FDA 2021
- ಅರ್ಕ = **ಸೂರ್ಯ**, ಎಕ್ಕೆಗಿಡ
- ಅರ್ಘ್ಯ = ಪೂಜ್ಯರಿಗೆ ಕೈ ತೊಳೆಯಲು ನೀಡುವ ನೀರು
- ಅರ್ತಿ = ಪ್ರೀತಿ
- ಅರ್ಥ = ಹಣ, ಸಂಪತ್ತು
- ಅರ್ಥಿ = ಬೇಡುವವನು
- ಅರ್ವಿಸಿ = ವ್ಯಾಪಿಸಿ, ಹರಡಿ
- ಅಲಂಕಾರ = ಸಿಂಗಾರ, ಸೊಗಸು
- ಅಲಗು = ಕತ್ತಿ GPSTR 2019
- ಅಲರ್ದ = ಅರಳಿದ
- ಅಲರ್ವೋದ = ಹೂ ಬಿಟ್ಟ
- ಅಲೆ = ಸುತ್ತಾಡು
- ಅಲೇ = ಅಲ್ಲವೇ
- ಅಲ್ಕರು = ಪ್ರೀತಿ
- ಅಲ್ತು = ಅಲ್ಲ
- ಅಲ್ತೆ = ಅಲ್ಲವೆ GPSTR 2019
- ಅವಂದಿರ್ = ಅವರು
- ಅವಂಧ್ಯೆ = ಬಂಜೆಯಲ್ಲದವಳು
- ಅವಕ್ಕಾಗು = ಮಾತಿಲ್ಲದಂತಾಗು, ಆಶ್ಚರ್ಯಪಡು
- ಅವಜ್ಞೆ = ಕಡೆಗಣಿಸುವಿಕೆ
- ಅವಧಾರಿಪುದು = ಗಮನಕೊಡುವುದು
- ಅವನತಿ = ಕೀಳುದೆಸೆ
- ಅವನಿ = ಭೂಮಿ, **ಗಂಧವತಿ** ಅಬಕಾರಿ ಡ್ಯ 2013
- ಅವನೀತ = ಸೌಜನ್ಯವಂತ, ವಿಧೇಯಭಾವದ
- ಅವನೀತಳ = ಭೂಮಂಡಲ
- ಅವಶೇಷ = ಉಳಿಕೆ
- ಅವಸರ = ಅಗತ್ಯದ
- ಅವಿತು = ಬಚ್ಚಿಟ್ಟುಕೊಳ್ಳುವುದು
- ಅವ್ಯಕ್ತ = ಕಾಣದ
- ಅಶನ = ಅನ್ನ, ಆಹಾರ
- ಅಶ್ರುಜಲ = ಕಣ್ಣೀರು
- ಅಷ್ಟಮೀ = ಎಂಟನೆಯ
- ಅಷ್ಟವಿಧ = ಎಂಟುಬಗೆಯ
- ಅಸಂಖ್ಯ = ಲೆಕ್ಕವಿಲ್ಲದಷ್ಟು
- ಅಸಂಭವ = ಸಾಧ್ಯವಾಗದ
- ಅಸಕಳಿ = ಮೀರು
- ಅಸಗೆಟ್ಟಿತ್ತು = ಗಡ್ಡೆ
- ಅಸದ = ಅಸಾಧ್ಯ, ಅತಿಶಯ
- ಅಸಮಬಲ = ಸಮಾನವಲ್ಲದ ಶಕ್ತಿ ಉಳ್ಳವರು
- ಅಸಹನೀಯ = ಸಹಿಸಲು ಸಾಧ್ಯವಿಲ್ಲದ, ತಡೆಯಲಾಗದ
- ಅಸು = ಪ್ರಾಣ, ಜೀವ Group C 2016
- ಅಸುರ = ರಾಕ್ಷಸ
- ಅಸ್ತಿತ್ವ = ಇರುವಿಕೆ
- ಅಸ್ತಿಭಾರ = ಬುನಾದಿ
- ಅಸ್ತ್ರ = ಆಯುಧ
- ಅಹಿಕೇತನ = ಸರ್ಪ ಧ್ವಜ, ದುರ್ಯೋಧನ.
- ಅಹಿತ = ಕೆಟ್ಟದು, ಶತ್ರು
- ಅಹಿತರು = ಹಿತವಲ್ಲದವರು, ವೈರಿಗಳು
- ಅಳಲು / ಅಳಲ್ = ದುಃಖ
- ಅಳವು = ಪರಾಕ್ರಮ
- ಅಳವೇ = ಸಾಧ್ಯವೇ
- ಅಳಿ = (ಕ್ರಿ) ನಾಶ (ನಾ) ದುಂಬಿ ಸಾಯು, ನಾಶಹೊಂದು
- ಅಳಿನಿ = ಹೆಣ್ಣುದುಂಬಿ FDA 2021
- ಅಳಿಪು = ಮೋಹಕ್ಕೆ ಸಿಲುಕಿ
- ಅಳಿಮನ = ದೃಢವಲ್ಲದ ಮನಸ್ಸು, ಅಸ್ಥಿರವಾದ ಮನಸ್ಸು
- ಅಳ್ಳು = ಮುಳುಗಿ
- ಅಳೆಯಟ್ಟು = ಹೊಡೆದೋಡಿಸು


Gurubasavaraj Online Kotturu
Scanned with OKEN Scanner

- ಆಂಡ್ = ಆಯಿತು
- ಆಂದೋಲನ = ಚಳುವಳಿ, ಕ್ರಾಂತಿ
- ಆಂಬರಂ = ನನ್ನವರೆಗೂ
- ಆಕರ = ಮೂಲ ಆಧಾರ
- ಆಕಾಶವಾಣಿ = ಆಕಾಶದಲ್ಲಿ ಕೇಳುವ ಧ್ವನಿ
- ಆಗಸ = ಆಕಾಶ, ಗಗನ
- ಆಚಾರ = ಒಳ್ಳೆಯ ನಡತೆ
- ಆಚ್ಛಾದನ = ಬಟ್ಟೆ, ವಸ್ತ್ರ
- ಆಚ್ಛಾದಿತ = ಆವರಿಸಿದ
- ಆಚ್ಛಾದಿತ = ಮುಚ್ಚಲ್ಪಟ್ಟ (Group C 2016)
- ಆಜಿ = ಯುದ್ಧ, ಧುರ, ಬವರ, ಜಗಳ
- ಆಜುಬಾಜು = ಅಕ್ಕಪಕ್ಕ, ನೆರೆಹೊರ
- ಆಜ್ಞೆ = ಅಪ್ಪಣೆ (FDA 2021)
- ಆಜ್ಯ = ತುಪ್ಪ, ಘೃತ
- ಆಟಿ = ಸೋಣೆ = ಆಷಾಡ, ಶ್ರಾವಣ (ಆಟಿ= ಆಷಾಡ, ಸೋಣೆ = ಶ್ರಾವಣ)
- ಆಣ್ಮ = ಒಡೆಯ, ಸ್ವಾಮಿ, ರಾಜ.
- ಆತಂಕ = ಭಯ, ಅಡ್ಡಿ
- ಆತ್ಮ = ತನ್ನ
- ಆತ್ಮ ಪರಿನಿರ್ವಾಣ = ಮೋಕ್ಷ, ಮುಕ್ತಿ, ಆತ್ಮದ ಬಿಡುಗಡೆ
- ಆದರ = ಪ್ರೀತಿ
- ಆದಿ = ಮೊದಲು
- ಆದಿಮ = ಮೂಲದ, ಆದಿಕಾಲದ
- ಆದೇಶ = ಆಜ್ಞೆ, ಅಪ್ಪಣೆ
- ಆದ್ಯರ್ = ಮೊದಲಾದವರು
- ಆದ್ರತೆ = ನೀರಿನ ಅಂಶ, ತೇವಾಂಶ
- ಆಧಿಪತ್ಯ = ಯಜಮಾನಿಕೆ
- ಆನನ = ಮುಖ
- ಆನು = ತಾಳು
- ಆಪೆ = ಸಮರ್ಥನಾಗುವೆ
- ಆಭರಣ = ಒಡವೆ
- ಆಮ್ರ = ಮಾವು
- ಆಯೋಜಿಸು = ಏರ್ಪಾಡುಮಾಡು, ವ್ಯವಸ್ಥೆಗೊಳಿಸು
- ಆರಯ = ಪಾಲನ
- ಆರವೆ (ಆರಮೆ) = ಉದ್ಯಾನ
- ಆರೈದು = ಹುಡುಕಾಡಿ
- ಆರ್ತ = ಸಮರ್ಥ
- ಆರ್ತನಾದ = ಕಷ್ಟಕ್ಕೆ ಸಿಕ್ಕಿದವರ ಕೂಗು
- ಆರ್ತೆ = ದುಃಖಿತ
- ಆರ್ತನಿಲ್ಲ = ಸಮರ್ಥನಿಲ್ಲ
- ಆರ್ಪರ್ = ಸಮರ್ಥರು
- ಆಲಿಸು = ಕೇಳು
- ಆಲೆ = ಕಬ್ಬಿನ ರಸ ತೆಗೆಯುವ ಯಂತ್ರ, ಗಾಣ
- ಆವಾಹಿಸು = ನೆಲೆಗೊಳಿಸು
- ಆವಾಹಿಸು = ಮೈಮೇಲೆ ಬರುವಂತೆ ಮಾಡಿಕೊ (FDA 2017)
- ಆವು = ನಾವು/ಹಸು
- ಆಶಾ = ಆಸೆ
- ಆಷಾಢಭೂತಿ = ಕಪಟಿ
- ಆಶಿಸು = ಬಯಸು
- ಆಶ್ಚರ್ಯ = ವಿಸ್ಮಯ, ಬೆರಗು, ಉತ್ಸುಕತೆ
- ಆಶ್ರಯ = ಆಸರೆ, ಸಹಾಯ, ರಕ್ಷಣೆ
- ಆಶ್ವೀಜ = ಚೈತ್ರದಿಂದ ಏಳನೆಯ ಮಾಸ (ಆಶ್ವಯುಜ)
- ಆಸರ್ = ಬಳಲಿಕೆ, ದಣಿವು
- ಆಸುರತರ = ಅತಿಭಯಂಕರ
- ಆಸ್ಥೆ = ಕಾಳಜಿ
- ಆಹವ = ಯುದ್ಧ, ಅನುವರ, ಕಾಳಗ, ಸಮರ, ಬಂಡಣ (Group C 2023)
- ಆಳ್ವೆ = ಆಳುವೆ
- ಇಂಗಿತ = ಆಶಯ
- ಇಂಗು = ಒಣಗು, ಬತ್ತು
- ಇಂತು = ಹೀಗೆ
- ಇಂದುಧರ = ಚಂದ್ರನನ್ನು ಧರಿಸಿರುವವ, ಶಿವ
- ಇಂಬು = ಅವಕಾಶ, ಪ್ರೀತಿ
- ಇಂಬುಕೆಯ್ವೆ = ಒಪ್ಪಿಕೊಳ್ಳಲು, ಸಮ್ಮತಿ ಸೂಚಿಸಲು
- ಇಕ್ಕಿ = ಬಡಿದು, ಹೊಡೆದು
- ಇಕ್ಕು = ಇಡು, ಬಡಿಸು
- ಇಗರ್ಜಿ = ಚರ್ಚು
- ಇತ್ಯರ್ಥ = ತೀರ್ಮಾನ
- ಇದಿರ್ಚಿ = ಹೋರಾಡಿ
- ಇದಿರ್ಚು = ಎದುರಿಸು
- ಇನಜ = ಕರ್ಣ (Group C 2023)
- ಇನಾಮು = ಬಹುಮಾನ
- ಇನಿತು = ಇಷ್ಟು
- ಇನಿಸಿನಿಸು = ಇಷ್ಟಿಷ್ಟು
- ಇಭದೋರ್ = ಆನೆಗಳ ಸೊಂಡಿಲು
- ಇಭವೈರಿ = ಸಿಂಹ
- ಇಭಶೈಲ = ಆನೆಗಳ ಬೆಟ್ಟ
- ಇರಕೆ = ಇರುವಿಕೆಗೆ
- ಇರಾದೆ = ಉದ್ದೇಶ
- ಇರಿ = ಕೊಲ್ಲು, ತಿವಿ, ಕತ್ತರಿಸು, ಚುಚ್ಚು
- ಇರುಳು = ರಾತ್ರಿ
- ಇರುಳುಗಾಳಗ = ರಾತ್ರಿಯುದ್ಧ
- ಇರೆ = ಇರಲು
- ಇರ್ಕುಂ = ಇರುವರು
- ಇರ್ಕೆ = ಇರಲಿ
- ಇರ್ಬರು = ಇಬ್ಬರು
- ಇಷ್ಟ = ಇಚ್ಛೆ, ಮೆಚ್ಚುಗೆ
- ಇಳೆ = ಭೂಮಿ, ಧರ (GPSTR 2017)
- ಈಗುಂ = ಕೊಡುವುದು, ಕೊಡಬಲ್ಲುದು
- ಈಡು = ಸಮಾನ
- ಈಯದೆ = ಬಿಡದ
- ಈಯೆನ್ = ಕೊಡುವುದಿಲ್ಲ

Gurubasavaraj Online Kottur



Scanned with OKEN Scanner

- ಈಶ್ವರ = ಒಡೆಯ
- ಉಂಬು = ತಿನ್ನು, ಸೇವಿಸು
- ಉಂಡಲಿಗೆ = ಕಡಬು FDA 2021
- ಉಕ್ಕಂದ = ಉತ್ಸಾಹ, ಹುರುಪು
- ಉಕ್ಕಾಳ = ಉತ್ಸಾಹ, ಉಬ್ಬಿಹೋಗು
- ಉಗ್ರಾಣಿ = ಗ್ರಾಮ ಸಹಾಯಕ (ಶಾನುಭೋಗರ ಸಹಾಯಕ)
- ಉಚಿತ = ಯೋಗ್ಯ
- ಉಚ್ಛಿಷ್ಟ = ಎಂಜಲು
- ಉಜ್ವಲ = ಪ್ರಕಾಶ
- ಉಡಿ = ಮಡಿಲು
- ಉಡಿದಿರ್ದ = ಮುರಿದ
- ಉಡುರಾಜ = ನಕ್ಷತ್ರಾಧಿಪತಿ, ಚಂದ್ರ
- ಉಣದಿರ್ಪ = ಅನುಭೋಗಿಸಲಾಗದ
- ಉಣ್ಮು = ಉಬ್ಬಿರುವ, ಉಂಟಾಗು, ಹುಟ್ಟು, ಮೇಲೇಳು, ಉಬ್ಬು
- ಉತ್ಕಂಠತೆ = ಉತ್ಸುಕತ
- ಉತ್ಕರ್ಷ = ಮೇಲ್ಮೈ, ಅಭಿವೃದ್ಧಿ
- ಉತ್ಖನನ = ಪ್ರಾಚೀನ ಅವಶೇಷಗಳ ಶೋಧ GPSTR 2017
- ಉತ್ತ = ಸೊಕ್ಕಿದ, ಕೊಬ್ಬಿದ
- ಉತ್ತಾರಣ = ದಾಟುವಿಕೆ FDA 2018
- ಉತ್ಪಾಟನ = ನಾಶಗೊಳಿಸುವುದು
- ಉದಯ = ಹುಟ್ಟುಮೂಡು, ನೀರು
- ಉದಾತ್ತ = ಉನ್ನತ, ಘನತೆಯುಳ್ಳ GPSTR 2017
- ಉದ್ಗರಿಸು = ಹೇಳು, ಹೊರಗೆಡಹು
- ಉದ್ಗಾತೃ = ಋತ್ವಿಜ, ಯಜ್ಞದಲ್ಲಿ ಸಾಮಗಾನವನ್ನು ಹಾಡುವವನು
- ಉದ್ದೀಪನ = ಉತ್ತೇಜನ, ಉರಿಸುವ
- ಉದ್ಧೂಳಿಸು = ಲೇಪಿಸು
- ಉದ್ಯೋಗ = ಜಂಗಮ = ಚಲನಶೀಲ, ಲೋಕಸಂಚಾರಿ
- ಉದ್ಯೋಗಿಸಿದರು = ಪ್ರಯತ್ನಿಸಿದರು
- ಉದ್ರೇಕ = ಅತಿಶಯ, ಮೇರೆಮೀರು
- ಉನ್ಮತ್ತ = ಕೊಬ್ಬಿದ, ಮದಿಸಿದ
- ಉಪಕರಿಸು = ಉಪಕಾರ ಮಾಡು, ನೆರವು ನೀಡು
- ಉಪಕ್ರಮ = ಪ್ರಾರಂಭ, ತೊಡಗು ಉತ್ತರ ಪತ್ರಿಕೆ 2013
- ಉಪಟಳ = ಹಿಂಸೆ, ತೊಂದರೆ, ಉಪದ್ರವ
- ಉಪವನ = ಉದ್ಯಾನವನ
- ಉಪಶಾಂತ = ನೆಮ್ಮದಿ, ಸಮಾಧಾನ
- ಉಪಾರ್ಜಿಸು = ಸಂಪಾದಿಸು
- ಉಪ್ಪಾರ = ಗಾರೆ ಕೆಲಸದವ, ಮನೆಕಟ್ಟುವವನು
- ಉಬ್ಬರಿಸು = ಹೆಚ್ಚಾಗಿ
- ಉಭಯ = ಎರಡು, ಜೋಡಿ
- ಉಯ್ / ಉಯ್ದು = ಒಯ್ಯು
- ಉರಗ = ಹಾವು
- ಉರದಿ = ಕೂಡಲೆ, ತಕ್ಷಣ
- ಉರದೆ = ಲೆಕ್ಕಿಸದೆ
- ಉರವಣಿಸು = ಹೆಚ್ಚಾಗು
- ಉರಿಪಾದ = ನೋವಿನಿಂದ ಉರಿಯುತ್ತಿರುವ ಪಾದ
- ಉರಿಯಟ್ಟಲ್ = ಬೆಂಕಿ ಉರಿಯಲು
- ಉರೆ = ಬಹಳ
- ಉರ್ಚು = ಚುಚ್ಚು
- ಉಲ್ಕೆ = ಆಕಾಶದಿಂದ ಭೂಮಿಗೆ ಬೀಳುವ ತೇಜಃಪುಂಜವಾದ ಆಕಾಶಕಾಯ
- ಉಲ್ಲಂಘನೆ = ತಪ್ಪುವುದು, ಮೀರುವುದು
- ಉಷೆ = ಮುಂಜಾವು
- ಉಷ್ಣ = ಶಾಖ Group C 2021
- ಉಸಾಬರಿ = ತಂಟೆ, ತಕರಾರು
- ಉಸಿರು / ಉಸಿರ್ = ಹೇಳು
- ಉಸಿರ್ವೆ = ಹೇಳುವೆನು
- ಉಸುಬು = ಮರಳು, ಉಸುಕು
- ಉಸುರು = ಹೇಳು
- ಉಳಿಸು = ರಕ್ಷಿಸು, ಕಾಪಾಡು
- ಉಳಿಸುವ = ಬೆಮೆಗೊಂಡು = ಭ್ರಮೆಗೊಂಡು, ಆಸೆಪಟ್ಟು
- ಊಡು = ಉಣಿಸು, ತಿನ್ನಿಸು
- ಊಣೆಯ = ಕೊರತ
- ಊರಿ = ದೃಢವಾಗಿ
- ಊರು = ತೊಡೆ
- ಊರ್ಜಿತ = ರೂಢಿಯಲ್ಲಿರುವ
- ಊರ್ಧ್ವಮುಖಿ = ಮೇಲುಮುಖಿ
- ಋಕ್ಷ = ಕರಡಿ, ನಕ್ಷತ್ರ
- ಋಣ = ಹಂಗು
- ಋತಸ್ಯಂಧಿ = ಸತ್ಯದ ಒಸರು, ಸತ್ಯ ದ್ರವಿಸುವಿಕ
- ಎಂಜಲು = ಉಂಡುಬಿಟ್ಟ ಆಹಾರ
- ಎಂತುಟು = ಹೇಗ
- ಎಂಥರೋ = ಎಂತಹವರೋ
- ಎಕ್ಕಡ = ಪಾದುಕೆ, ಪಾದರಕ್ಷ
- ಎಕ್ಕಲ = ಹಂದಿ, ವರಾಹ, ಸೂಕರ
- ಎಕ್ಕೆ = ಚಪ್ಪಲಿ
- ಎಡವಟ್ಟು = ರೂಢಿಗ
- ಎಡೆ = ಸಮಯ, ಸ್ಥಳ, ಜಾಗ
- ಎಡೆಯೆಡೆ = ಅಲ್ಲಲ್ಲಿ, ನಡುನಡುವೆ
- ಎದ್ದು = ಎದ್ದು
- ಎನಿತು = ಎಷ್ಟು
- ಎನಿಸಲೊಲ್ಲದ = ಇಷ್ಟಪಡದ
- ಎಯ್ತಂದು = ಬಂದು
- ಎರಗು = ನಮಸ್ಕರಿಸು
- ಎರಾಡಿಕೇಶನ್ = ನಿರ್ಮೂಲನ, ಮೂಲೋತ್ಪಾಟನ
- ಎರೆ = ಬೇಡು, ಪ್ರಾರ್ಥಿಸು, ಹೊಯ್ಯು
- ಎರೆದಂ = ಬೇಡುವವನು
- ಎಲಚಿ = ಇಲಚಿ, ಬೋರೆಹಣ್ಣು

Gurubasavaraj Online Kottur



Scanned with OKEN Scanner

- ಎವೆ = ಕಣ್ಣರೆಪ್ಪೆ
- ಎಸಗಲಿ = ಆರ್ಶೀವದಿಸಲಿ
- ಎಸರು = ಅಡಿಗೆ ಮಾಡಲು ಇಟ್ಟಿರುವ ಕದಿಯುವ ನೀರು, ಸಾರು
- ಎಸುಗೆ = ಬಾಣ ಪ್ರಯೋಗ
- ಎಸೆ = ಶೋಭಿಸು
- ಎಚೆಯ = ಒಡೆಯ, ಪ್ರಿಯ
- ಎಳವೆ = ಬಾಲ್ಯ
- ಎಳಸಿರ್ಪ = ಸುತ್ತುವರಿದಿರುವ
- ಏಂ = ಏನು
- ಏಕ = ಒಂದು
- ಏಕತಾನತೆ = ಒಂದೇ ರೀತಿಯ
- ಏಕದಂಡಿ = ತಂತೀ ವಾದ್ಯ
- ಏಕದೇಶ = ಒಂದು ಅಂಶ, ಹೋಲುವ
- ಏಕಸ್ವಾಮ್ಯತೆ = ಒಬ್ಬರ ಒಡೆತನದಲ್ಲಿರುವ
- ಏಗ = ಯೋಗ
- ಏಡಿಸಲು = ಛೇಡಿಸು, ಚೇಷ್ಟೆಮಾಡು
- ಏಳಿಸಿದ = ತಿರಸ್ಕರಿಸಿದ
- ಐದಾಗಿ = ಒದಗಿ ಬಂದ
- ಐದಿ = ಹೋಗಿ, ಬಂದು
- ಐಲೀಕಡೆ = ಇತ್ತೀಚೆಗೆ
- ಐವರು ಮಾನಿಸರು = ಪಂಚೇಂದ್ರಿಯಗಳು
- ಐಷಾರಾಮ = ವಿಲಾಸಿ
- ಐಸಕ್ಕೆ = ಅಷ್ಟಕ್ಕೆ, ಅಷ್ಟು ಹೊತ್ತಿಗ
- ಐಸಿರಿ = ಐಶ್ವರ್ಯ, ಸಂಪತ್ತು
- ಒಂದಾವರ್ತಿ = ಒಂದು ಸಲ
- ಒಕ್ಕಿ = ತೆನೆಯಿಂದ ಕಸಕಡ್ಡಿ ಬೇರ್ಪಡಿಸು
- ಒಕ್ಕೊರಲು = ಒಗ್ಗಟ್ಟು, ಒಂದೇ ಧ್ವನಿಯಾಗು
- ಒಟ್ಟಲಿಗೆ = ರಾಶಿಗೆ, ಗುಂಪಿಗ
- ಒಡಂಬಡಿಸಿ = ಒಪ್ಪಿಸಿ
- ಒಡಂಬಡು = ಒಪ್ಪು
- ಒಡನೆ = ತಕ್ಷಣ
- ಒಡಲು = ಶರೀರ, ಹೊಟ್ಟೆ, ದೇಹ
- ಒಡವೆ = ಐಶ್ವರ್ಯ, ಆಸ್ತಿ
- ಒಡೆಯ = ರಾಜ, ದೊರ
- ಒಡ್ಡೋಲಗ = ರಾಜಸಭೆ, ದರ್ಬಾರು
- ಒತ್ಕೊಂಡು = ಹೊತ್ತುಕೊಂಡು
- ಒತ್ತಂಬದಿಂದ = ಒತ್ತಾಯದಿಂದ
- ಒದವಿದ = ಒದಗಿದ
- ಒಪ್ಪು = ಶೋಭಿಸು
- ಒಯ್ಯೊಯ್ಯನೆ = ಮೆಲ್ಲಮೆಲ್ಲನ
- ಒರಗು = ಮಲಗು
- ಒರಲು = ಕೂಗಿ ಹೇಳು
- ಒರಸಿ = ನಾಶಮಾಡಿ
- ಒರೆ = ಹೇಳು
- ಒರೆದೊರೆ = ಸರಿಸಮ.
- ಒರ್ವನೆ = ಒಬ್ಬನ
- ಒಲುಮೆ = ಪ್ರೀತಿ
- ಒಲ್ವರೇ = ಮೆಚ್ಚುವರೇ
- ಒಸಗೆ = ಸಂತೋಷ, ಶುಭವಾರ್ತೆ
- ಒಸರು = ಜಿನುಗು
- ಒಸೆದು = ಮೆಚ್ಚಿ
- ಒಳವು = ಇವೆ, ಇರುವವು
- ಒಳವೆ = ಇರುವುದೇ
- ಓಗರ = ಅನ್ನ
- ಓಟಕೀಳು = ಓಡಿಹೋಗು
- ಓಡಾರಿ = ಕುಂಬಾರ
- ಓತು = ಒಂದಾಗಿ, ಒಲಿದು
- ಓರೊಂದು = ಒಂದೊಂದು
- ಓಲಗ = ರಾಜನ ಸಭೆ, ದರ್ಬಾರು, ರಾಜಸಭೆ
- ಓಲೈಸು = ಮೆಚ್ಚಿಸು
- ಓವರೇ = ಸಲಹುವವರೇ
- ಓವು = ಉಪಚರಿಸು, ರಕ್ಷಿಸು
- ಔತಣ = ವಿಶೇಷ ಭೋಜನ
- ಕಂಗಾಲು: ದಿಕ್ಕುತೋಚದಂತಾಗು, ಗಾಬರಿಯಾಗು
- ಕಂಗಾಲಾಗು = ಕಂಗೆಡು, ತಬ್ಬಿಬ್ಬಾಗು
- ಕಂಚು = ಒಂದು ಲೋಹ
- ಕಂದಿದ = ಮಸುಕಾದ
- ಕಂಪಣ (ಕಂಪಣ = ಕವಳ) = ಮೇವು
- ಕಂಪು = ಸುಗಂಧ, ಪರಿಮಳ, ಸುವಾಸನೆ GPSTR 2019
- ಕಂಬನಿ = ಕಣ್ಣೀರು
- ಕಂಬಳಿಗೊಪ್ಪೆ = ಮಳೆಯಿಂದ ರಕ್ಷಿಸಿಕೊಳ್ಳಲು ಕಂಬಳಿಯಿಂದ ಮಾಡಿದ ಮುಸುಕು
- ಕುಂದಣ = ಚಿನ್ನದಲ್ಲಿ ಹರಳು ಕೂಡಿಸುವ ಕೆಸಲ
- ಕಕ್ಷ = ಕಂಕುಳ, ಬಗಲು
- ಕಚ = ಮುಡಿ, ತಲೆಗೂದಲು
- ಕಚ್ಚಳೆ = ಕೈಕಡಗ, ಬಹುಮಾನವಾಗಿ ನೀಡುವ ಬಳೆ (ಕಡಗ)
- ಕಜ್ಜಂ = ಕಾರ್ಯ, ಕೆಲಸ
- ಕಟೆ = ಕೆತ್ತು
- ಕಟ್ಟಳೆ = ಪದ್ಧತಿ, ನಿಯಮ, ಅಪ್ಪಣೆ;
- ಕಟ್ಟಾಯ = ಅಧಿಕ ಸಾಮರ್ಥ್ಯ
- ಕಟ್ಟು = ನಿರ್ಬಂಧ
- ಕಟ್ಟುಗೆ = ಸೇತುವೆ
- ಕಟ್ಟೇಕಾಂತ = ಯಾರೂ ಇಲ್ಲದಂತಹ
- ಕಡ = ಸಾಲ
- ಕಡಲು = ಸಮುದ್ರ GPSTR 2017
- ಕಡವರ = ಚಿನ್ನ, ನಿಧಿ
- ಕಡಿಖಂಡ = ಕಡಿದು ತುಂಡು ಮಾಡು
- ಕಡು = ಅತಿ
- ಕಡುಪಿನ ಬಣ್ಣ = ದಟ್ಟವಾದ ಬಣ್ಣ, ರಂಗಾದ ಬಣ್ಣ

Gurubasavaraj Online Kottur



Scanned with OKEN Scanner

- **ಕಡುಪು** = ಪರಾಕ್ರಮ, ಶೌರ್ಯ, ವೀರತನ
- **ಕಡುಸಿಗ್ಗು** = ತೀವ್ರ ನಾಚಿಕೆ
- **ಕಡೆ** = ನಿವಾರಿಸು
- **ಕಡೆಗೋಲು** = ಮಥಿಸುವ ಕೋಲು, ಮಂತು
- **ಕಣ** = ಅತ್ಯಂತ ಸೂಕ್ಷ್ಮವಾದ ಅಂಶ
- **ಕಣ್ಣಾಡಿಸು** = ನೋಡು
- **ಕಣ್ಣಿ** = ಬಂಧನ, ಹಗ್ಗದ ಗಂಟು
- **ಕಣ್ಣು ಕಪ್ಪಡಿ** = ಬಾವಲಿ
- **ಕಣ್ಬಟ್ಟೆ** = ಮುಂದಿನ ದಾರಿ
- **ಕಣ್ಮಲರ್** (ಕಣ್ + ಮಲರ್) = ಕಣ್ಣೆಂಬ ಹೂ
- **ಕತ್ತುರಿ** = ಕಸ್ತೂರಿ
- **ಕಥನಕವನ** = ಹಾಡಿನ ಮೂಲಕ ಹೇಳುವ ಕತೆ
- **ಕದ** = ಬಾಗಿಲು
- **ಕದಡಿದ** = ಕಲುಕಿದ
- **ಕದಳಿ** = ಬಾಳೆ
- **ಕನಕಪಾತ್ರ** = ಚಿನ್ನದ ಪಾತ್ರೆ
- **ಕನಲು** = ಕೋಪಗೊಳ್ಳು, ಸಿಟ್ಟಾಗು
- **ಕನವರಿಕೆ** = ನಿದ್ದೆಯಲ್ಲಿ ಮಾತಾಡಿಕೊಳ್ಳುವಿಕೆ, ಒಂದೇ
- **ಕನ್ನಡವಕ್ಕಿ** = ಗಿಳಿ, ಕೀರ **SDA 2021**
- **ಕಪ್ಪರ** = ಮಣ್ಣಿನ ತಟ್ಟೆ
- **ಕಬ್ಬ** = ಕಾವ್ಯ
- **ಕಬ್ಬಿಗ** = ಕವಿ
- **ಕಬ್ಬಿಗರ ಬಲ್ಲಹ** = ಕವಿಗಳ ವಲ್ಲಭ, ಕವಿಗುರು
- **ಕಮರು** = ಕಂದು, ಬಾಡು
- **ಕಮಲ** = ಪದ್ಮ, ಅಬ್ಜ, ತಾವರೆ, ನಳಿನ, ಪಂಕಜ, ನೀರಜ, **ಅಂಬುಜ**, ಜಲಜ, ವಾರಿಜ **GPSTR 2019**
- **ಕಮಲಜ** = ಬ್ರಹ್ಮ
- **ಕಮಲಮುಖಿ** = ಲಕ್ಷ್ಮೀ
- **ಕರ** = ಕೈ, ಕಿರಣ, ತೆರಿಗೆ
- **ಕರಂ** = ಕೈಯನ್ನು
- **ಕರಂ ಸಾಧು** = ಬಹು ಸಾಧುವಾದವನು
- **ಕರಂಡ** = ಕರಡಿಗೆ, ಪೆಟ್ಟಿಗೆ
- **ಕರಣ** = ತ್ರಿಕರಣಗಳು (ಕಾಯಾ, ವಾಚಾ, ಮನಸಾ) ಒಡಲು, ಶರೀರ
- **ಕರಮ್** = ತುಂಬ
- **ಕರಿ** = ಆನೆ
- **ಕರಿಗೊರಳ** = ನೀಲಕಂಠ
- **ಕರಿದು** = ಕಪ್ಪಾದ ಬಣ್ಣ
- **ಕರಿಮುಗಿಲು** = ಕಪ್ಪಾದ ಮೋಡ
- **ಕರುಕ** = ಉರಿದ ಬತ್ತಿಯ ಕಪ್ಪು ಭಾಗ
- **ಕರುಣೆ** = ಕನಿಕರ, ದಯೆ
- **ಕರುನಾಡು** = ಕನ್ನಡನಾಡು
- **ಕರುನಾಳು** = ಕನಿಕರವುಳ್ಳವನು
- **ಕರ್ಕಶಮಾರ್ಗ** = ಕಠಿಣದಾರಿ
- **ಕರ್ತವ್ಯ** = ಕೆಲಸ, ಜವಾಬ್ದಾರಿ
- **ಕರ್ದಮಿತ** = ಕೆಸರಾಗಿರುವ
- **ಕರ್ಮ** = ಕೆಲಸ, ಕಾರ್ಯ
- **ಕರ್ರೆಂಬಕತ್ತಲ್ಯ** = ಕಗ್ಗತ್ತಲೆ
- **ಕಲಕಂಠ** = ಇಂಪಾದ ಧ್ವನಿ
- **ಕಲಹ** = ಜಗಳ, ಕಾದಾಟ, ಯುದ್ಧ
- **ಕಲಾಸಿ** = ನಾವಿಕ **Group C 2021**
- **ಕಲಿ** = ವೀರ, ಶೂರ
- **ಕಲುಷಿತ** = ಮಲಿನ **GPSTR 2017**
- **ಕವಡು** = ಕಪಟ **FDA 2021**
- **ಕವಲು** = ಟಿಸಿಲು, ಭಿನ್ನತೆ, ಬದಲಾವಣೆ
- **ಕವಿ** = ಆವರಿಸು, ಮುತ್ತು
- **ಕಸರತ್ತು** = ಚಮತ್ಕಾರ
- **ಕಸವರ** = ಚಿನ್ನ
- **ಕಸವರಗಲಿ** (ಕಸವರ + ಕಲಿ) = ದಾನಶೂರ
- **ಕಳವನಿಡು** = ಕಳ್ಳತನ ಆರೋಪಿಸು
- **ಕಳುಗು** = ಕಳುಹು
- **ಕಳೆ** = ಕಾಂತಿ, ತೇಜಸ್ಸು, ಪ್ರಕಾಶ, ಚಿಮುಕಿ
- **ಕಳೆದ** = ತೀರದ
- **ಕಳೆದುಕೊಂಡುದರ್ಕೆ** = ಕದ್ದುದಕ್ಕೆ
- **ಕಳೇಬರ** = ಮೃತ ದೇಹ/ಶರೀರ, ಶವ
- **ಕಳ್ತಲೆ** = ಕತ್ತಲೆ
- **ಕಾಂಬ** = ಕಾಣುವ
- **ಕಾಕತಾಳ** = ಒಂದು ಲೋಕನ್ಯಾಯ, ಅನಿರೀಕ್ಷಿತ ಘಟನ
- **ಕಾಕಾಳಿ** = ಕಾಗೆಗಳು
- **ಕಾಕುತ್ಸ್ಥ** = ರಾಮ
- **ಕಾಡಿ** = ಪೀಡಿಸಿ
- **ಕಾಡು** = ವಿಪಿನ, ಕಾಂತಾರ, ವನ, ಅರಣ್ಯ, ಅಡವಿ, **ಹಳು** **FDA 2019**
- **ಕಾದಲ** = ಇನಿಯ, ಪ್ರೀತಿಸುವಾತ
- **ಕಾದು** = ಹೋರಾಡು
- **ಕಾನನ** = ವನ, ಕಾಡು, ಅರಣ್ಯ
- **ಕಾಪು** = ರಕ್ಷಣೆ
- **ಕಾಮ** = ಬಯಕೆ
- **ಕಾಯಕ** = ಕಾರ್ಯ, ಕೆಲಸ
- **ಕಾಯಕಾಂತಿ** = ವಿಷ್ಣುವಿನ ದೇಹದ ಕಾಂತಿ
- **ಕಾರಕೂನ** = ಗುಮಾಸ್ತ
- **ಕಾರಣಿಕ** = ಅಸಾಧಾರಣ ಪುರುಷ
- **ಕಾರಿರುಳು** = ದಟ್ಟವಾದ ಕತ್ತಲೆ
- **ಕಾರು** = ಕಕ್ಕು, ಹೊರಹಾಕು
- **ಕಾರ್ಯಪ್ರವರ್ತ** = ಕೆಲಸ ಮಾಡಲು ಮೊದಲಾಗು
- **ಕಾಲ** = ಯಮ, ಸಮಯ, ವೇಳೆ, ಅಂತಕ
- **ಕಾಲ್ತೆಗೆ** = ಓಡಿಹೋಗು
- **ಕಾವಳ** = ಅಂಧಕಾರ, ಮಬ್ಬು

Gurubasavaraj Online Kottur



Scanned with OKEN Scanner

- **ಕಾವೇರಿ** (ಕಾವ + ಏರಿ) = ಕಾಪಾಡುವ ನೀರು
- **ಕಾಷ್ಠ** = ಕಟ್ಟಿಗೆ SDA 2021
- **ಕಾಸಾರ** = ಸರೋವರ (ಕಂಚುಗಾರ)
- **ಕಾಸು** = ಹಣ GPSTR 2017, 2019
- **ಕಾಳಗ** = ಯುದ್ಧ, ಹೋರಾಟ
- **ಕಾಳ್ಗಟ್ಟೆ** = ಕಾಡುದಾರಿ
- **ಕಿಂಕರ** = ಸೇವಕ GPSTR 2017
- **ಕಿಚ್ಚು** = ಬೆಂಕಿ
- **ಕಿಡಿಸು** = ಕೆಡಿಸು
- **ಕಿಡು** = ನಾಶವಾಗು
- **ಕಿತ್ತಡಿ** = ತಪಸ್ವಿ, ಮುನಿ
- **ಕಿನಿಸುರೇಗು** = ಕೋಪಿಸು
- **ಕಿರು** = ಚಿಕ್ಕದಾದ
- **ಕಿಲುಬು** = ಕೊಳೆ, ಹೊಲಸು
- **ಕಿವಿಗಡಚಿಕ್ಕು** = ಕಿವಿಗೆ ಕರ್ಕಶವಾಗು
- **ಕಿಸುರು** = ಕೆಂಪು ಬಣ್ಣ
- **ಕಿಸೆ** = ಜೇಬು
- **ಕಿಱಿದು** / **ಕಿರಿದು** = ಸ್ವಲ್ಪ
- **ಕೀಲಕ** = ಸಂವತ್ಸರ, ರಹಸ್ಯ, ಗೂಟ
- **ಕುಂಭಸಂಭವ** = ದ್ರೋಣ.
- **ಕುಕಿಲು** = ಕೋಗಿಲೆಯ ಕೂಗು
- **ಕುಗುರು** = ತೂಕಡಿಸು
- **ಕುಜನ** = ಕೆಟ್ಟಜನ
- **ಕುಠಾರ** = ಕ್ರೂರಿ, ಕೊಡಲಿ
- **ಕುಡಿತೆ** = ಗುಟುಕು, ಬೊಗಸ
- **ಕುಣಿ** = ಕುಳಿ, ಹೊಂಡ, ನರ್ತಿಸು, ಗುಂಡಿ
- **ಕುಣಿಕೆ** = ಸರಿಗಂಟು
- **ಕುತರ್ಕ** = ನ್ಯಾಯವಿಲ್ಲದ ಮಾತು
- **ಕುತೂಹಲ** = ಅಚ್ಚರಿ, ವಿಸ್ಮಯ
- **ಕುತೂಹಲ** = ಅನುಭವಿಸುವ ತಿಳಿದುಕೊಳ್ಳುವ ಹಂಬಲ
- **ಕುತ್ತು** = ಅಪಾಯ
- **ಕುದಿ** = ಬೇಯು
- **ಕುದ್ರ** = ಚಿಕ್ಕ ಪುಟ್ಟ
- **ಕುನ್ನಿ** = ನಾಯಿಮರಿ, ಅಲ್ಪ, ಕ್ಷುದ್ರ, ನಾಯಿ, ಶುನಕ, ಶ್ವಾನ
- **ಕುಪ್ಪಳಿಸು** = ಹಾರು, ಜಿಗಿಯು
- **ಕುಪ್ಪೆ** = ಕಸದತಿಪ್ಪೆ, ರಾಶಿ, ದಿಣ್ಣೆ
- **ಕುಬ್ಜೆ** = ಗೂನು ಬೆನ್ನಿನವಳು (ಮಂಥರೆ)
- **ಕುಮಂತ್ರ** = ಮೋಸದ ಆಲೋಚನ
- **ಕುಮಕಿ** = ಸಹಾಯ, ಒತ್ತಾಸ
- **ಕುಮ್ಮಕ್ಕು** = ಸಹಾಯ, ಒತ್ತಾಸ
- **ಕುರುಹು** = ಗುರುತು
- **ಕುಸುಮ** = ಹೂ, ಪುಷ್ಪ, ಹೂವು
- **ಕುಸುಮಮಾಲೆ** = ಹೂವಿನಮಾಲೆ
- **ಕುಸುರಿದರಿ** = ಚೂರಾಗಿ ಕತ್ತರಿಸು
- **ಕುಸುರಿದರಿದ** = ಚಿಕ್ಕ ತುಂಡಾಗಿ ಕತ್ತರಿಸಿದ
- **ಕುಳ** = ನೇಗಿಲಿನ ತುದಿ, ಕುಲ, ವ್ಯಕ್ತಿ, ಗೇಣಿದಾರ
- **ಕುಳಿ** = ಹೊಂಡ, ತಗ್ಗು, ಗುಣಿ
- **ಕುಳ್ಳು** = ಬೆರಣಿ
- **ಕೂಟ** = ಬೆರೆಯುವುದು, ರಾಶಿ, ನೆತ್ತಿ, ಮೋಸ
- **ಕೂಟ** = ರಸ್ತೆಗಳು ಸೇರುವ ಜಾಗ, ಸೇರಿಕೆ
- **ಕೂಡೆ** = ಜೊತೆಗೆ Group C 2018
- **ಕೂರಿಗೆ** = ಬೀಜ ಬಿತ್ತುವ ಸಾಧನ
- **ಕೂರ್ಮೆ** = ಸ್ನೇಹ, ಪ್ರೀತಿ
- **ಕೂಸು** = ಮಗು Group C 2023
- **ಕೂಲಂಕುಷ** = ಸಮಗ್ರವಾದ
- **ಕೂಷ್ಮಾಂಡ** = ಕುಂಬಳಕಾಯಿ
- **ಕೂಳು** = ಅನ್ನ, ಆಹಾರ FDA 2021
- **ಕೂೞ್** = ಅನ್ನ
- **ಕೃತಕ** = ಸಹಜವಲ್ಲದ
- **ಕೃತಕತೆ** = ಅಸಹಜತೆ ಮೋಸ
- **ಕೃತಾಂತ** = ಯಮ
- **ಕೃತಾಂತಜಿ** = ಯಮನ ನಾಲಗ
- **ಕೃತ್ರಿಮ** = ಮೋಸ, ಕಪಟ ಸಹಜ ವಲ್ಲದ
- **ಕೃಪೆ** = ದಯೆ, ಕರುಣೆ
- **ಕೃಷಿ** = ಕತಿಪಯ Group C 2017
- **ಕೆಂಗಿಡಿ** = ಉರಿಬೆಂಕಿ, ಕೆಂಪಾದ ಬೆಂಕಿ
- **ಕೆಂಡಗಣ್ಣಯ್ಯ** (ಕೆಂಡದಂತೆ (ಬೆಂಕಿ) ಕಣ್ಣುಳ್ಳವ) = ಮಾದೇಶ್ವರ
- **ಕೆಚ್ಚು** = ಕೂಡುವಿಕೆ, ಬೆಸುಗೆ, ಸೇರಿಸು
- **ಕೆಚ್ಚೆದೆ** = ಗಟ್ಟಿಯಾದಎದೆ, ಎದೆಗಾರಿಕ
- **ಕೆಚ್ಚೆದೆಯ** = ಭಯವಿಲ್ಲದ ಮನಸ್ಸಿನ
- **ಕೆನೆ** = ಸಾರ, ತಿರುಳು
- **ಕೆನ್ನ** = ಕೆಂಪು, ಕಪೋಲ
- **ಕೆಮ್ಮನೆ** = ಸುಮ್ಮನ
- **ಕೆಯ್ಯ** = ಬೆಳೆ
- **ಕೆರ** = ಎಕ್ಕಡ, ಚಪ್ಪಲಿ
- **ಕೆರ್ಪು** = ಚಪ್ಪಲಿ
- **ಕೆಲ/ ಕೆಲವಾನುಂ** = ಕೆಲವು
- **ಕೆಳದಿ** = ಗೆಳತಿ
- **ಕೆಳೆಯ** = ಗೆಳೆಯ
- **ಕೇಡು** = ನಾಶ, ಕೆಡುಕು, ಅಳಿವು
- **ಕೇವಲ** = ಸಮಗ್ರ ಅಬಕಾರಿ ರಕ್ಷ 2013
- **ಕೈಕೊಳ್ಳು** = ಸಮ್ಮತಿಸು
- **ಕೈದು** = ಆಯುಧ
- **ಕೈಪರೆ** = ಕಳಚು SDA 2021
- **ಕೈಪಿಡಿ** = ಕೈಗನ್ನಡಿ
- **ಕೈಯಾನು** = ಕೈಚಾಚು
- **ಕೈಯಾಸೆ** = ಲಂಚ, ಆಮಿಷ
- **ಕೈವಾರ** = ಹೊಗಳಿಕೆ
- **ಕೊಂಚ** = ಸ್ವಲ್ಪ
- **ಕೊಂಬು** = ವಾಲಗ (ಊದುವ ಸಾಧನ)

Gurubasavaraj Online Kottur



Scanned with OKEN Scanner

- ಕೊಚ್ಚೀವು = ಕತ್ತರಿಸುತ್ತೇವೆ
- ಕೊಡನ ಮಗ = ದ್ರೋಣ
- ಕೊತ್ತಳಿಗೆ = ತೆಂಗಿನ ಮರದ ದಿಂಡು
- ಕೊನೆ = ಗೊನ
- ಕೊಪ್ಪರಿಗೆ = ಕಡಾಯಿ, ಅಗಲವಾದ ಬಾಯಿಯುಳ್ಳ ಲೋಹದ ಪಾತ್ರೆ
- ಕೊಬ್ಬು = ರಸಭರಿತ
- ಕೊಳ = ಬೆಳಗೊಳ, ಶ್ರವಣಬೆಳಗೊಳ, ಸರೋವರ
- ಕೊಳೆ = ಕಲ್ಮಷ, ಹೊಲಸು
- ಕೊಳೆಗೊಂಡು = ಮಾಲಿನ್ಯಗೊಂಡು, ತೃಪ್ತಿಗೊಂಡು
- ಕೊಳ್ = ಖರೀದಿಸು, ಬೆಲೆಕೊಟ್ಟು ತೆಗೆದುಕೊ, ಕೊಂಡುಕೊ
- ಕೊಳ್ಳಿ = ಉರಿಯುವ ಕಟ್ಟಿಗೆಯ ತುಂಡು, ಬೆಂಕಿ
- ಕೋಕಿಲಾ (ತ್ಸ) = ಕೋಗಿಲೆ(ದ್ಭ)
- ಕೋಟರಕುಟೀರ = ಮರದ ಪೊಟರ
- ಕೋಡು = ನಡುಗು
- ಕೋಪಾರುಣ ನೇತ್ರ = ಕೋಪದಿಂದ ಕೆಂಪಾದ ಕಣ್ಣು FDA 2019
- ಕೋಮಣ = ಲಂಗೋಟಿ, ಕೌಪೀನ
- ಕೋಮೋಚೋಮು = ವರ್ಣತಂತು
- ಕೋರು = ಕೇಳಿಕೊಳ್ಳು, ಬೇಡು
- ಕೋಶ = ಭಂಡಾರ
- ಕೋಳಚಾಡು =ನಿಂದಿಸು, ಕೀಳುಮಾಡು
- ಕೌಶಿಕ = ವಿಶ್ವಾಮಿತ್ರ
- ಕ್ರತು = ಯಾಗ, ಯಜ್ಞ
- ಕ್ರಮಕ್ರಮದೆ = ಮೆಲ್ಲಮೆಲ್ಲನ
- ಕ್ರಮವಿಪರ್ಯಾಯ = ಪದ್ಧತಿ ತಪ್ಪುವುದು, ಕ್ರಮ ವ್ಯತ್ಯಾಸ
- ಕ್ರೀಡಾಗಾರ = ಕ್ರೀಡಾಂಗಣ
- ಕ್ರೋಡೀಕರಿಸು = ಸಂಗ್ರಹಿಸು
- ಕ್ರೋಧ = ಸಿಟ್ಟು, ಕೋಪ
- ಕ್ರೌರ್ಯ = ನಿರ್ದಯತೆ, ಕರುಣೆಯಿಲ್ಲದ
- ಕ್ಷಾತ್ರ = ಕ್ಷತ್ರಿಯ GPSTR 2017
- ಕ್ಷಾಮ = ಬರಗಾಲ
- ಕ್ಷಿತಿಯಮರರು = ಬ್ರಾಹ್ಮಣರು
- ಕ್ಷಿಪ್ರಮಾರ್ಗ = ಸುಲಭದ ದಾರಿ
- ಕ್ಷೀಣಿಸು = ಸೊರಗು, ಕ್ಷಯಿಸು
- ಕ್ಷೀರ = ಹಾಲು
- ಕ್ಷೋಭೆ = ತಳಮಳ
- ಖಂಡ = ತುಂಡು, ಚೂರು
- ಖಂಡಮಾಗೆ = ತುಂಡಾಗುವಂತೆ
- ಖಂಡಿಗೆಳೆ = ನಾಶಪಡಿಸು
- ಖಂಡಿಸು = ತುಂಡು ಮಾಡು, ಕತ್ತರಿಸು
- ಖಗ = ಪಕ್ಷಿ Group C 2016
- ಖಗಮೃಗೋರಗಾಳಿ = ಖಗ = ಪಕ್ಷಿ; ಮೃಗ = ಪ್ರಾಣಿ; ಉರಗ = ಹಾವು ಆಳಿ = ಸಮೂಹ ಪ್ರಾಣಿ, ಪಕ್ಷಿ, ಹಾವುಗಳ ಸಮೂಹ.
- ಖಗೋಳಶಾಸ್ತ್ರ = ಆಕಾಶಮಂಡಲ
- ಖಜಾನೆ = ಬೊಕ್ಕಸ
- ಖಟ್ವಾಂಗ = ತುದಿಯಲ್ಲಿ ತಲೆಬುರುಡೆಯುಳ್ಳ ಶಿವನ ಗದೆ
- ಖತಿ = ಕೋಪ, ಮುನಿಸು, ಸಿಟ್ಟು, ಅಳಲು, ದುಃಖ
- ಖದ್ದರಗೇಡಿ = ಮಹಾದುಷ್ಟ
- ಖನಿ = ಗಣಿ, ಆಕರ, ನೆಲೆ
- ಖಲ್ಲ = ದುಷ್ಟ, ಕ್ಷುಲ್ಲಕ (ಕೀಚಕ)
- ಖಳ = ದುಷ್ಟ
- ಖಾತಿ = ಸಿಟ್ಟು, ಕೋಪ
- ಖಾಯಮ್ಮು = ನಿತ್ಯವೂ
- ಖಿಲ = ಪಾಳುಬೀಳು, ಶೂನ್ಯವಾಗು
- ಖೂನಿ = ಕೊಲೆ
- ಖೇಡ = ಹಳ್ಳಿ FDA 2021
- ಖೇದ = ದುಃಖ
- ಗಂಡಿ = ತಗ್ಗು ಪ್ರದೇಶ, ಕುಳಿ
- ಗಂಧ = ವಾಸನ
- ಗಜ = ಆನೆ, ಮತಂಗ GPSTR 2021
- ಗಜಟೆ = ಬೆದರಿಸು
- ಗಡಣ = ಸಮೂಹ
- ಗಡಮೊಳನಿನ್ನುಂ = ಇನ್ನೂ ಬದುಕಿದ್ದಾನಲ್ಲ
- ಗಡಸುಗಾರ್ತಿ = ಗಟ್ಟಿಗಿತ್ತಿ
- ಗಣ = ಶಿವಗಣ
- ಗಣಿಸದೆ = ಲೆಕ್ಕಿಸದೆ
- ಗತಿ = ಸ್ಥಿತಿ, ದಾರಿ
- ಗದ್ಗದ ಕಂಠ = ನಿಂತು ನಿಂತು ಬರುವ ಅಸ್ಪಷ್ಟವಾದ ಮಾತು, ಬಿಗಿದ ಕಂಠ
- ಗದ್ದದ = ಗಂಟಲು ತೇವಗೊಳ್ಳುವುದು
- ಗದ್ದುಗೆ = ಪೀಠ
- ಗನ = ಘನ, ಶ್ರೇಷ್ಠ
- ಗರ = ಗ್ರಹ, ದೆವ್ವ Group C 2021
- ಗರಲ = ನಂಜು, ವಿಷ
- ಗರ್ಜಿಸಿ = ಹೆದರಿಸಿ GROUP C 2021
- ಗರ್ದಿಗಮ್ಮತ್ತು = ಗತ್ತುಗೈರತ್ತು
- ಗವಾಕ್ಷಿ = ಬೆಳಕಿಂಡಿ
- ಗಹ್ವರ = ಗುಹೆ
- ಗಳುಗೆ = ಗಳಿಗೆ, ಕ್ಷಣ
- ಗಳೆಸಾಮಾನು = ಬೇಸಾಯದ
- ಗಾಂಧಾರೀನಂದನ = ದುರ್ಯೋಧನ
- ಗಾತ್ರ = ದೇಹ
- ಗಾಲಿ = ಚಕ್ರ
- ಗಾವಿಲ = ಹೆಡ್ಡ, ಗಾಂಪ
- ಗಾವುಂಡ = ಗ್ರಾಮದ ಮುಖ್ಯಸ್ಥ
- ಗಾವುದ = ದೂರವನ್ನು ಅಳೆಯುವ ಒಂದು ಪ್ರಮಾಣ
- ಗಾಸಿ = ತೊಂದರೆ, ಹಿಂಸ
- ಗಾಳ = ಮೀನು ಹಿಡಿಯುವ ಕೊಕ್ಕು
- ಗಿಂಡಿ = ಚಿಕ್ಕ ತಂಬಿಗೆ

Gurubasavaraj Online Kottur


Scanned with OKEN Scanner

- ಗಿಟ್ಟು = ಗಳಿಸು, ಪಡ
- ಗಿಣಿ = ಗಿಳಿ
- ಗಿರಕಿ = ತಿರುಗು
- ಗಿರಣಿ = ಧಾನ್ಯ ಬೀಸುವ ಯಂತ್ರ, ನೂಲು ಮಾಡುವ
- ಗಿರವಿ = ಅಡ (ಒತ್ತೆ) ಇಡುವುದು, ಅಡವು
- ಗುಂಡಿಗೆ = ಎದೆ, ಹೃದಯ, ಧೈರ್ಯ
- ಗುಜರಿ = ಹಳೆಯ ಸಾಮಾನುಗಳನ್ನು ಮಾರುವ ಸ್ಥಳ
- ಗುಟುರು = ಹೂಂಕರಿಸು, ಜೋರಾಗಿ ಧ್ವನಿ ಮಾಡು
- ಗುಡಪಾನಂ = ಬೆಲ್ಲದ ಪಾನಕ
- ಗುಡಿ = ಬಾವುಟ, ಧ್ವಜ, ತೋರಣ, ಕೇತನ
- ಗುಡಿಮನೆ = ಚಿಕ್ಕ ದೇವಸ್ಥಾನ
- ಗುಣಿ = ಡೊಳ್ಳು ಬಾರಿಸುವ ಮರದ ತುಂಡು
- ಗುನುಗು = ಸತತವಾಗಿ ಧ್ವನಿಮಾಡು
- ಗುಮ್ಮಾಗಿ = ಸುಮ್ಮನೆ, ಯಾರ ಬಳಿಯಲ್ಲಿ ಮಾತನಾಡದೇ
- ಗುರು = ದೊಡ್ಡದು, ಬೋಧಕ
- ಗುಲ್ಮ = ಪೊದೆ
- ಗುಳಿಗೆ = ಮಾತ್ರೆ
- ಗೂಗೆ = ಗೂಬೆ
- ಗೂಢಚಾರ = ಗುಪ್ತಚರ
- ಗೃಹ = ಮನೆ
- ಗೆರಟ = ತೆಂಗಿನ ಚಿಪ್ಪು
- ಗೇಯು = ದುಡಿಮೆ
- ಗೊಂಡೇವ = ಬಣ್ಣಬಣ್ಣದ ದಾರದ ಗೊಂಚಲು
- ಗೊಮ್ಮಟ ವ್ಯಕ್ತಿತ್ವ = ಉನ್ನತ ವ್ಯಕ್ತಿತ್ವ
- ಗೊರಬು = ಕಂಬಳಿ
- ಗೋಗರೆ = ದೈನ್ಯದಿಂದ ಬೇಡಿಕೊಳ್ಳು
- ಗೋಣು = ಕುತ್ತಿಗೆ
- ಗೋಷ್ಠಿ = ಮಾತುಕತೆ, ಸಂಭಾಷಣೆ, ಕಥಾಲಾಪ FDA 2019
- ಗೋಸಾಯಿ = ಸನ್ಯಾಸಿ, ಬೈರಾಗಿ
- ಗೌತಮನ ಗೋವು = ಬಡಕಲಾದ ಗೋವು
- ಗೌಪ್ಯ = ಗುಟ್ಟು, ರಹಸ್ಯ
- ಗ್ರನೇಡು = ಯುದ್ಧ ಸಾಧನಗಳು
- ಗ್ರಹಣ ಶಕ್ತಿ = ವಿಷಯವನ್ನು ತಿಳಿದುಕೊಳ್ಳುವ ಸಾಮರ್ಥ್ಯ
- ಘಟ್ಟ = ಮಣ್ಣಿನಪಾತ್ರೆ
- ಘನ = ಶ್ರೇಷ್ಠ, ದೊಡ್ಡ
- ಘನತೆ = ಗುರುತ್ವ, ಶ್ರೇಷ್ಠತೆ
- ಘರ್ಮಜಲ = ಬೆವರು FDA 2021
- ಘರಟ್ಟ = ಬೀಸುವಕಲ್ಲು Group C 2021
- ಘಳಿಗೆವಟ್ಟಲು = ಘಳಿಗೆಯನ್ನು ಸೂಚಿಸುವ ಬಟ್ಟಲು
- ಘಾತಕ = ದ್ರೋಹಿ
- ಘೀಳಿಟ್ಟು = ಕೂಗಿ
- ಘೂರ್ಣಿಸು = ಗರ್ಜಿಸು
- ಘೃತ = ತುಪ್ಪ GPSTR 2019
- ಘೋರ = ಆಪತ್ತು
- ಘ್ರಾಣೇಂದ್ರಿಯ = ಮೂಗು
- ಚಂಚಲತೆ = ಸ್ಥಿರವಲ್ಲದ
- ಚಂಡೆ = ಚರ್ಮವಾದ್ಯ
- ಚಂದ = ಚೆನ್ನಾಗಿ, ಚೆನ್ನ
- ಚೆಂಗೂಲಿ = ದಿನಗೂಲಿ ಕೆಲಸ
- ಚಕ್ಕಡಿ = ಎತ್ತಿನಗಾಡಿ Group C 2023
- ಚಕ್ರಮಂಡಿ = ಯಕ್ಷಗಾನ ನೃತ್ಯದ ಒಂದು ಹೆಜ್ಜೆ
- ಚಕ್ರಿ = ಚಕ್ರವರ್ತಿ
- ಚಟ್ಟ = ಶಿಬಿಕೆ FDA 2015
- ಚಟ್ಟರಿಂ = ಶಿಷ್ಯರಿಂದ
- ಚಣ್ಣ = ಚಡ್ಡಿ
- ಚತುರೋಪಾಯ = ಸಾಮ, ದಾನ
- ಚತುರ್ = ನಾಲ್ಕು
- ಚದುರ (ದ್ಭ) = ಚತುರ(ತ್ಸ) ಜಾಣ
- ಚದುರಂಗದಾಟ = ಬುದ್ಧಿವಂತಿಕೆ ಪ್ರದರ್ಶನದ ಒಂದು ಬಗೆಯ ಆಟ
- ಚಪರಾಸಿ = ಜವಾನ, ಸೇವಕ
- ಚಮತ್ಕಾರ = ಸೋಜಿಗ, ವಿಸ್ಮಯ, ಚತುರತೆ
- ಚರಟ = ಗಸಿ, ಕಾಫಿ ಸೋಸಿದ ನಂತರದ ಉಳಿಕೆ
- ಚರಣ = ಪಾದ
- ಚರಮ = ಕೊನೆಯ SDA 2021
- ಚರಿಗೆ = ಭಿಕ್ಷಾಟನೆ, ತಂಬಿಗೆ
- ಚರಿತ್ರಂ = ಕೆಲಸ
- ಚರಿತ್ರೆ = ಇತಿಹಾಸ
- ಚರಿಸು = ಸಂಚರಿಸು
- ಚರ್ವಣ = ಅಗಿದು ತಿನ್ನುವುದು
- ಚಾಗ = ತ್ಯಾಗ
- ಚಾಣ = ಉಳಿ, ಟಂಕ
- ಚಾತುರಂಗ = ಸೈನ್ಯದ ನಾಲ್ಕು ಅಂಗಗಳು (ಆನೆ, ಕುದುರೆ, ರಥ, ಕಾಲಾಳಿನ ಬಲ)
- ಚಾವಡಿ = ಜಗಲಿ
- ಚಾಳಿ = ನಡವಳಿಕೆ, ವರ್ತನೆ
- ಚಿಂದಿ = ಚೂರು
- ಚಿಗುರು = ಕುಡಿ, ಪಲ್ಲವ
- ಚಿತಾಭಸ್ಮ = ಬೂದಿ
- ಚಿತಾವಣೆ = ಇತರರನ್ನು ಪ್ರಚೋದಿಸುವುದು
- ಚಿತ್ತ = ಮನಸ್ಸು
- ಚಿತ್ತನಿರೋಧ = ಮನಸನ್ನು ನಿಗ್ರಹಿಸುವುದು
- ಚಿತ್ತಾರ = ಚಿತ್ರ
- ಚಿಮಣಿ ದೀಪ = ಸೀಮೆಎಣ್ಣೆ ದೀಪ

Gurubasavaraj Online Kottur



Scanned with OKEN Scanner

# 2 ದ್ರಾವಿಡ ಭಾಷೆ & ಕನ್ನಡ ಭಾಷೆಯ ಹುಟ್ಟು


**SDA, FDA, Group C, KTET, KSET, HSTR ಅಭ್ಯರ್ಥಿಗಳು ತಪ್ಪದೇ ಕಲಿಯಬೇಕು.**

ಭಾರತದಲ್ಲಿ ಅನೇಕ ಭಾಷೆಗಳಿದ್ದು ಈ ಎಲ್ಲಾ ಭಾಷೆಗಳು ಒಂದು ಮೂಲ ಭಾಷೆಯಾಗಿಯೂ ಅಥವಾ ಒಂದು ಮೂಲ ಭಾಷೆಯಿಂದ ಹೊರಬಂದ ಉಪಭಾಷೆಯಾಗಿರುತ್ತದೆ. ಇವುಗಳಲ್ಲಿ ಮುಖ್ಯವಾಗಿ ದಕ್ಷಿಣ ಭಾರತದ ಭಾಗದಲ್ಲಿ ಬಳಸಲ್ಪಡುವ ಬಹುತೇಕ ಭಾಷೆಗಳಿಗಳು ಮೂಲ ದ್ರಾವಿಡ ಭಾಷಾ ವರ್ಗಕ್ಕೆ ಸೇರಿದ ಉಪಭಾಷೆಗಳಾಗಿವೆ. ಉದಾಹರಣೆಗೆ **ಕನ್ನಡ, ತೆಲುಗು, ತಮಿಳು** ಇತ್ಯಾದಿ..

ಸುಮಾರು **2500** ವರ್ಷಗಳ ಹಿಂದೆ ಮಾತೃಭಾಷೆಯಿಂದ ಕವಲೊಡೆದು ಕನ್ನಡ ಭಾಷೆಯು ಸಂಸ್ಕೃತದ ಪೋಷಣೆಯೊಂದಿಗೆ ಒಂದು ಸ್ವತಂತ್ರ ಭಾಷೆಯಾಗಿ ಬೆಳೆದು ಬಂದಿದೆ. ಇಂದು ನಾವು ಮಾತನಾಡುವ ಕನ್ನಡ ದ್ರಾವಿಡ ಭಾಷೆಯ ಒಂದು ಕವಲು.

ಭಾರತದಲ್ಲಿರುವ ಅನೇಕ ಭಾಷಾಲಿಪಿಗಳಿಗೂ ಅಶೋಕನ ಶಾಸನಗಳಲ್ಲಿ ವ್ಯಾಪಕವಾಗಿ ಬಳಕೆಯಾಗಿರುವ **ಬ್ರಾಹ್ಮಿ ಲಿಪಿ**ಯೇ ಮೂಲ. ಕನ್ನಡದ ಅಕ್ಷರಗಳೂ ಬ್ರಾಹ್ಮಿ ಲಿಪಿಯಿಂದಲೇ ರೂಪಗೊಂಡಿವೆ.

ದ್ರಾವಿಡ ಭಾಷೆಗಳು ಭಾರತೀಯ ಉಪಖಂಡದ ಒಂದು ಭಾಷಾ ಕುಟುಂಬವಾಗಿದೆ. ದ್ರಾವಿಡ ಭಾಷೆಗಳು ದಕ್ಷಿಣ ಭಾರತ, ಮಧ್ಯ ಭಾರತ, ಶ್ರೀಲಂಕಾ, ಪಾಕಿಸ್ತಾನ, ನೇಪಾಳ ಪ್ರಾಂತ್ಯಗಳಲ್ಲಿ ಬಳಕೆಯಲ್ಲಿವೆ. ದ್ರಾವಿಡ ಭಾಷೆಯನ್ನು ಒಂದು **ಸ್ವತಂತ್ರ ಭಾಷಾ ಕುಟುಂಬ**ವೆಂದೇ ಪರಿಗಣಿಸಲಾಗಿದೆ.




- ಮೊದಲ ಬಾರಿಗೆ ದ್ರಾವಿಡ ಭಾಷೆಗಳ ಅಧ್ಯಯನಕ್ಕೆ ತಳಹದಿ ಹಾಕಿದವರು ಮತ್ತು **ದ್ರಾವಿಡ ಭಾಷೆಗಳು ಸ್ವತಂತ್ರ ಭಾಷಾ ವರ್ಗ**ಕ್ಕೆ ಸೇರುತ್ತವೆ ಎಂದು **1816**ರಲ್ಲಿ **"ಫ್ರಾನ್ಸಿಸ್ ವೈಟ್ ಎಲ್ಲಿಸ್"** ತಿಳಿಸಿದರು.
- ದ್ರಾವಿಡ ಭಾಷೆಯು **ಅಂಟು ಭಾಷಾ** ವರ್ಗಕ್ಕೆ ಸೇರಿದ ಭಾಷೆಯಾಗಿದೆ.

ಅಂದರೆ ದ್ರಾವಿಡ ಭಾಷೆಯಲ್ಲಿ ಪ್ರಕೃತಿ ಮತ್ತು ಪತ್ಯಯವನ್ನು ಸೇರಿಸಿ ಪದಗಳನ್ನು ರಚಿಸಲಾಗುತ್ತದೆ ಆದ್ದರಿಂದ ದ್ರಾವಿಡ ಭಾಷೆಯನ್ನು ಅಂಟು ಭಾಷೆ ಎಂದು ಕರೆಯುತ್ತಲಾಗುತ್ತದೆ. ದ್ರಾವಿಡ ಭಾಷೆಗಳು ಭಾರತೀಯ ಉಪಖಂಡದ ಒಂದು ಭಾಷಾ ಕುಟುಂಬವಾಗಿದ್ದು, ಪ್ರಸ್ತುತ ದ್ರಾವಿಡ ಭಾಷಾ ವರ್ಗವು ಸುಮಾರು **25** ಭಾಷೆಗಳನ್ನು ಒಳಗೊಂಡಿದೆ. ಹಾಗೂ ಪ್ರಪಂಚದಲ್ಲಿನ ಹಿರಿಯ ಭಾಷಾ ಪರಿವಾರಗಳ ಶ್ರೇಣಿಯಲ್ಲಿ ಇದಕ್ಕೆ 5ನೆಯ ಸ್ಥಾನವಿದೆ. ಎಡದಿಂದ ಬಲಕ್ಕೆ ಬರೆಯುವುದು ದ್ರಾವಿಡ ಭಾಷೆಯ ಒಂದು ವಿಶೇಷತೆ.

ಈಗ ಗೊತ್ತಾಗಿರುವ **25** ದ್ರಾವಿಡ ಭಾಷೆಗಳು **ಕನ್ನಡ, ತೆಲುಗು, ತಮಿಳು, ಮಲಯಾಳಂ, ತುಳು, ಕೊಡಗು, ಮಾಲ್ತೊ, ಬ್ರಾಹುಇ, ಕುರುಖ್, ಒಲ್ಲಾರಿ, ಗದಬ, ಪೆಂಗೊ, ಕುವಿ, ಕುಯಿ, ಕೊಯ, ಕೊರಗ ಕೊಂಡ, ಕೊಲಾಮಿ, ಕೋತ, ಬಡಗ, ಗೋಂಡಿ, ಮಂಡ, ನಾಯ್ಕಿ, ತೊದ, ಪಾರ್ಜಿ** ಇವುಗಳಲ್ಲಿ ಮೊದಲ ನಾಲ್ಕು ಭಾಷೆಗಳು ಸಾಹಿತ್ಯಿಕ ಭಾಷೆಗಳು.

ಈ ಭಾಷೆಗಳಿಗೆ ಸಾಕಷ್ಟು ಪ್ರಾಚೀನವಾದ ಲಿಖಿತ ಸಾಹಿತ್ಯವಿದೆ. ಇವುಗಳಿಗೆ ಮೊದಲಿಂದಲೂ ತಮ್ಮದೇ ಆದ ಲಿಪಿ ಕೂಡ ಇದೆ. ತುಳು ಮತ್ತು ಕೊಡಗು ಭಾಷೆಗಳು ಅಲಿಪಿ ಭಾಷೆಗಳಾದರು ಶ್ರುರೂಪಿಯಾದ ಶ್ರವ್ಯ ಸಾಹಿತ್ಯ ಉಳಿದು ಬಂದಿರುವುದರಿಂದ ಇವನ್ನು ಸಾಹಿತ್ಯಿಕ ದ್ರಾವಿಡ ಭಾಷೆಗಳ ಜೊತೆಗೆ ಸೇರಿಸುವುದು ರೂಢಿ. ಇನ್ನುಳಿದ ಹತ್ತೊಂಬತ್ತು ಭಾಷೆಗಳನ್ನು ಶ್ರವಣ ಭಾಷೆಗಳೆಂದು ನಿರ್ದೇಶಿಸಿದ್ದಾರೆ. ಇವನ್ನು ಅಸಂಸ್ಕೃತ ಅಥವಾ ಅಲಿಪಿ ಭಾಷೆಗಳೆಂದೂ ಕರೆಯುತ್ತಾರೆ.

**ಭಾಷಾ ಸಮ್ಮಾನ್ ಗೌರವ ಕನ್ನಡ ಸಾಹಿತ್ಯ ಪ್ರಶಸ್ತಿ – ಜಿ. ವೆಂಕಟಸುಬ್ಬಯ್ಯ (ಪ್ರಾಚೀನ ಮತ್ತು ಮಧ್ಯಕಾಲೀನ ಸಾಹಿತ್ಯ)**

Gurubasavaraj Online Kottur



Scanned with OKEN Scanner

ದ್ರಾವಿಡ ಭಾಷೆಗಳನ್ನು ಅವು ಭಾರತದ ಯಾವ ಯಾವ ಭಾಗದಲ್ಲಿ ಬಳಕೆಯಲ್ಲಿವೆ ಎಂಬ ಭೌಗೋಳಿಕ ಧಾರದಿಂದ ಭಾರತದಲ್ಲಿ 3 ರೀತಿಯ ದ್ರಾವಿಡ ಭಾಷೆಗಳನ್ನು ನಾವು ಕಾಣಬಹುದು. ದ್ರಾವಿಡ ಭಾಷೆಗೆ ತೌಲನಿಕ ವ್ಯಾಕರಣ ಬರೆದವರು – **ಡಾ. ಕಾಲ್ಡ್ ವೆಲ್**

**ದ್ರಾವಿಡ ಭಾಷೆಯನ್ನು 3 ವಿಧವಾಗಿ ವಿಂಗಡಿಸಬಹುದು**

| 1. ದಕ್ಷಿಣ ದ್ರಾವಿಡ ಭಾಷೆಗಳು | 2. ಮಧ್ಯ/ದಕ್ಷಿಣ ದ್ರಾವಿಡ ಭಾಷೆಗಳು | 3. ಉತ್ತರ ದ್ರಾವಿಡ ಭಾಷೆಗಳು |
|---|---|---|
| ತಮಿಳು | ತೆಲುಗು (ಚೆಂಚು) | ಬ್ರಾಹುಯಿ |
| ಕನ್ನಡ | ಗೋಂದಿ (ಮದಿಯಾ, ಮುರಿಯ, ಪರ್ಧಾನ, ಖಿರ್ವಾರ, ನಾಗರ್ಚಾಲ್) | ಮಾಲ್ತೊ (ಕುಮರ್ಭಾಗ ಪಹರಿಯ) (ಸೌರಿಯಾ ಪಹರಿಯ) |
| ತೆಲಗು | ಕೊಂಡ, ಮುಖ-ದೊರ | ಕುರುಖ್ (ಓರಾನ್, ಕಿಸಾನ್) |
| ಮಲಯಾಳಂ | ಕುಯಿ, ಕುವಿ, ಕೊಯಾ | |
| | ಮುಂಡ, ಪೆಂಗೊ | |
| ತುಳು (ಕೊರಗ, ಬೆಳ್ಳಾರೆ, ಕುಡಿಯಾ) | **ಮಧ್ಯ ದ್ರಾವಿಡ ಭಾಷೆಗಳು** | |
| (ಕೊಡವ, ಕುರುಂಬ) (ಕೋಟ– ತೋದ) | ಕೊಲಮಿ-ನಾಯ್ಕಿ | |
| ಪಳಿಯನ್, ಬಡಗ, ಥಕ್ | ಪರ್ಜಿ-ಗಡಬ (ಒಳ್ಳಾರಿ) ದುರುವ | |

**ನೆನಪಿಡಿ**

**ಪಂಚ ದಕ್ಷಿಣ ದ್ರಾವಿಡ ಭಾಷೆಗಳ ಪ್ರಾಚೀನತೆಯ ಕ್ರಮಾನುಗತ**

**1.** ತಮಿಳು **2.** ಕನ್ನಡ **3.** ತೆಲುಗು **4.** ಮಲಯಾಳಂ **5.** ತುಳು

- ದಕ್ಷಿಣ ದ್ರಾವಿಡ ಭಾಷೆಗಳಲ್ಲಿ ತಮಿಳು ಅತ್ಯಂತ ಪ್ರಾಚೀನ ಭಾಷೆಯಾಗಿದ್ದು, ಇದಕ್ಕಿರುವ ಪುರಾವೆಗಳಲ್ಲಿ **ತೊಲ್ಕಾಪ್ಪಿಯಾ** ರವರು ಬರೆದ **'ತೊಲ್ಕಾಪ್ಪಿಯಂ'** ಅತ್ಯಂತ ಪ್ರಾಚೀನ ವ್ಯಾಕರಣ ಗ್ರಂಥವಾಗಿದೆ. ಇದರ ಕಾಲ ಕ್ರಿ.ಪೂ 3ನೇ ಶತಮಾನ.
- ವಿದೇಶಗಳಲ್ಲಿ ಹೆಚ್ಚು ಬಳಕೆಯಲ್ಲಿರುವ ದ್ರಾವಿಡ ಭಾಷೆಯೆಂದರೆ ಅದು **ಬ್ರಾಹುಯಿ** ಪ್ರಸುತ ಪಾಕಿಸ್ತಾನದ ಒಂದು ಭಾಗವಾದ ಬಲೂಚಿಸ್ತಾನದಲ್ಲಿ ಬ್ರಾಹುಯಿ ಭಾಷೆಯನ್ನು ಮಾತನಾಡುತ್ತಾರೆ.
- ದ್ರಾವಿಡ ಭಾಷೆಯಲ್ಲಿ ತಮಿಳನ್ನು ಹೊರತು ಪಡಿಸಿದರೆ ಕನ್ನಡವು ಅತ್ಯಂತ ಪ್ರಾಚೀನ ಭಾಷೆಯಾಗಿದೆ. ಕನ್ನಡದ ಮೊದಲ ವ್ಯಾಕರಣ ಗ್ರಂಥ **ಶಬ್ದಮಣಿದರ್ಪಣ** ಕೃತಿಕಾರ **'ಕೇಶಿರಾಜ'** ಕಾಲ: **1260 / 13ನೇ** ಶತಮಾನ.
- ದ್ರಾವಿಡ ಭಾಷೆಗಳಲ್ಲಿ ತಮಿಳು ಭಾಷೆಯು ಪೂರ್ವದ ಹಳಗನ್ನಡದೊಂದಿಗೆ ಹೆಚ್ಚು ಹತ್ತಿರವಾಗಿದೆ. ಅದೇ ರೀತಿ ಕನ್ನಡ ಭಾಷೆಯಲ್ಲಿ ಸಂಸ್ಕೃತ ಭಾಷೆಯ ಪ್ರಭಾವವು ಹೆಚ್ಚಾಗಿದ್ದರು, ತಮಿಳು ಭಾಷೆಯ ಮೇಲೆ ಸಂಸ್ಕೃತದ ಪ್ರಭಾವ ಅತಿ ಕಡಿಮೆ ಇದೆ.
- ದ್ರಾವಿಡ ಭಾಷೆಯಲ್ಲಿ ಅತಿ ಹೆಚ್ಚು ಜನರು ಮಾತನಾಡುವ ಭಾಷೆಯೆಂದರೆ ತೆಲಗು.
- **ಬ್ರಾಹ್ಮಿ ಲಿಪಿ**ಯಿಂದ ರೂಪುಗೊಂಡ ಕನ್ನಡ ಲಿಪಿಯನ್ನು ಉಪಯೋಗಿಸಿ ಕನ್ನಡ ಭಾಷೆಯನ್ನು ಬರೆಯಲಾಗುತ್ತದೆ. **ವಿನೋಬಾ ಭಾವೆ** ಕನ್ನಡ ಲಿಪಿಯನ್ನು **ಲಿಪಿಗಳ ರಾಣಿ**ಯೆಂದು ಹೊಗಳಿದ್ದಾರೆ.
- ದ್ರಾವಿಡ ಭಾಷೆಗಳು ಯಾವುದೇ ಬೇರೆಯ ಭಾಷಾಕುಟುಂಬಕ್ಕೆ ಸೇರಿದೆಯೇ ಎಂದು ತಿಳಿದುಕೊಳ್ಳಲು ಬಹಳ ಸಂಶೋಧನೆಗಳು ನಡೆದಿವೆಯಾದರೂ, ಖಚಿತವಾದ ಸಂಬಂಧವು ಈವರೆಗೂ ದೊರೆತಿಲ್ಲ. ಹೀಗಾಗಿ ಇದನ್ನು ಒಂದು **ಸ್ವತಂತ್ರ ಭಾಷಾ ಕುಟುಂಬ**ವೆಂದೇ ಪರಿಗಣಿಸಲಾಗಿದೆ.

**ದ್ರಾವಿಡ ಭಾಷೆಯಲ್ಲಿ ಇರುವ ವ್ಯಾಕರಣದ ಮುಖ್ಯ ಅಂಶಗಳು**

- ದ್ರಾವಿಡ ಭಾಷೆಯಲ್ಲಿ ಲಿಂಗವ್ಯವಸ್ಥೆಯ ತಳಹದಿ. ಬುದ್ಧಿಇರುವ (ಸಬುದ್ಧಿಕ) ಮತ್ತು ಬುದ್ಧಿಇಲ್ಲದಿರುವ (ಅಬುದ್ಧಿಕ) ಆಗಿದೆ.
- ದ್ರಾವಿಡ ಭಾಷೆಯಲ್ಲಿ ಲಿಂಗವ್ಯವಸ್ಥೆಯಿಲ್ಲದ ಭಾಷೆಗಳೆಂದರೆ ತೊದ ಮತ್ತು ಬ್ರಾಹೂಈ
- ಪೂರ್ವದ್ರಾವಿಡದ ಕ ಕಾರವು ತಾಲವ್ಯೀಕರಣಗೊಳ್ಳದ ಭಾಷೆ – **ಕನ್ನಡ.**
- ದ್ರಾವಿಡ ಭಾಷೆಗಳ ಕ್ರಿಯಾ ಪದಗಳಲ್ಲಿರುವ ಕಾಲಗಳ ಸಂಖ್ಯೆ – **ಎರಡು**



Gurubasavaraj Online Kottur
Scanned with OKEN Scanner

**ನೆನಪಿಡಿ**

ಕನ್ನಡ, ತೆಲುಗು, ತಮಿಳು, ಮಲಯಾಳಂ & ತುಳು ಈ ಐದು ಭಾಷೆಗಳನ್ನು ಪಂಚ-ದ್ರಾವಿಡ ಭಾಷೆಗಳೆಂದು ಕರೆಯುತ್ತಾರೆ.

**ಸಂವಿಧಾನದ 8ನೇ ಪರಿಚ್ಛೇದದಂತೆ ಭಾರತದಲ್ಲಿರುವ ಒಟ್ಟು 22 ಅಧಿಕೃತ ಭಾಷೆಗಳಲ್ಲಿ ಕನ್ನಡವು ಕೂಡ ಒಂದು**

## ಭಾಷಾವಿಜ್ಞಾನದ ಕೃತಿಗಳು

| ಕೃತಿಗಳು | ವಿದ್ವಾಂಸರು |
|---|---|
| ದ್ರಾವಿಡ ಭಾಷಾ ವಿಜ್ಞಾನ | ಹಂ. ಪ. ನಾಗರಾಜಯ್ಯ |
| ಭಾಷಾ ವಿಜ್ಞಾನ | ಹಂ. ಪ. ನಾಗರಾಜಯ್ಯ |
| ಕನ್ನಡಭಾಷಾ ವಿವೇಚನೆ | ವ್ಹಿ. ಜಿ. ಪೂಜಾರ |
| ದ್ರಾವಿಡ ಭಾಷಾ ವ್ಯಾಸಂಗ<br>ಕನ್ನಡ ಭಾಷಾ ವ್ಯಾಸಂಗ | ಸಂಗಮೇಶ ಸವದತ್ತಿ ಮಠ |
| ಉಪಭಾಷೆ | ಕೃಷ್ಣಪರಮೇಶ ಭಟ್ಟ |
| ಕನ್ನಡ ಭಾಷಾ ಸ್ವರೂಪ | ಕೆ. ಅನಂತರಾಮು |
| ಶಾರದೆಯ ಸಂಸಾರ | ಶ್ರೀರಂಗ |
| ಭಾಷಾ ವಿಜ್ಞಾನದ ಮೂಲ ತತ್ವಗಳು | ಎಂ. ಚಿದಾನಂದಮೂರ್ತಿ |
| ಕನ್ನಡ ಭಾಷಾ ಚರಿತ್ರೆ | ಸಾ. ಶಿ. ಮರುಳಯ್ಯ |
| ವರ್ಣನಾತ್ಮಕ ವ್ಯಾಕರಣದ ಮೂಲತತ್ವಗಳು | ಎಚ್. ಎಸ್. ಬಿಳಿಗಿರಿ<br>ಆಲೋಕ – 1, 2 |
| ಕನ್ನಡ ಭಾಷಾಶಾಸ್ತ್ರ | ರಾ. ಯ. ಧಾರವಾಡಕರ್ |
| ಕನ್ನಡ ವಾಕ್ಯಗಳು | ಡಿ. ಎನ್ . ಶಂಕರಭಟ್ಟ |
| ಕನ್ನಡ ಕಲ್ಪಿತ ಭಾಷೆಯ ಚರಿತ್ರೆ | ಡಿ. ಎನ್. ಶಂಕರಭಟ್ಟ |
| ಜನಪದ ಭಾಷಾ ಸಮೀಕ್ಷೆ | ಸಂಗಮೇಶ ಸವದತ್ತಿಮಠ |
| ವರ್ಣನಾತ್ಮಕ ಭಾಷಾ ವಿಜ್ಞಾನ | ಜಿ. ಎಸ್ . ಕುಳ್ಳಿ |
| ಐತಿಹಾಸಿಕ ಭಾಷಾ ವಿಜ್ಞಾನ | ಜಿ. ಎಸ್ . ಕುಳ್ಳಿ |
| ಸಂಕ್ಷಿಪ್ತ ಕನ್ನಡ ಭಾಷೆಯ ಚರಿತ್ರೆ | ಎಂ. ಎಚ್ . ಕೃಷ್ಣಯ್ಯ |
| ಕನ್ನಡ ಭಾಷಾ ಚರಿತ್ರೆ | ಕೆ. ಕೆಂಪೇಗೌಡ |
| ಕರ್ನಾಟಕ ಸಂಸ್ಕೃತಿ ಸಮೀಕ್ಷೆ | ಎಚ್. ತಿಪ್ಪೇರುದ್ರಸ್ವಾಮಿ |
| ಡಿ.ಎಲ್. ನರಸಿಂಹಾಚಾರ್ | ಶಬ್ದವಿಹಾರ |
| ತೌಲನಿಕ ವ್ಯಾಕರಣ | ಡಾಕ್ಟರ್ ಕಾಲ್ಡ್ ವೆಲ್ |

## ಈ ಹಿಂದೆ ನಡೆದ ಪರೀಕ್ಷೆಗಳಲ್ಲಿ ಈ ವಿಷಯದ ಮೇಲೆ ಕೇಳಲಾದ ಪ್ರಶ್ನೆಗಳು

**1. ಕನ್ನಡವು --------ಜನಾಂಗಕ್ಕೆ ಸಂಬಂಧಿಸಿದ ಭಾಷೆಯಾಗಿದೆ.** FDA 1991

(1) ಆರ್ಯ (2) ದ್ರಾವಿಡ
(3) ಆಸ್ಟ್ರಿಕ್ (4) ನೀಗ್ರೋ

**2. ಕನ್ನಡವು ------- ಭಾಷಾ ವರ್ಗಕ್ಕೆ ಸೇರಿದ ಭಾಷೆಯಾಗಿದೆ.** FDA 1997

(1) ಇಂಡೋ ಯೂರೋಪಿಯನ್ (2) ದ್ರಾವಿಡ
(3) ಸೈನೋ ಟಿಬೆಟಿಯನ್ (4) ಆಸ್ಟ್ರೋ ಏಷಿಯಾಟಿಕ

**3. ದ್ರಾವಿಡ ಭಾಷೆಗಳಲ್ಲಿ ಮೊತ್ತಮೊದಲ ವ್ಯಾಕರಣ ತಿರುಕ್ಕುರಳ್** FDA 2005

(1) ನನ್ನೂಲ್ (2) ಲೀಲಾತಿಲಕಂ
(3) ತೊಲ್ಕಾಪಿಯಂ (4) ಆಂಧ್ರ ಚಿಂತಾಮಣಿ

**4. ಪೂರ್ವದ ಹಳಗನ್ನಡವು-------- ಭಾಷೆಗೆ ಹತ್ತಿರವಾಗಿದೆ.**

(1) ತಮಿಳು (2) ಸಂಸ್ಕೃತ
(3) ಮಲಯಾಳವು (4) ತೆಲುಗು

**5. ಬ್ರಾಹೂ ಈ ಭಾಷೆಯು ------ ಭಾಷಾ ವರ್ಗಕ್ಕೆ ಸೇರಿದ ಭಾಷೆಯಾಗಿದೆ.** FDA 2005

(1) ಸೈನೊ-ಟಿಬೆಟನ್ (2) ಉತ್ತರ-ದ್ರಾವಿಡ
(3) ದಕ್ಷಿಣ-ದ್ರಾವಿಡ (4) ಆಸ್ಟ್ರೋ-ಏಷಿಯಾಟಿಕ್

**6. ದ್ರಾವಿಡ ಭಾಷೆಗಳಲ್ಲಿ ಅತಿ ಪ್ರಾಚೀನವಾದ ಭಾಷೆ** FDA 2015

(1) ಕನ್ನಡ (2) ಮಲೆಯಾಳಂ
(3) ತಮಿಳು (4) ತೆಲುಗು

**7. ತಮಿಳನ್ನು ಹೊರತು ಪಡಿಸಿದರೆ ಪ್ರಾಚೀನತಮವಾದ ದ್ರಾವಿಡ ಭಾಷೆ ------** FDA 2017

(1) ತೆಲುಗು (2) ಮಲೆಯಾಳಂ
(3) ತುಳು (4) ಕನ್ನಡ

**8. ಕನ್ನಡ ಭಾಷೆಯು ಈ ಭಾಷಾ ವರ್ಗಕ್ಕೆ ಸೇರುತ್ತದೆ.** Group C 2016

(1) ಮಧ್ಯ ದ್ರಾವಿಡ (2) ಇಂಡೋ ಆರ್ಯನ್
(3) ಉತ್ತರ ದ್ರಾವಿಡ (4) ದಕ್ಷಿಣ ದ್ರಾವಿಡ

**9. ಸಂಸ್ಕೃತ ಭಾಷೆಯ ಪ್ರಭಾವ ಅತಿ ಕಡಿಮೆ ಇರುವ ದ್ರಾವಿಡ ಭಾಷೆ** Group C 2017

(1) ಮಲೆಯಾಳಂ (2) ತಮಿಳು
(3) ಕನ್ನಡ (4) ತೆಲುಗು

**10. ಉತ್ತರ ದ್ರಾವಿಡ ಭಾಷಾವರ್ಗಕ್ಕೆ ಸೇರಿದ ಭಾಷೆ** Group C 2017

(1) ಕೊಲಾಮಿ (2) ಕೋತ

Gurubasavaraj Online Kottur



Scanned with OKEN Scanner

(3) ಪೆಂಗೊ (4) ಬ್ರಾಹೂಈ

**11.** ಉತ್ತರ ದ್ರಾವಿಡ ಭಾಷೆಗಳಲ್ಲಿ ಸೇರುವ ಭಾಷೆಗಳೆಂದರೆ: **Group C 2017**

(1) ಕುಈ, ಕೊಲಾಮಿ, ಕೊಂಡ
(2) ಕನ್ನಡ, ತೆಲುಗು, ತಮಿಳು
(3) ಕುರುಖ್, ಮಾಲ್ತೊ, ಬ್ರಾಹೂಈ
(4) ಸಂಸ್ಕೃತ, ಹಿಂದಿ, ಬಂಗಾಳಿ

**12.** 'ಕೊಲಾಮಿ' – ಇದು ಯಾವ ಭಾಷಾವರ್ಗಕ್ಕೆ ಸೇರುತ್ತದೆ? **Group C 2021**

(1) ದ್ರಾವಿಡ ಭಾಷಾವರ್ಗ (2) ಆಸ್ಟ್ರೇಲಿಯನ್ ಭಾಷಾವರ್ಗ
(3) ನೈಜರ್ ಕಾಂಗೋ ವರ್ಗ (4) ಬಾಸ್ಕ್ ಭಾಷಾವರ್ಗ

**13.** ಕನ್ನಡ ಲಿಪಿಯ ಮೂಲ ------ **Group C 2016**

(1) ಖರೋಷ್ಠಿ (2) ನಾಗರಿ
(3) ಬ್ರಾಹ್ಮಿ (4) ದೇವನಾಗರಿ

**14.** ಇವು ದಕ್ಷಿಣ ದ್ರಾವಿಡ ಭಾಷೆಗಳು

(1) ತೊದ, ಮಲಯಾಳಂ (2) ತಮಿಳು, ಗದಬ
(3) ಪರ್ಜಿ, ಕನ್ನಡ (4) ತೆಲುಗು, ಮುಂಡ

**15.** ದೀರ್ಘಕಾಲದಿಂದಲೂ ಭಾರತದಿಂದ ಹೊರಗೆ ವ್ಯವಹಾರದಲ್ಲಿರುವ ದ್ರಾವಿಡ ಭಾಷೆ **Group C 2016**

(1) ಕುರುಕ್ (2) ಮಲ್ತೋ
(3) ಬ್ರಾಹೂಈ (4) ಕೋಲಾಮಿ

**16.** ಕಾರ್ನ್ ವಾಲೀಸ್ ಕನ್ನಡ ಶಾಸನ ಸಂಪುಟಗಳನ್ನು ಹೊರತಂದಿದ್ದಾರೆ. **FDA 2008**

(1) ಇ. ಪಿ. ರೈಸ್ (2) ಬಿ. ಎಲ್. ರೈಸ್
(3) ಕಿಟ್ಟೆಲ್ (4) ಝೀಗ್ಲರ್

**17.** ಭಾಷಾ ವಿಜ್ಞಾನದ ಮೂಲತತ್ವಗಳು ಕೃತಿಯನ್ನು ರಚಿಸಿದವರು **FDA 2019**

(1) ಕುಶಾಲಪ್ಪ ಗೌಡ (2) ರಾಜೇಶ್ವರಿ ಎಂ
(3) ಡಾ. ಸೌದತ್ತಿ ಮಠ (4) ಚಿದಾನಂದಮೂರ್ತಿ

**18.** ಕರ್ನಾಟಕ ಸಂಸ್ಕೃತಿ ಸಮೀಕ್ಷೆ ಎಂಬ ಗ್ರಂಥವನ್ನು ಬರೆದರವು. **SDA 2008**

(1) ಎಂ, ಚಿದಾನಂದ ಮೂರ್ತಿ (2) ಎಂ.ಎಂ. ಕಲಬುರ್ಗಿ
(3) ಎಂ. ಮರಿಯಪ್ಪಭಟ್ಟ (4) ತಿಪ್ಪೇರುದ್ರಸ್ವಾಮಿ

**19.** ಕೆಲವು ಕನ್ನಡ ಅಪೂರ್ವ ಪದಗಳ ಅರ್ಥ & ನಿಷ್ಪತ್ತಿಯನ್ನು ಕುರಿತ ಗ್ರಂಥ 'ಶಬ್ದವಿಹಾರ'ದ ಕರ್ತೃ **Group C 2017**

(1) ಡಿ.ಎಲ್.ಎನ್ (2) ತೀ.ನಂ.ಶ್ರೀ
(3) ಪು.ತಿ.ನ. (4) ಹಾ.ಮಾ.ನಾ

**20.** ದೀರ್ಘಕಾಲದಿಂದಲೂ ಭಾರತದಿಂದ ಹೊರಗೆ ವ್ಯವಹಾರದಲ್ಲಿರುವ ದ್ರಾವಿಡ ಭಾಷೆ **HSTR 2009**

(1) ಬ್ರಾಹೂಈ (2) ಕೋಲಾಮಿ
(3) ಕುರುಕ (4) ಮಾಲ್ತೋ

**21.** ದಕ್ಷಿಣ ದ್ರಾವಿಡ ಭಾಷೆಗಳು ಇವು **KTET 2015**

(1) ಕನ್ನಡ, ಸಂಸ್ಕೃತಿ, ತೆಲುಗು, ತಮಿಳು, ತುಳು
(2) ತಮಿಳು, ತೆಲಗು, ತುಳು, ಮರಾಠಿ, ಮಲೆಯಾಳಂ
(3) ಸಂಸ್ಕೃತಿ, ಮರಾಠಿ, ತೆಲಗು, ತುಳು, ಕೊಂಕಣಿ
(4) ಕನ್ನಡ, ತಮಿಳು, ತೆಲಗು, ಮಲಯಾಳಂ, ತುಳು

**22.** ಕನ್ನಡ ಈ ಭಾಷಾ ವರ್ಗಕ್ಕೆ ಸೇರಿದೆ **Group C 2023**

(1) ದಕ್ಷಿಣ ದ್ರಾವಿಡ (2) ಮದ್ಯದ್ರಾವಿಡ
(3) ಉತ್ತರ ದ್ರಾವಿಡ (4) ಇಂಡೋ ಆರ್ಯನ

**23.** ಕನ್ನಡ ಲಿಪಿಯು ಈ ಮೂಲದಿಂದ ಬಂದದ್ದು **ಸ.ಪ್ರಾಥ.ಶಿಕ್ಷಕ 2016**

(1) ಬ್ರಾಹ್ಮಿ (2) ಸೆಮೆಟಿಯಾ ಲಿಪಿ
(3) ಗ್ರೀಕ್ ಲಿಪಿ (4) ಯವನಾನಿ

## ಉತ್ತರಗಳು

| | | | | |
|---|---|---|---|---|
| 1) 2 | 2) 2 | 3) 3 | 4) 1 | 5) 2 |
| 6) 3 | 7) 4 | 8) 4 | 9) 2 | 10) 4 |
| 11) 3 | 12) 1 | 13) 3 | 14) 1 | 15) 3 |
| 16) 2 | 17) 4 | 18) 4 | 19) 1 | 20) 1 |
| 21) 4 | 22) 1 | 23) 1 | | |

## ನೆನಪಿಡಿ

**ಕಿರುತೆರೆ ವಾಹಿನಿ**

- **1994 ರಲ್ಲಿ ಕನ್ನಡದ ಮೊದಲ ಕಿರುತೆರೆ ವಾಹಿನಿ ಡಿಡಿ ಚಂದನ ದೂರದರ್ಶನ ಪ್ರಾರಂಭ.**
- ಸಂಸ್ಕೃತ & ಕನ್ನಡದಲ್ಲಿ ಚಂದನ ಎಂದರೆ ಶ್ರೀಗಂಧ.
- ಧ್ಯೇಯವಾಕ್ಯ: ಇದು ಕನ್ನಡ ವಾಹಿನಿ

**ಆಕಾಶವಾಣಿ**

- ಆಕಾಶವಾಣಿಯಲ್ಲಿ ಮಾತನಾಡಿದ ಮೊದಲ ಕನ್ನಡಿಗ **ಡಾಕ್ಟರ್ ಕೆ.ವಿ ಪುಟ್ಟಪ್ಪ ಅಥವಾ ಕುವೆಂಪು**
- ರೇಡಿಯೋದ ವಿಷಯದಲ್ಲಿ **"ಆಕಾಶವಾಣಿ"** ಶಬ್ದವನ್ನು ಎಂ.ವಿ. **ಗೋಪಾಲಸ್ವಾಮಿ 1936**ರಲ್ಲಿ ಮೊದಲು

Gurubasavaraj Online Kottur



Scanned with OKEN Scanner